ವಿಶ್ವವಾಣಿ
ವಿಶ್ವಾಸವೇ ವಿಶ್ವ

ಫ್ರೆಂಚ್ ಓಪನ್ ಪಟ್ಟ ಅಲಂಕರಿಸಿದ ಇಗಾ

ಈ ಬಾರಿಯ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಟೂರ್ನಿಯನ್ನು ಇಗಾ ಸ್ವಿಯಾಟೆಕ್ ಗೆದ್ದಿದ್ದು, ಸತತ ಮೂರನೇ ಬಾರಿಗೆ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ವಿವರಪುಟ → 10

ಪುಟ ತೆರೆದಂತೆ...

ಅಸಾಧ್ಯಗಳ ನಡುವೆ ಸಾಧ್ಯವಾಗುವುದೇ ಬದುಕು!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್

ಸಂ.ಪುಟ | 6

ಬಹುಮತದ ಸರಕಾರ, ನಿರೀಕ್ಷೆಗಳ ಸಾಕಾರ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ

ಸಂ.ಗಮ | 7

ಮಾತಂದ್ರೆ ಮಾತು



ನರೇಂದ್ರ ಮೋದಿ 3ನೇ ಬಾರಿ ಪ್ರಧಾನಿ ಆಗುತ್ತಿದ್ದಾರೆ. ಕಳೆದ ಎರಡು ಬಾರಿಗಿಂತ ಈ ಬಾರಿ ಬಿಜೆಪಿ ಬಲ ಕುಸಿದಿದೆ. ಹೀಗಾಗಿ ಈ ಸಲ ಅವರ ಸರಕಾರ ಎಷ್ಟು ದಿನ ಇರುತ್ತದೋ ಹೇಳಲು ಸಾಧ್ಯವಿಲ್ಲ. ಅದರಲ್ಲೂ ನಿತೀಶ್ ಕುಮಾರ್ ಅವರಂತಹ ವ್ಯಕ್ತಿಯನ್ನು ಇಟ್ಟುಕೊಂಡು ಸರಕಾರ ನಡೆಸುವುದು ಎಷ್ಟು ಕಷ್ಟ ಎನ್ನುವುದು ನಮಗೆ ಗೊತ್ತಿದೆ.

-ಎಂ.ಬಿ.ಪಾಟೀಲ
ಕೈಗಾರಿಕಾ ಸಚಿವ

ದಾರಿದೀಪೋಕ್ತಿ

ಯಾವುದೇ ಸಂಬಂಧವನ್ನಾದರೂ ನಿಮ್ಮ ಮಾನಸಿಕ ಸ್ಥಿತಿ ಅಥವಾ ಮೂಡಿನ ಮೇಲೆ ಹಿಡಿದಿಟ್ಟುಕೊಳ್ಳಲು ಆಗುವುದಿಲ್ಲ. ಅದನ್ನು ಪರಸ್ಪರ ವಿಶ್ವಾಸ, ನಂಬಿಕೆಯ ತಳಹದಿಯಲ್ಲೇ ಕಟ್ಟಬೇಕು. ನಿಮ್ಮ ಮನಸ್ಥಿತಿ ಆಗಾಗ ಬದಲಾಗಬಹುದು, ಆದರೆ ವಿಶ್ವಾಸ ಮತ್ತು ನಂಬಿಕೆ ಹಾಗಲ್ಲ.

ವಕ್ರತುಂಡೋಕ್ತಿ

ನೀವು ಮೂರ್ಖನ ಹಾಗೆ ಕಾಣುವುದು ತಪ್ಪಲ್ಲ. ಆದರೆ ಕಾಣುವಂತೆ ಇರಬಾರದು.

ಪ್ರಜ್ವಲ್ ರೇವಣ್ಣ ಪ್ರಿಯತಮೆಗೆ ನೋಟಿಸ್

ಬೆಂಗಳೂರು: ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿದೇಶದಲ್ಲಿ ತಲೆ ಮರೆಸಿಕೊಳ್ಳಲು ಹಣ ಸಹಾಯ ಮಾಡಿದ ಆರೋಪದಡಿ ಪ್ರಜ್ವಲ್ ರೇವಣ್ಣ ಪ್ರಿಯತಮೆಗೆ ಎಸ್‌ಐಟಿ ನೋಟಿಸ್ ನೀಡಿದೆ. ಇದೇ ವೇಳೆ ಪ್ರಜ್ವಲ್ ಅವರನ್ನು ಹೊಳೆನರಸೀಪುರಕ್ಕೆ ಕರೆದೊಯ್ದು ಶನಿವಾರ ಮಹಜರು ನಡೆಸಲಾಯಿತು.

ಬಸ್ ಟಿಕೆಟ್ ದರ ಹೆಚ್ಚಳವಿಲ್ಲ

ಬೆಂಗಳೂರು: ಲೋಕಸಭೆ ಚುನಾವಣೆ ಮುಗಿಯುತ್ತಿದ್ದಂತೆಯೇ ಸಾರಿಗೆ ಬಸ್ ಟಿಕೆಟ್ ದರ ಹೆಚ್ಚಳಕ್ಕೆ ಪ್ರಸ್ತಾಪ ಸಲ್ಲಿಸಿಲ್ಲ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದು, ಆ ಮೂಲಕ ಟಿಕೆಟ್ ದರ ಹೆಚ್ಚಾಗಬಹುದು ಎಂಬ ಊಹಾಪೋಹಕ್ಕೆ ತೆರೆ ಎಳೆದಿದ್ದಾರೆ.

ಬಿಎಸ್‌ವೈಗೆ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನೀಡಲಾಗುವ ಕೆಂಗಲ್ ಹನುಮಂತಯ್ಯ ಪ್ರಶಸ್ತಿಗೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ರನ್ನು ಆಯ್ಕೆ ಮಾಡಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಇನ್ಮುಂದೆ ಚುನಾವಣಾ ಭವಿಷ್ಯ ನುಡಿಯಲ್ಲ – ಪ್ರಶಾಂತ್ ಕಿಶೋರ್



ಸತತ 3ನೇ ಬಾರಿ ಪ್ರಧಾನಿಯಾಗಿ ನರೇಂದ್ರ ಮೋದಿ ಇಂದು ಪ್ರಮಾಣ ವಚನ ಸ್ವೀಕಾರ

ಮೋದಿ ಮೋದಿ ಮೋದಿ...

ದೆಹಲಿ: ಎನ್‌ಡಿಎ ಮೈತ್ರಿಕೂಟದ ನಾಯಕ ನರೇಂದ್ರ ಮೋದಿ ಅವರು ಸತತ ಮೂರನೇ ಬಾರಿಗೆ ದೇಶದ ಪ್ರಧಾನಿಯಾಗಿ ಇಂದು ಸಂಜೆ (ಭಾನುವಾರ) 7.15ಕ್ಕೆ ರಾಷ್ಟ್ರಪತಿ ಭವನದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಇದರೊಂದಿಗೆ ಮೊದಲ ಪ್ರಧಾನಿ ಜವಹರಲಾಲ್ ನೆಹರೂ ಬಳಿಕ ಸತತ ಮೂರನೇ ಬಾರಿಗೆ ಪ್ರಧಾನಿಯಾದ ದಾಖಲೆಗೂ ಭಾಜನರಾಗಲಿದ್ದಾರೆ.

ಮೋದಿ ಅವರ ಜತೆಗೆ 30 ಸಂಸದರು ಕೂಡ ಸಂಪುಟ ಸೇರಲಿದ್ದು, ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಭರದ ಸಿದ್ಧತೆ ನಡೆದಿದೆ. ಸಾರ್ಕ್ ರಾಷ್ಟ್ರಗಳ ಪ್ರಮುಖರು ಸೇರಿದಂತೆ ನೆರೆ ರಾಷ್ಟ್ರಗಳ ಗಣ್ಯರಿಗೆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಆಹ್ವಾನ ನೀಡಲಾಗಿದ್ದು, ಬಾಂಗ್ಲಾದೇಶ ಪ್ರಧಾನಿ ಶೇಕ್ ಹಸೀನಾ, ಸೆಶೆಲ್ಸ್‌ನ ಉಪರಾಷ್ಟ್ರಪತಿ ಅಹ್ಮದ್ ಅಫೀಫ್, ಮಾರಿಷಸ್ ಪ್ರಧಾನಿ ಪ್ರವಿಂದ್ ಕುಮಾರ್ ಜಗನ್ನಾಥ್, ಮಾಲ್ಡೀವ್ಸ್ ಪ್ರಧಾನಿ ಮೊಹಮ್ಮದ್ ಮುಯಿಝು, ಭೂತಾನ್ ಪ್ರಧಾನಿ ಶೆರಿಂಗ್ ತೊಬ್ಗೆ, ಶ್ರೀಲಂಕಾ ರಾಷ್ಟ್ರಪತಿ ರನಿಲ್ ವಿಕ್ರಮೆಸಿಂಘೆ, ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಾಲ್ ಸೇರಿದಂತೆ 9000 ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಏಷ್ಯಾದ ಮೊದಲ ಮಹಿಳಾ ಲೋಕೊ ಪೈಲೆಟ್ ಸುರೇಖಾ ಯಾದವ್ ಸೇರಿ 10 ಲೋಕೊ ಪೈಲೆಟ್‌ಗಳು, ಸೆಂಟ್ರಲ್ ವಿಸ್ತಾ ಯೋಜನೆ, ನೂತನ ಸಂಸತ್ ಕಟ್ಟಡ ನಿರ್ಮಾಣ ಕಾರ್ಮಿಕರು, ಕೇಂದ್ರ ಕಲ್ಯಾಣ ಯೋಜನೆಗಳ ಫಲಾನುಭವಿಗಳು, ಉತ್ತರಾಖಂಡ ಗಣಿ ಕಾರ್ಮಿಕರನ್ನು ರಕ್ಷಿಸಿದ್ದ ತಂಡ, ವಂದೇ ಭಾರತ್, ಮೆಟ್ರೋದಂತಹ ರೈಲ್ವೆ ಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು, 50 ಧಾರ್ಮಿಕ ಮುಖಂಡರು, ಪದ್ಮ ಪ್ರಶಸ್ತಿ ಪುರಸ್ಕೃತರು, ವಿಶೇಷ ಸಾಧನೆಗೈದ ಗಣ್ಯರು, ತೃತೀಯ ಲಿಂಗಿಗಳು, ಕಾರ್ಮಿಕರು, ಸ್ವಚ್ಛತಾ ಸಿಬ್ಬಂದಿ, ಆದಿವಾಸಿ ಮಹಿಳೆಯರಿಗೂ ಆಮಂತ್ರಣ ನೀಡಲಾಗಿದೆ.

→ 4

ಟಿಎಂಸಿ ಭಾಗಿಯಾಗಲ್ಲ

ಎನ್‌ಡಿಎ ಸರಕಾರ ಕಾನೂನಿಗೆ, ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ರಚನೆಯಾಗಿದೆ. ಹೀಗಾಗಿ ಮೋದಿ ಪದಗ್ರಹಣ ಸಮಾರಂಭದಲ್ಲಿ ನಾವು ಭಾಗಿಯಾಗಲ್ಲ ಎಂದು ಟಿಎಂಸಿ ನಾಯಕಿ, ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ. 400 ದಾಟುತ್ತೇವೆ ಎಂದವರಿಗೆ ಸ್ವತಂತ್ರವಾಗಿ 272 ಮ್ಯಾಜಿಕ್ ನಂಬರ್ ತಲುಪಲೂ ಸಾಧ್ಯವಾಗಿಲ್ಲ. ಇಂಡಿಯಾ ಒಕ್ಕೂಟ ಸರಕಾರ ರಚನೆಗೆ ಕೇಳಿಲ್ಲ ಎಂದ ಮಾತ್ರಕ್ಕೆ ಸಾಧ್ಯವಿಲ್ಲ ಎಂದಲ್ಲ, ಕಾಲ ಬದಲಾಗಲಿದೆ ನಾವೂ ಕಾಯುತ್ತಿದ್ದೇವೆ. ಕೆಲ ದಿನ ಈ ಸರಕಾರ ನಡೆಯಲಿ, ಮುಂದೆ ಇಂಡಿಯ ಸರಕಾರ ರಚನೆಯಾಗಲಿದೆ ಎಂದರು.

3.0 ಮೋದಿ 3.0 ಆರಂಭ ಇಂದಿನಿಂದ

30 ಸಂಪುಟ ಸೇರಲಿರುವ ಸಂಸದರು

9,000 ಗಣ್ಯರು ಕಾರ್ಯಕ್ರಮದಲ್ಲಿ ಭಾಗಿ

ಸಂಭಾವ್ಯ ಸಚಿವರು

ಕರ್ನಾಟಕ
● ಎಚ್.ಡಿ.ಕುಮಾರಸ್ವಾಮಿ (ಜೆಡಿಎಸ್) ● ಪ್ರಹ್ಲಾದ್ ಜೋಶಿ ● ಬಸವರಾಜ ಬೊಮ್ಮಾಯಿ ● ಜಗದೀಶ್ ಶೆಟ್ಟರ್/ಕಾರಜೋಳ

ಬಿಹಾರ (ಮುಂದುವರಿದ)
● ಸುನೀಲ್ ಕುಮಾರ್ (ಜೆಡಿಯು) ● ಕೌಶಲೇಂದ್ರ ಕುಮಾರ್ (ಜೆಡಿಯು) ● ಜೀತನ್ ರಾಮ್ ಮಾಂಝಿ (ಎಚ್‌ಎಎಮ್) ● ಜಿತೀನ್ ಪ್ರಸಾದ್ ● ನಿತ್ಯಾನಂದ ರಾಯ್ ● ರಾಜೀವ್ ಪ್ರತಾಪ್ ರೆಡ್ಡಿ ● ಸಂಜಯ್ ಜೈಸ್ವಾಲ್ ● ಚಿರಾಗ್ ಪಾಸ್ವಾನ್ (ಎಲ್‌ಜೆಪಿ)

ರಾಜಸ್ಥಾನ
● ಗಜೇಂದ್ರ ಸಿಂಗ್ ಶೇಖಾವತ್ ● ದುಶ್ಯಂತ್ ಸಿಂಗ್

ಕೇರಳ
● ಸುರೇಶ್ ಗೋಪಿ

ಉತ್ತರ ಪ್ರದೇಶ
● ರಾಜನಾಥ್ ಸಿಂಗ್ ● ಅನುಪ್ರಿಯಾ ಪಟೇಲ್ ● ಜಯಂತ್ ಚೌಧರಿ

ಮಹಾರಾಷ್ಟ್ರ
● ಪ್ರತಾಪ್‌ರಾವ್ ಜಾಧವ್ ● ಶ್ರೀರಂಗ್ ಬರ್ನೆ ● ನಿತಿನ್ ಗಡ್ಕರಿ ● ಪಿಯೂಷ್ ಗೋಯಲ್

ಪಶ್ಚಿಮ ಬಂಗಾಳ
● ಶಂತನು ಠಾಕೂರ್

ಬಿಹಾರ
● ಲಲನ್ ಸಿಂಗ್ - ಜೆಡಿಯು ● ಸಂಜಯ್ ಕುಮಾರ್ ಝಾ (ಜೆಡಿಯು) ● ರಾಮನಾಥ್ ಠಾಕೂರ್ (ಜೆಡಿಯು)

ಮಧ್ಯಪ್ರದೇಶ
● ಜ್ಯೋತಿರಾದಿತ್ಯ ಸಿಂಧಿಯಾ ● ಶಿವರಾಜ್ ಸಿಂಗ್ ಚೌಹಾಣ್

ಆಂಧ್ರಪ್ರದೇಶ
● ದಗ್ಗುಬಾಟಿ ಪುರಂದೇಶ್ವರಿ ● ಕಿಂಜರಾಪು ರಾಮ ಮೋಹನ್ ನಾಯ್ಡು ● ಪೆಮ್ಮಸಾನಿ ಚಂದ್ರಶೇಖರ್ ● ವೆಮಿರೆಡ್ಡಿ ಪ್ರಭಾಕರ್ ರೆಡ್ಡಿ

ತೆಲಂಗಾಣ
● ಕಿಶನ್ ರೆಡ್ಡಿ ● ಈಟಲ್ ರಾಜೇಂದರ್ ● ಡಿ.ಕೆ. ಅರುಣ ● ಡಿ.ಅರವಿಂದ್ ● ಬಂಡಿ ಸಂಜಯ್

ಜಮ್ಮು
● ಜಿತೇಂದ್ರ ಸಿಂಗ್ ● ಜುಗಲ್ ಕಿಶೋರ್ ಶರ್ಮಾ

ಒಡಿಶಾ
● ಧರ್ಮೇಂದ್ರ ಪ್ರಧಾನ್ ● ಮನಮೋಹನ್ ಸಮಾಲ್

ಈಶಾನ್ಯ ರಾಜ್ಯಗಳು
● ಸರ್ಬಾನಂದ ಸೋನೋವಾಲಾ ● ಬಿಜುಲಿ ಕಲಿತಾ ಮೇದಿ ● ಕಿರಣ್ ರಿಜೇಜು ● ಬಿಪ್ಲಬ್ ದೇವ್

ರಾಮೋಜಿ ಫಿಲಂ ಸಿಟಿ ಸಂಸ್ಥಾಪಕ

ರಾಮೋಜಿ ರಾವ್ ಇನ್ನಿಲ್ಲ

ಹೈದರಾಬಾದ್: ಈನಾಡು ಪತ್ರಿಕೆ, ತೆಲುಗು ಈಟಿವಿ ಹಾಗೂ ರಾಮೋಜಿ ಫಿಲಂ ಸಿಟಿ ಸಂಸ್ಥಾಪಕ ರಾಮೋಜಿ ರಾವ್ ಅವರು ಶನಿವಾರ ಮುಂಜಾನೆ 3 ಗಂಟೆ ಸುಮಾರಿಗೆ ನಿಧನರಾಗಿದ್ದಾರೆ. ಅವರಿಗೆ 88 ವರ್ಷ ವಯಸ್ಸಾಗಿತ್ತು. ಇತ್ತೀಚೆಗೆ ಅನಾರೋಗ್ಯಕ್ಕೊಳಗಾಗಿದ್ದ ಅವರನ್ನು ಹೈದರಾಬಾದ್‌ನ ಸ್ಟಾರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ರಾಮೋಜಿ ರಾವ್ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಹಂಗಾಮಿ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿ ರಾಜಕೀಯ ನಾಯಕರು, ಚಿತ್ರರಂಗದ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ವಿವರಪುಟ → 8

ಭಾರತ, ಪಾಕಿಸ್ತಾನ ಟಿ20 ಸಮರ ಇಂದು

ನ್ಯೂಯಾರ್ಕ್: ಕ್ರಿಕೆಟ್ ಲೋಕದ ಹೈ ವೋಲ್ಟೇಜ್ ಪಂದ್ಯ ಎನ್ನಿಸಿಕೊಳ್ಳುವ ಬಹು ಕುತೂಹಲ ಮೂಡಿಸಿದ್ದ ಭಾರತ-ಪಾಕಿಸ್ತಾನ ಪಂದ್ಯ ಇಂದು (ಭಾನುವಾರ) ನಡೆಯಲಿದೆ.

ಐರ್ಲೆಂಡ್ ವಿರುದ್ಧದ ಮೊದಲ ಲೀಗ್ ಪಂದ್ಯವನ್ನು ಗೆದ್ದಿರುವ ಭಾರತ ತಂಡ ಇದೀಗ ದ್ವಿತೀಯ ಪಂದ್ಯದಲ್ಲೂ ಗೆಲುವಿನ ಓಟ ಮುನ್ನಡೆಸಲು ಸಜ್ಜಾಗಿದ್ದರೆ, ಅಮೆರಿಕ ವಿರುದ್ಧ ಸೋತು ಶರಣಾಗಿರುವ ಪಾಕ್ ಪುಟಿದೇಳುವ ಭರದಲ್ಲಿದೆ. ಈ ಬಾರಿ ವಿಶ್ವಕಪ್ ಕುತೂಹಲಕಾರಿಯಾಗಿದ್ದು, ಬಹುತೇಕ ಎಲ್ಲ ತಂಡ ಗಳೂ ಒಂದು ಪಂದ್ಯ ಮುಗಿಸಿ 2ನೇ ಪಂದ್ಯಕ್ಕೆ ರೆಡಿಯಾಗುತ್ತಿವೆ. ಈ ಮಧ್ಯೆ ಭಾನುವಾರದ ಪಂದ್ಯದಲ್ಲಿ ಭಾರತ ಹಾಗೂ ಪಾಕಿಸ್ತಾನ ಸೆಣಸಲಿವೆ.

ನೀಟ್ ಆಯ್ದ ಪತ್ರಿಕೆ ಮರುಮೌಲ್ಯಮಾಪನ

ದೆಹಲಿ: ವೈದ್ಯಕೀಯ ಶಿಕ್ಷಣದ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ನೀಡುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ (ಎನ್‌ಇಇಟಿ-ನೀಟ್) ಮೌಲ್ಯಮಾಪನದಲ್ಲಿ ಭಾರೀ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಗ್ರೇಸ್ ಮಾರ್ಕ್ಸ್ ಪಡೆದ 1,563 ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಉನ್ನತ ಸಮಿತಿ ರಚಿಸಿದೆ.

ಸಮಿತಿ ರಚನೆಯಿಂದ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಯಾವುದೇ ತೊಂದರೆ ಇಲ್ಲ ಎಂದು ಎನ್‌ಟಿಎ ಶನಿವಾರ ಸ್ಪಷ್ಟಪಡಿಸಿದೆ. ಸಮಿತಿ ಸೂಚಿಸಿದರೆ ಹೊಸದಾಗಿ ನೀಟ್ ಪರೀಕ್ಷೆ ನಡೆಸಲು ಸಿದ್ಧ ಎಂದು ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಸಿಪಿಪಿ ಅಧ್ಯಕ್ಷೆಯಾಗಿ ಸೋನಿಯಾ, ರಾಗಾ ಪ್ರತಿಪಕ್ಷ ನಾಯಕ

ದೆಹಲಿ: ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಸೋನಿಯಾ ಗಾಂಧಿ ಅವರನ್ನು ಸರ್ವಾನುಮತದಿಂದ ಮರು ಆಯ್ಕೆ ಮಾಡಲಾಗಿದೆ.

ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹಾಗೂ ಸಂಸದೀಯ ಪಕ್ಷದ ಸಭೆಯಲ್ಲಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಸೋನಿಯಾ ಗಾಂಧಿ ಅವರ ಹೆಸರನ್ನು ಪ್ರಸ್ತಾಪಿಸಿದರು. ಗೌರವ್ ಗೊಗೊಯ್, ಸುಧಾಕರನ್, ತಾರಿಕ್ ಅನ್ವರ್ ಈ ಪ್ರಸ್ತಾಪವನ್ನು ಅನುಮೋದಿಸಿದರು.

ಇದಕ್ಕೂ ಮುನ್ನ, ರಾಹುಲ್ ಗಾಂಧಿ ಅವರನ್ನು ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕನ ಸ್ಥಾನ ವಹಿಸಿಕೊಳ್ಳುವಂತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಒತ್ತಾಯಿಸಿತು. ಈ ಬಗ್ಗೆ ಶೀಘ್ರ ನಿರ್ಧಾರ ತೆಗೆದುಕೊಳ್ಳುವುದಾಗಿ ರಾಹುಲ್ ಗಾಂಧಿ ಹೇಳಿದ್ದಾರೆ ಎನ್ನಲಾಗಿದೆ.

11ರಿಂದ ಉತ್ತರ ಪ್ರದೇಶ ಧನ್ಯವಾದ ಯಾತ್ರೆ: ಮಲ್ಲಿಕಾರ್ಜುನ ಖರ್ಗೆ

ವಿವರಪುಟ → 8

ನಿಗಮದ ಅಧ್ಯಕ್ಷ ದದ್ದಲ್ ರಾಜೀನಾಮೆಗೆ ಹೆಚ್ಚಿದ ಆಗ್ರಹ

ವಾಲ್ಮೀಕಿ ನಿಗಮ ಹಗರಣ: ಮತ್ತೊಂದು ತಲೆದಂಡ?

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಚಿವ ನಾಗೇಂದ್ರ ತಲೆದಂಡವಾಗಿದ್ದು, ಇದೀಗ ಮತ್ತೊಬ್ಬರ ತಲೆದಂಡಕ್ಕೆ ದಿನದಿಂದ ದಿನಕ್ಕೆ ಒತ್ತಡ ಹೆಚ್ಚುತ್ತಿದೆ.

ಯಾವುದೇ ತಪ್ಪು ಮಾಡಿಲ್ಲವೆಂದು ಮತ್ತೊಮ್ಮೆ ಸ್ಪಷ್ಟನೆ ನೀಡಿದ ದದ್ದಲ್

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ್ ದದ್ದಲ್ ಅವರು ಮೃತ ಅಧಿಕಾರಿ ಚಂದ್ರಶೇಖರ್ ಜತೆ ಚರ್ಚೆ ನಡೆಸಿದ್ದಾರೆ. ಇಡೀ ಅಕ್ರಮದ ಬಗ್ಗೆ ಬಸವರಾಜ್ ದದ್ದಲ್ ಅವರಿಗೆ ಮಾಹಿತಿ ಇದೆ. ಆದ್ದರಿಂದ ಅವರೂ ಈ ಅಕ್ರಮದಲ್ಲಿ ಭಾಗಿಯಾಗಿರುವ ಶಂಕೆಯಿದೆ. ಆದ್ದರಿಂದ ಅವರ ರಾಜೀನಾಮೆ ಪಡೆಯಬೇಕು ಎಂದು ಬಿಜೆಪಿ ಆಗ್ರಹ ಹೆಚ್ಚಾಗಿದೆ.

ದದ್ದಲ್ ಮಾತ್ರವಲ್ಲದೇ, ಸಚಿವ ಶರಣಪ್ರಕಾಶ್ ಪಾಟೀಲ್ ಅವರ ಕಚೇರಿಯಲ್ಲಿಯೇ ಈ ಅಕ್ರಮಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆದಿದೆ. ಆದ್ದರಿಂದ ಅವರೂ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಒತ್ತಡ ಹೇರುತ್ತಿದೆ. ಆದರೆ ಮೇಲ್ನೋಟಕ್ಕೆ, ಶರಣಪ್ರಕಾಶ್ ಪಾಟೀಲ್‌ಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎನ್ನುವುದು ಸ್ಪಷ್ಟ. ಆದರೆ ನಿಗಮದ ಅಧ್ಯಕ್ಷ ಬಸವರಾಜ್ ದದ್ದಲ್ ಅವರು ಹೆಸರು ಕೇಳಿಬರುತ್ತಿದ್ದು, ಒಂದು ವೇಳೆ ಸಿಬಿಐ ವಿಚಾರಣೆಯಲ್ಲಿ ದದ್ದಲ್ ವಿರುದ್ಧ ಮಾಹಿತಿ ಸಿಕ್ಕರೆ ಅವರ ರಾಜೀನಾಮೆ ಅನಿವಾರ್ಯ ಎನ್ನಲಾಗುತ್ತಿದೆ.

> ರಾಜೀನಾಮೆ ಕೇಳುವುದೇ ಪ್ರತಿಪಕ್ಷದವರ ಕೆಲಸ. ಅವರು ಅವರ ಕೆಲಸ ಮಾಡುತ್ತಿದ್ದಾರೆ. ಆದರೆ ಈಗಾಗಲೇ ಎಸ್‌ಐಟಿ, ಸಿಬಿಐನಿಂದ ತನಿಖೆ ನಡೆಯುತ್ತಿದೆ. ಈ ಪ್ರಕರಣದಲ್ಲಿ ಸಿಎಂ ಏಕೆ ರಾಜೀ ನಾಮೆ ನೀಡಬೇಕು? ಒಂದು ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಲು ಸೂಚನೆ ನೀಡಿದರೆ ನಾನು ನೀಡುತ್ತೇನೆ.
>
> **- ಬಸವರಾಜ್ ದದ್ದಲ್**
> ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ

> ತಮ್ಮ ಮೇಲಿನ ಆರೋಪ ಸತ್ಯಕ್ಕೆ ದೂರವಾಗಿದೆ. ಯಾವುದೇ ತನಿಖೆ ಮಾಡಿದರೂ ನಾನು ಕಾನೂನುಬದ್ಧವಾಗಿ ಎದುರಿಸಲು ಸಿದ್ಧನಿದ್ದೇನೆ. ನಾನು ಪ್ರಾಮಾಣಿಕವಾಗಿ ಕೆಲಸ ಮಾಡಿದ ತೃಪ್ತಿ ಇದೆ. ಸುಳ್ಳು ಆರೋಪಗಳ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಸಚಿವನಾಗಿರುವುದರಿಂದ ನನ್ನನ್ನು ನೋಡಲು ರಾಜ್ಯದ ನಾನಾ ಭಾಗಗಳಿಂದ ನೂರಾರು ಜನ ಬಂದು ಹೋಗುತ್ತಾರೆ. ಬಂದುಹೋಗುವವರ ಪೂರ್ಣ ವಿವರಗಳನ್ನು ಕಲೆ ಹಾಕಲು ಸಾಧ್ಯವೇ?
>
> **- ಡಾ.ಶರಣಪ್ರಕಾಶ ಪಾಟೀಲ್** ಸಚಿವ

ಎಲ್ಲ ಸರಕಾರಿ ಇಲಾಖೆಗಳಿಗೆ ರಾಜ್ಯ ಸರಕಾರ ಆದೇಶ

ಪ್ರತಿ ಸೋಮವಾರ ಹಾಜರಿ ಕಡ್ಡಾಯ

ಬೆಂಗಳೂರು: ಪ್ರತಿಯೊಂದು ಇಲಾಖೆಯ ಅಧಿಕಾರಿ, ನೌಕರರು ಪ್ರತಿ ಸೋಮವಾರ ತಮ್ಮ ತಮ್ಮ ಕೇಂದ್ರ ಸ್ಥಾನದ ಕಚೇರಿಗಳಲ್ಲಿ ಹಾಜರಿದ್ದು, ಕಚೇರಿಗಳಿಗೆ ಆಗಮಿಸುವ ಜನರಿಗೆ ಸರಕಾರಿ ಸೇವೆ ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರ ಸೂಚನೆಯಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರಕಾರದ ಅಧೀನ ಕಾರ್ಯದರ್ಶಿ ವಿಮಲಾಕ್ಷಿ. ಬಿ ಅವರು ಎಲ್ಲ ಸರಕಾರಿ ಇಲಾಖೆಗಳಿಗೆ ಆದೇಶ ಹೊರಡಿಸಿದ್ದಾರೆ.

ಕರ್ನಾಟಕವು ಕೃಷಿ ಪ್ರಧಾನವಾದ ರಾಜ್ಯವಾಗಿದ್ದು, ಸಾಮಾನ್ಯವಾಗಿ ಕೃಷಿಕರು ಸೋಮವಾರದ ದಿನದಂದು ತುಸುಮಟ್ಟಿಗೆ ಕೃಷಿ ಚಟುವಟಿಕೆಗಳಿಗೆ ಬಿಡುವು ನೀಡಿ, ಸಂತೆ, ಪೇಟೆ ಕೆಲಸಗಳು ಹಾಗೂ ಕಚೇರಿಗಳಿಗೆ ತಮ್ಮ ಕೆಲಸಗಳಿಗಾಗಿ ಹೋಗುವುದು ಹಿಂದಿನಿಂದ ನಡೆದ ವಾಡಿಕೆಯಾಗಿದೆ.

→ 4

ಕೆಎಸ್ಸಾರ್ಟಿಸಿಗೂ ಅನ್ವಯ

ರಾಜ್ಯ ಸರಕಾರ ಸೂಚನೆಯು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೂ ಅನ್ವಯವಾಗಿದೆ. ನಿಗಮ ವ್ಯಾಪ್ತಿಯ ಎಲ್ಲ ಕಚೇರಿಗಳಲ್ಲಿ ತುರ್ತು ಕಾರ್ಯಗಳನ್ನು ಹೊರತುಪಡಿಸಿ. ಪ್ರತಿ ಸೋಮವಾರಗಳಂದು ತಮ್ಮ ಕೇಂದ್ರ ಸ್ಥಾನದ ಕಚೇರಿಗಳಲ್ಲಿ ಹಾಜರಿದ್ದು, ಸೇವೆ ಒದಗಿಸಬೇಕು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕರು ಸುತ್ತೋಲೆ ಹೊರಡಿಸಿದ್ದಾರೆ.

ಲೋಕ ಚುನಾವಣೆಯಲ್ಲಿ ಮೇಲುಗೈ, ಪರಿಷತ್‌ನಲ್ಲೂ ಉತ್ತಮ ಸಾಧನೆ
ಎಚ್.ಡಿ.ಕುಮಾರಸ್ವಾಮಿಗೆ ಕೇಂದ್ರದಲ್ಲಿ ಸಚಿವ ಸ್ಥಾನವೂ ಸಿಗುವ ನಿರೀಕ್ಷೆ

ಜೆಡಿಎಸ್‌ಗೆ ಪುನರ್ಜನ್ಮ ನೀಡಿದ ಮೈತ್ರಿ

- ಜೆಡಿಎಸ್ ಚಿಹ್ನೆಯಲ್ಲಿ ಮೂರು ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿ ಎರಡರಲ್ಲಿ ಗೆಲುವು
- ಶಿಕ್ಷಕರ, ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಎರಡೂ ಕ್ಷೇತ್ರಗಳಲ್ಲಿ ಜಯ
- 2019ರ ಚುನಾವಣೆಗೆ ಹೋಲಿಸಿದರೆ ಈ ಬಾರಿ ಜೆಡಿಎಸ್ ಸ್ಥಾನಗಳು ಏರಿಕೆ
- ಬಿಬಿಎಂಪಿ, ತಾಪಂ, ಜಿಪಂ ಚುನಾವಣೆಯಲ್ಲೂ ಮೈತ್ರಿ ಮುಂದುವರಿಸಲು ಉತ್ಸುಕ

ಬೆಂಗಳೂರು: ಕಳೆದೊಂದು ದಶಕದಲ್ಲಿ ಚುನಾವಣೆಯಿಂದ ಚುನಾವಣೆಗೆ ಅಸ್ತಿತ್ವ ಕಳೆದುಕೊಳ್ಳುತ್ತಿದ್ದ ಜೆಡಿಎಸ್ ಇದೀಗ, ಬಿಜೆಪಿಯೊಂದಿಗಿನ ಮೈತ್ರಿಯ ಬಳಿಕ ರಾಜಕೀಯ ಪುನರ್ಜನ್ಮ ಪಡೆಯುತ್ತಿದೆ.

ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶೇಕಡಾವಾರು ಮತಗಳಲ್ಲಿ ಜೆಡಿಎಸ್‌ಗೆ ಭಾರಿ ನಷ್ಟವಾದ ಬೆನ್ನಲ್ಲೇ, ಎಚ್ಚೆತ್ತುಕೊಂಡು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿತ್ತು. ಆರಂಭದಲ್ಲಿ ಸೈದ್ಧಾಂತಿಕ ವಿಚಾರಗಳಿಂದ ಈ ಮೈತ್ರಿಯನ್ನು ಮತದಾರ ಒಪ್ಪಿಕೊಳ್ಳುವುದು ಕಷ್ಟವೆಂದೇ ಅನೇಕರು ಭಾವಿಸಿದ್ದರು. ಆದರೆ ಲೋಕಸಭಾ ಚುನಾವಣೆ ಹಾಗೂ ವಿಧಾನ ಪರಿಷತ್ ಚುನಾವಣೆಯಲ್ಲಿನ ಬೆಳವಣಿಗೆ ಗಮನಿಸಿದರೆ, ಜೆಡಿಎಸ್‌ಗೆ ಈ ಮೈತ್ರಿಯಿಂದ ಭಾರಿ ಲಾಭವೇ ಆಗಿದೆ ಎನ್ನುವುದು ಸ್ಪಷ್ಟ.

ಲೋಕಸಭೆಯಲ್ಲಿ ಸೀಟು ಹೆಚ್ಚಿಸಿಕೊಂಡ ಜೆಡಿಎಸ್: ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡೇ ಮೈತ್ರಿ ಮಾಡಿಕೊಂಡಿದ್ದ ಜೆಡಿಎಸ್ 2019ರ ಚುನಾವಣೆಗೆ ಹೋಲಿಸಿದರೆ, ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದೆ. ಜೆಡಿಎಸ್ ಚಿಹ್ನೆಯಲ್ಲಿ ಮೂರು ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿ, ಅದರಲ್ಲಿ ಎರಡು ಕ್ಷೇತ್ರದಲ್ಲಿ ಅಭ್ಯರ್ಥಿಗಳು ಗೆಲುವು ಸಾಧಿಸಿದರು. ಇನ್ನು ಹಾಸನದಲ್ಲಿ ಸೋಲುವುದಕ್ಕೆ ಪ್ರಜ್ವಲ್ ರೇವಣ್ಣ ಕಾರಣ ಹೊರತು, ಇನ್ನ್ಯಾವುದೇ ಸಮಸ್ಯೆ ಇರಲಿಲ್ಲ. ಆದ್ದರಿಂದ 2019ರ ಚುನಾವಣೆಗೆ ಹೋಲಿಸಿದರೆ ಈ ಬಾರಿ ಜೆಡಿಎಸ್ ಫಲಿತಾಂಶ ಭರ್ಜರಿ ಏರಿಕೆಯಾಗಿದೆ.

→ 4

ಎಚ್‌ಡಿಕೆಗೆ ಸಚಿವ ಸ್ಥಾನ

ಈ ಬಾರಿ ದೇಶಾದ್ಯಂತ ಬಿಜೆಪಿಗೆ ಸ್ಪಷ್ಟ ಬಹುಮತ ಬಾರದೇ ಇರುವುದರಿಂದ ಮೈತ್ರಿ ಪಕ್ಷಗಳನ್ನು ವಿಶ್ವಾಸಕ್ಕೆ ಪಡೆಯುವ ಅನಿವಾರ್ಯತೆಯಲ್ಲಿ ಬಿಜೆಪಿ ಇದೆ. ಆದ್ದರಿಂದ ಮಂಡ್ಯದಿಂದ ಗೆಲುವು ಸಾಧಿಸಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಪ್ರಧಾನಿ ನರೇಂದ್ರ ಮೋದಿಯವರ ಸಚಿವ ಸಂಪುಟ ಸೇರುವುದು ಖಚಿತವಾಗಿದೆ. ಇದರಿಂದ ಕೇಂದ್ರ ಸರಕಾರದ ಪ್ರಮುಖ ಖಾತೆಯನ್ನು ಪಡೆಯುವ ಸಾಧ್ಯತೆಯಿದೆ. ಇದರಿಂದಾಗಿ ಪಕ್ಷದ ಸಂಘಟನೆಯೂ ಹೆಚ್ಚಾಗುತ್ತದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.



ಇಬ್ಬರು ಮಹಿಳೆಯರು ಸೇರಿ 3 ಸರಗಳ್ಳರ ಸೆರೆ

ಕುಮಟಾ: ಬಂಗಾರದ ಅಂಗಡಿಗೆ ಗ್ರಾಹಕರ ವೇಷದಲ್ಲಿ ಬಂದು ಅಂಗಡಿಯವರು ಗಮನ ಬೇರೆಡೆ ಹೋಗುವಂತೆ ಮಾಡಿ ಬಂಗಾರದ ಆಭರಣಗಳನ್ನು ಕಳವು ಮಾಡುತ್ತಿದ್ದರು. ಈ ಅಪರಿಚಿತ ಇಬ್ಬರು ಮಹಿಳೆಯರು, ಒಬ್ಬ ಪುರುಷನನ್ನು ಇಲ್ಲಿನ ಪೊಲೀಸರು ಪಟ್ಟಣದ ಪಳ್ಳಿ ಎದುರಿನ ಬಂಗಾರದ ಅಂಗಡಿಯಲ್ಲಿ ಶುಕ್ರವಾರ ಸಂಜೆ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಪೊಲೀಸ್ ವಶದಲ್ಲಿರುವವರು ಕುಮಟಾ ಪಟ್ಟಣದಲ್ಲಿರುವ ಬಹುತೇಕ ಎಲ್ಲಾ ಬಂಗಾರದ ಶೋ ರೂಮ್‌ಗಳಿಗೆ ಹೋಗಿ ಆಭರಣ ತೋರಿಸುವಂತೆ ಅಂಗಡಿಯಲ್ಲಿದ್ದವರಿಗೆ ಹೇಳಿ ಆಭರಣ ಕೊಳ್ಳುವವರಂತೆ ನಟಿಸುತ್ತಿದ್ದರು. ಈ ರೀತಿ ನಟನೆಯಿಂದ ಒಂದೆರಡು ಅಂಗಡಿಗಳಿಂದ ಇವರು ಚಿಕ್ಕಪುಟ್ಟ ಬಂಗಾರದ ಆಭರಣಗಳನ್ನು ಲಪಟಾಯಿಸಿದ್ದಾರೆ ಎನ್ನಲಾಗಿದೆ. ಈ ರೀತಿ ಆಗಂತುಕರು ಪಳ್ಳಿ ಬಳಿಯ ಬಂಗಾರದ ಶೋ ರೂಮ್ ಗೆ ಹೋಗಿದ್ದಾಗ ಈ ಮೊದಲು ಆಭರಣ ಲಪಟಾಯಿಸಿದ್ದಾರೆ ಅಂಗಡಿ ಮಾಲಿಕರೊಬ್ಬರು ತಮ್ಮ ಅಂಗಡಿಯ ಸಿಸಿಟಿವಿ ದೃಶ್ಯ ಸಮೇತನಾಗಿ ಪೊಲೀಸರಿಗೆ ಆಗಂತುಕರು ಕುರಿತು ನೀಡಿದ ಮಾಹಿತಿಯನ್ವಯ ಪೊಲೀಸರು ಪಟ್ಟಣದರುವ ಬಂಗಾರದ ಅಂಗಡಿಯನ್ನೆಲ್ಲಾ ಜಾಲಾಡಿದಾಗ ಪಳ್ಳಿ ಬಳಿಯ ಬಂಗಾರದ ಅಂಗಡಿಯಲ್ಲಿ ಈ ಮೂವರು ಪತ್ತೆಯಾದವು. ತಕ್ಷಣ ಅವರನ್ನು ವಶಕ್ಕೆ ತೆಗೆದು ಕೊಂಡು ಠಾಣೆಗೆ ಕರೆದೊಯ್ಯು ಎಂದು ಗೊತ್ತಾಗಿದೆ.

ವಿದ್ಯಾರ್ಥಿನಿಯರ ಸ್ವಾಸ್ಥ್ಯ ಕುರಿತು ತಜ್ಞರ ಮಾರ್ಗದರ್ಶನ

ಹಳಿಯಾಳ : ಕೆಎಲ್‌ಎಸ್‌ಡಿಐಟಿ ಹಳಿಯಾಳದಲ್ಲಿ ವಿದ್ಯಾರ್ಥಿನಿ ಯರಿಗಾಗಿ ತಜ್ಞ ವೈದ್ಯರ ಮಾರ್ಗದರ್ಶನ ಕಾರ್ಯಕ್ರಮವನ್ನು ಜೂನ್ 7 ರಂದು ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಧಾರವಾಡದ ಸಮಗ್ರ ಸ್ವಾಸ್ಥ್ಯ ಕೇಂದ್ರದ ಸ್ಥಾಪಕಿ ಡಾ. ಗೀತಾ ಬಮ್ಮನಗೌಡರ್ ಆಗಮಿಸಿದ್ದರು. ಮಾಸಿಕ ಋತುಚಕ್ರದ ಸಮಯದಲ್ಲಿ ವಿದ್ಯಾರ್ಥಿನಿಯರು ನೈರ್ಮಲ್ಯದ ಕುರಿತಾಗಿ ಗಮನಹರಿಸಬೇಕೆಂದು ಹೇಳಿದರು. ಮುಟ್ಟಿನ ಸಮಯದಲ್ಲಿ ಮಾಡಬಹುದಾದ ವ್ಯಾಯಾಮಗಳ ಕುರಿತು ಅರಿವು ಮೂಡಿಸಿದರು. ಒಳ್ಳೆಯ ಆರೋಗ್ಯಕ್ಕೆ ಉತ್ತಮ ಆಹಾರ ಪದ್ಧತಿ, ಸರಿಯಾದ ನಿದ್ದೆ, ಧ್ಯಾನ ಅತ್ಯವಶ್ಯಕ ಎಂದು ಹೇಳಿದರು. ವ್ಯಾಯಾಮದ ಮೂಲಕ ಒತ್ತಡ ಹಾಗೂ ಚಿಂತೆಯನ್ನು ನಿಭಾಯಿಸುವ ಕ್ರಮವನ್ನು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ಉತ್ತಮ ಹವ್ಯಾಸಗಳು ಆರೋಗ್ಯಕರ ಜೀವನಕ್ಕೆ ಸಹಕಾರಿಯಾಗುವುದೆಂದು ಹೇಳಿದರು. ಮಹಾವಿದ್ಯಾಲಯದ ಮಹಿಳಾ ಘಟಕದ ಅಧ್ಯಕ್ಷರಾದ ಡಾ. ಮೀನಲ್ ಕಲಿವಾಲ್ ಸ್ವಾಗತಿಸಿದರು. ಪ್ರೊ. ರೋಹಿಣಿ ಕಲ್ಲೂರ್ ವಂದಿಸಿದರು. ಡಾ. ಸ್ನೇಹಾ ಕುಲಕರ್ಣಿ ನಿರೂಪಿಸಿದರು.

ಪ್ರಕೃತಿಯ ಮಾತೆಯ ಸಂರಕ್ಷಣೆ ಪ್ರತಿಪಾದಿಸುವುದು ಅಗತ್ಯ: ಕಳವೆ

ಸಿದ್ದಾಪುರ: ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ''ಪರಿಸರ ಸಂರಕ್ಷಣೆಯಲ್ಲಿ ಯುವಜನತೆಯ ಪಾತ್ರ'' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ಪರಿಸರ ಬರಹಗಾರರು ಹಾಗೂ ಪರಿಸರ ತಜ್ಞರಾದ ಶಿವಾನಂದ ಕಳವೆಯವರು ವಿಶೇಷ ಉಪನ್ಯಾಸಕರಾಗಿ ಆಗಮಿಸಿ ಪ್ರತಿ ವರ್ಷ ಜೂನ್ 5 ರಂದು ಜಾಗತಿಕವಾಗಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ಆಚರಣೆ ಪರಿಸರ ಮತ್ತು ಅದನ್ನು ಸಂರಕ್ಷಿಸುವ ಅಗತ್ಯದ ಬಗ್ಗೆ ಜಾಗೃತಿ ಮೂಡಿಸುವ ದಿನವಾಗಿದೆ. ಹಸಿರು-ಪರಿಸರ ಮತ್ತು ಪ್ರಕೃತಿಯ ಸಂರಕ್ಷಣೆಯನ್ನು ಪ್ರತಿಪಾದಿಸುವುದು ಅಗತ್ಯ ಎಂದರು. ಇಂದು ನಾವು ಪರಿಸರವನ್ನು ಸಂರಕ್ಷಿಸಿದಾಗ ಮಾತ್ರ ಭವಿಷ್ಯದ ಪೀಳಿಗೆಯು ಆರೋಗ್ಯಕರ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ ಎಂದು ಅವರು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಸತೀಶ ನಾಯ್ಕ ಮಾತನಾಡಿ, ಮಾಲಿನ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೊರತೆಯಿಲ್ಲದ ಸುಂದರ ಜಗತ್ತನ್ನು ಸೃಷ್ಟಿಸುವುದು ವಿಶ್ವ ಪರಿಸರ ದಿನದ ಹಿಂದಿನ ಕಲ್ಪನೆ. ಪ್ಲಾಸ್ಟಿಕ್ ನಿಷೇಧ, ಹೆಚ್ಚು ಮರಗಳು ಮತ್ತು ಗಿಡಗಳನ್ನು ನೆಡುವುದು, ನೀರನ್ನು ಉಳಿಸುವುದು, ಮರುಬಳಕೆ ಮಾಡುವುದು ಮತ್ತು ವನ್ಯಜೀವಿಗಳು ಮತ್ತು ಪ್ರಾಣಿಗಳನ್ನು ಉಳಿಸುವುದು ಉತ್ತಮ ಪರಿಸರಕ್ಕೆ ಕಾರಣವಾಗುವ ಕೆಲವು ಹಂತಗಳಾಗಿವೆ. ನಾವು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಬೇಕು ಮತ್ತು ಅವುಗಳನ್ನು ಸಮರ್ಥವಾಗಿ ಮತ್ತು ಎಚ್ಚರಿಕೆಯಿಂದ ಬಳಸಬೇಕು ಎಂದರು.

ಸಮಾಚಾರ ಸಣ್ಣದಲ್ಲ

ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಪಟಗಾರ್

ಶಿರಸಿ: ಶ್ರೀನಿಕೇತನ ಶಾಲೆಯ ಇಕೋ ಕ್ಲಬ್‌ನ ಆಶ್ರಯದಲ್ಲಿ ವಿಶ್ವ ಪರಿಸರ ದಿನವನ್ನು ಆ **ಭಟ್ಕಳ:** ತಾಲೂಕಾ ಸರಕಾರಿ ಪ್ರಾಥಮಿಕ ಶಾಲಾ ಗ್ರೇಡ್-2 ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾಗಿ ನಾಗರಾಜ ಬಿ. ಪಟಗಾರ್ ಇವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಸಭೆಯಲ್ಲಿ ಹಾಜರಿದ್ದ ಸದಸ್ಯರು ಅವಿರೋಧವಾಗಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ನಾಗರಾಜ ಬಿ. ಪಟಗಾರ್ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ರಾಮದಾಸ ಆಗೇರ, ಉಪಾಧ್ಯಕ್ಷರಾಗಿ ತಾರಾ ನಾಯ್ಕ, ಖಜಾಂಚಿಯಾಗಿ ತಿಮ್ಮಪ್ಪ ಗೊಂಡ, ಸಂಘಟನಾ ಕಾರ್ಯದರ್ಶಿಯಾಗಿ ಸುರೇಶ ಗೌಡ, ಕಾರ್ಯಕಾರಿ ಸದಸ್ಯರಾಗಿ ಗಣಪತಿ ನಾಯ್ಕ, ಧರ್ಮಾ ನಾಯ್ಕ, ಸಂತೊಷ ನಾಯ್ಕ, ರಾಮಾ ಮೊಗೇರ ಮುಂತಾದವರನ್ನು ಆಯ್ಕೆ ಮಾಡಲಾಯಿತು.

ಡಿಪ್ಲೋಮಾ ದ್ವಿತೀಯ ವರ್ಷದ ಪ್ರವೇಶ ಪ್ರಕಟಣೆ

ಸಿದ್ದಾಪುರ: 2024-25 ನೇ ಸಾಲಿಗೆ ಡಿಪ್ಲೋಮಾ ದ್ವಿತೀಯ ವರ್ಷದ ಲ್ಯಾಟರಲ್ ಎಂಟ್ರಿ ಸ್ಕೀಂ ಪ್ರಕಾರ ಪ್ರವೇಶಕ್ಕೆ ಅರ್ಹ 02 ವರ್ಷಗಳ ಐಟಿಐ, ದ್ವಿತೀಯ ಪಿಯುಸಿವಿಜ್ಞಾನ, ತಾಂತ್ರಿಕ ವಿಷಯಗಳು)ಗಳಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ಮೆರಿಟ್ ಆಧಾರಿತ ಆಫ್ ಲೈನ್ ಮೂಲಕ ಜೂ.10 ರಿಂದ ಜೂ. 25 ರವರೆಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಆದ್ದರಿಂದ ಆಸಕ್ತ ಅಭ್ಯರ್ಥಿಗಳು ಸಂಸ್ಥೆಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಲು ಸೂಚಿಸಲಾಗಿದೆ. ನಮ್ಮಲ್ಲಿ ಸಿವಿಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಕಮ್ಯೂನಿಕೇಶನ್ ಇಂಜಿನಿಯರಿಂಗ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ 3 ವರ್ಷಗಳ ಡಿಪ್ಲೋಮ ಕೋರ್ಸುಗಳು ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಈ ವೆಬ್ ಸೈಟ್ ಸಂಪರ್ಕಿಸಿ (www.dte.kar.nic) ನೋಡಬಹುದು.

ಬೈಕ್ ನಿಂದ ಬಿದ್ದು ಮಹಿಳೆ ದಾರುಣ ಸಾವು

ಕುಮಟಾ : ತಾಲೂಕಿನ ಅಳ್ವೆಕೋಡಿ ಚರ್ಚ್ ಸಮೀಪ ಬೈಕ್‌ಗೆ ಅಡ್ಡ ಬಂದ ನಾಯಿಯನ್ನು ತಪ್ಪಿಸಲು ಹೋಗಿ ಬ್ರೇಕ್ ಹಾಕಿದ ಪರಿಣಾಮ ಹಿಂಬದಿಯಲ್ಲಿದ್ದ ಮಹಿಳೆ ಬೈಕ್‌ನಿಂದ ಬಿದ್ದು ಮೃತಪಟ್ಟ ಘಟನೆ ನಡೆದಿದೆ. ಕುಮಟಾ ಹೆಗಡೆಯ ಕಾನಮ್ಮ ನಗರ ನಿವಾಸಿ ಪ್ರೀಸ್ಕಾ ರೇಮೇತಿ ಫರ್ನಾಂಡೀಸ್ (59) ಮೃತರು. ಇವರು ತನ್ನ ಮಗ ಆಗ್ನೇಲ್ ರುಜಾರ ಫರ್ನಾಂಡೀಸ್ ಈತನೊಂದಿಗೆ ಮೇ5 ರಂದು ಸಂಜೆ ವೇಳೆಗೆ ಹೊನ್ನಾವರದಿಂದ ಕುಮಟಾ ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದಾಗ ರಸ್ತೆಯ ಮೇಲೆ ಅಡ್ಡ ಬಂದ ನಾಯಿ ತಪ್ಪಿಸಲು ಹೋಗಿ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಪ್ರೀಸ್ಕಾ ರೇಮೇತಿ ಅವರ ತಲೆಗೆ ಗಂಭೀರ ಸ್ವರೂಪದ ಗಾಯವಾಗಿದ್ದು, ಕುಮಟಾ ಸಕಾರಿ ಆಸ್ಪತ್ರೆಗೆ ಸಾಗಿಸಿ ಪ್ರಥಮ ಚಿಕಿತ್ಸೆ ನೀಡಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ಉಡುಪಿಗೆ ಸಾಗಿಸುತ್ತಿರುವಾಗ ಮಾರ್ಗ ಮಧ್ಯೆ ಮೃತರಾಗಿದ್ದಾರೆ. ಕುಮಟಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಳೆಗಾಲ ಆರಂಭಕ್ಕೆ ಮುನ್ನ ಎಚ್ಚೆತ್ತುಕೊಳ್ಳಿ

ಕಣ್ಣು ಮುಚ್ಚಿ ಕುಳಿತರೇ ಅಧಿಕಾರಿಗಳು? | ಮಳೆಗಾಲದಲ್ಲಿ ಆಗುವ ಅವಾಂತರಕ್ಕೆ ಹಾಕಬೇಕಿದೆ ಬ್ರೇಕ್

ವಿನುತಾ ಹೆಗಡೆ

ಶಿರಸಿ: ಮಳೆಗಾಲ ಆರಂಭವಾಗಿದೆ. ಈಗಾಗಲೇ ಜಿಲ್ಲೆಯ ಹಲವು ಭಾಗಗಳಲ್ಲಿ ಮಳೆ ನೀರಿನಿಂದಾಗಿ ಹಲವು ತಗ್ಗು ಪ್ರದೇಶದ ಜನ ತತ್ತರಿಸಿದ್ದಾರೆ. ಅಲ್ಲದೇ ಪಶ್ಚಿಮಘಟ್ಟ ಪ್ರದೇಶಕ್ಕೊಳಪಡುವ ಜಿಲ್ಲೆಯಲ್ಲಿ ಕರಾವಳಿ ಸಂಪರ್ಕಿಸಬೇಕೆಂದರೆ ಇರುವುದು ಘಟ್ಟದ ಹೆದ್ದಾರಿಗಳೇ ಆಗಿದೆ. ಆದರೆ ಹೆದ್ದಾರಿ ಪ್ರಾಧಿಕಾರದವರು ಮಳೆಗಾಲದ ತಯಾರಿಯಾಗಿ ಏನನ್ನೂ ಮಾಡಿಕೊಂಡಂತೆ ಮಾಕುತ್ತಿಲ್ಲ ಎಂದು ಸಾರ್ವಜನಿಕರು ಆಕ್ಷೇಪಿಸಿದ್ದಾರೆ.

ದಾಂಡೇಲಿಯಿಂದ ಕಾರವಾರ ಸಂಪರ್ಕಿಸುವ ಅಣಶಿ ಘಾಟ್, ಯಲ್ಲಾಪುರದಿಂದ ಅಂಕೋಲಾ ಸಂಪರ್ಕಿಸುವ ಅರಬೈಲ್ ಘಾಟ್, ಶಿರಸಿಯಿಂದ ಕುಮಟ ಸಂಪರ್ಕಿಸುವ ದೇವಿಮನೆ ಘಾಟ್, ಸಿದ್ದಾಪುರದಿಂದ ಹೊನ್ನಾವರ ಸಂಪರ್ಕಿಸುವ ಮಾಸ್ತಿಮನೆ ಘಟ್ಟ ಇವೆಲ್ಲವೂ ಮಳೆಗಾದಲ್ಲಿ ಒಂದಲ್ಲ ಒಂದು ಅವಾಂತರ ಸೃಷ್ಟಿಸಿ ಸವಾರರಿಗೆ ಅನಾನುಕೂಲ ಮಾಡಿಯೇ ಇರುವ ಹೆದ್ದಾರಿಯ ಘಟ್ಟಗಳು.

ಕಳೆದ ಎರಡು ಮೂರು ವರ್ಷಗಳಿಂದ ಮಳೆಗಾಲದಲ್ಲಿ ಅರಬೈಲ್ ಘಟ್ಟದಲ್ಲಿಯ ಗುಡ್ಡ ಕುಸಿತದಿಂದಾಗಿ ರಾಷ್ಟ್ರೀಯ ಹೆದ್ದಾರಿ ಸಂಪರ್ಕವೇ ಸ್ಥಗಿತಗೊಂಡಿತ್ತು. ಇನ್ನು ಅಣಶಿ ಘಟ್ಟದಲ್ಲಿ ಕಲ್ಲು ಬಂಡೆಯೊಂದು ಬಿದ್ದ ಪರಿಣಾಮವಾಗಿ ಅವಾಂತರ ಸೃಷ್ಟಿಯಾಗಿತ್ತು. ಇತ್ತ ದೇವಿಮನೆ ಘಟ್ಟದಲ್ಲಿ ಎರಡು ದಿನ ಭಾರೀ ವಾಹನ



ಸಂಚಾರವನ್ನೇ ಸ್ಥಗಿತಗೊಳಿಸಲಾಗಿತ್ತು. ಸಿದ್ದಾಪುರದಿಂದ ಕುಮಟಾ ಹೋಗುವ ರಸ್ತೆಯೇ ಕುಸಿದ ಪರಿಣಾಮ ಸವಾರರಿಗೆ ಫಜೀತಿ ತಂದಿಟ್ಟಿತು.

ಮಳೆಗಾಲದಲ್ಲಿ ಉಂಟಾಗುವ ಕೆಲ ಅವಾಂತರಗಳು ಎಷ್ಟೇ ಮುನ್ನೆಚ್ಚರಿಕೆ ತೆಗೆದುಕೊಂಡರೂ ನಿಲ್ಲದು. ಆದರೆ ಹೆದ್ದಾರಿಯಲ್ಲಿನ ಬಿರುಕು, ತಡೆ ಗೋಡೆ ನಿರ್ಮಾಣ, ಹೆದ್ದಾರಿಯಲ್ಲಿ ಗುಡ್ಡ ಕುಸಿಯುವ ಲಕ್ಷಣಗಳೆಲ್ಲವೂ ಮೊದಲೇ ಘೋಚರಿಸುವುದರಿಂದ ಇವನ್ನೆಲ್ಲ ಮಳೆಗಾಲ ಆರಂಭವಾಗುವ ಮುಂಚೆಯೇ ಸರಿ ಪಡಿಸಿಕೊಂಡು ರಸ್ತೆ ಸಂಚಾರ ಸುಗಮವಾಗುವಂತೆ ಮಾಡಬಹುದು. ಆದರೆ ಇದುವರೆಗೂ ಹೆದ್ದಾರಿಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡಂತೆ ಕಾಣುತ್ತಿಲ್ಲವೆಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಹೆದ್ದಾರಿಯಲ್ಲಿ ಬೀಳ ಬಹುದಾದ ಮರಗಳ ಕಟಾವು, ಮಣ್ಣು ಕುಸಿದು ಸಂಚಾರ ಸ್ಥಗಿತವಾಗದಂತೆ ಮೊದಲೇ ಮಣ್ಣಿನ ತೆರವು ಮಾಡಬೇಕು. ಅಲ್ಲದೇ ಹೆದ್ದಾರಿಯಿಂದ ಸೀದಾ ಪ್ರಪಾತಕ್ಕೆ ವಾಹನಗಳು ಬೀಳದಂತೆ ತಡೆಗೋಡೆಗಳ ನಿರ್ಮಾಣವನ್ನೂ ಮಾಡಬೇಕು ಆದರೆ ಇದಾವುದನ್ನು ಮಾಡಲಾಗಿಲ್ಲವೆಂದು ಸವಾರರಿಗೆ ಕಾಣುತ್ತಿದೆ. ಮಳೆಗಾಲ ಆರಂಭವಾಗಿದೆ ಈಗಾಗಲೆ ರಸ್ತೆಗೆ ಬೀಳುವ ಮರಗಳನ್ನು ಅರಣ್ಯ ಇಲಾಖೆ ತೆರವುಗೊಳಿಸಿದರೆ ಮುಂದಾಗುವ ಅನಾಹುತವನ್ನು ಈಗಲೇ ನಿಲ್ಲಿಸಬಹುದು ಎನ್ನುವುದು ಪ್ರಾಜ್ಞರ ಅಭಿಪ್ರಾಯ. ಮಳೆಗಾಲ ಆರಂಬಾದವರೂ ಅದನ್ನು ಮಾಡಿಲ್ಲವೆಮದಾದರೆ ಹೇಗೆ ಎಂದು ಸಂಬಂಧಿಸಿದ ಅಧಿಕಾರಿ ವರ್ಗದವರನ್ನು ಸಾರ್ವಜನಿಕರು ಆಡಿಕೊಳ್ಳುತ್ತಿದ್ದಾರೆ.

ಮಳೆಗಾಲದಲ್ಲಿ ಹೆದ್ದಾರಿಯಮೇಲೆ ಗುಡ್ಡ ಕುಸಿದರೆ ಸವಾರರಿಗೆ ತೊಂದರೆಯಾಗದ ರೀತಿಯಲ್ಲಿ ಮಣ್ಣನ್ನು ತೆರವುಗೊಳಿಸಲು ಅರಬೈಲ್ ಘಟ್ಟದ ಕೆಳಗಡೆಯೊಂದು ಮೇಲಗಡೆಯೊಂದು ಮಣ್ಣು ತೆಗೆಯುವ ಯಂತ್ರವನ್ನು ಇಟ್ಟಿದ್ದೇವೆ. ಹೆದ್ದಾರಿಯಲ್ಲಿ ಕೆಲ ಭಾಗದಲ್ಲಿ ತಡೆ ಗೋಡೆ ನಿರ್ಮಿಸಲು ನಮಗೆ ಅಧಿಕಾರವಿಲ್ಲ. ಅದು ಪಶ್ಚಿಮಘಟ್ಟ ಪ್ರದೇಶಕ್ಕೊಳಪಡುವ ಅರಣ್ಯ ಪ್ರದೇಶವಾದ್ದರಿಂದ ಅದು ಸಾಧ್ಯವಾಗದು. ರಾಜ್ಯ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸಿದ ರಾಷ್ಟ್ರೀಯ ಹೆದ್ದಾರಿಯದು, ಆಗ ಹೆದ್ದಾರಿ ಮಾಡುವಾಗಲೇ ಅನುಮತಿ ತೆಗೆದುಕೊಂಡಿದ್ದರೆ ನಾವು ತಡೆಗೋಡೆ ನಿರ್ಮಿಸಲು ಸಾಧ್ಯವಾಗುತ್ತಿತ್ತು. ಇನ್ನು ರಸ್ತೆಯಲ್ಲಿ ಬಿರುಕು ಬಿಟ್ಟಿರುವ ಬಗ್ಗೆ ಮಾಹಿತಿ ಇಲ್ಲ.

-ಮಹೇಶ ನಾಯ್ಕ,
ಸಹಾಯಕ ಅಭಿಯಂತರರು

ಪ್ರಯಾಣಿಕರೇ ಎಚ್ಚರ ವಹಿಸಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆಗಾಲದ ಸಂಚಾರವೆಂದರೆ ಅದೊಂದು ಭಯಾನಕ ಸಂಚಾರವೇ ಸರಿ ಎಂದು ಪ್ರವಾಸಿಗರು ಆಡಿಕೊಳ್ಳುವಂತೆ ನಮ್ಮ ಜಿಲ್ಲೆಯ ಹೆದ್ದಾರಿಗಳು ಇವೆ. ಹೆದ್ದಾರಿ ದೊಡ್ಡದಾಗಿಸಲು ಅರಣ್ಯ ಇಲಾಖೆ ಅಡ್ಡಿ, ಮೊದಲೇ ಮರ ತೆರವು ಗೊಳಿಸಲು ಅರಣ್ಯ ಇಲಾಖೆಯ ಕಾನೂನು ಅಡ್ಡಿ. ಇನ್ನು ಹೆದ್ದಾರಿಯಲ್ಲಿ ಸಂಚರಿಸುವ ಭಾರೀ ವಾಹನಗಳು ಪ್ರಪಾತಕ್ಕೆ ಬೀಳದಂತೆ ತಡೆ ಗೋಡೆ ನಿರ್ಮಿಸಲು ಅರಣ್ಯ ಇಲಾಖೆಯ ಪರವಾನಗಿ ಇಲ್ಲ. ಇದೆಲ್ಲದರ ಮಡುವೆ ಗುಡ್ಡಕ್ಕೆ ಗುಡ್ಡವೇ ಕುಸಿದು ರಸ್ತೆಗೆ ಅಡ್ಡಲಾಗಿ ಬೀಳುತ್ತವೆ. ಹೆದ್ದಾರಿಯವರು ಆ ಮಣ್ಣನ್ನು ತೆರವು ಗೊಳಿಸುತ್ತಾರೆಯೇ ಹೊರತಾಗಿ ತುರ್ತು ಪರಿಸ್ಥಿತಿಗೆ ಪಕ್ಕದಲ್ಲಿ ರಸ್ತೆಯಂತೂ ತೆರೆಯುವ ಅಧಿಕಾರವೂ ಅವರಿಗಿಲ್ಲ. ಮಳೆಗಾಲದಲ್ಲಿಯ ಹೆದ್ದಾರಿಯ ಬಗ್ಗೆ ಎಲ್ಲ ಪ್ರಯಾಣಿಕರೂ ಮೊದಲೇ ಎಚ್ಚರಿಕೆ ವಹಿಸುವುದು ಅವಶ್ಯ.

ಅರಣ್ಯಾಧಿಕಾರಿ ಮೇಲೆ ಹಣ ದುರುಪಯೋಗ ಆರೋಪ

ಆರ್‌ಎಫ್‌ಒ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಲು ಕೊಪ್ಪದ ಬಸವರಾಜ ಪಾಟೀಲ್ ಆಗ್ರಹ

ಶಿರಸಿ: ಮುಂಡಗೋಡ ತಾಲೂಕಿನ ಕಾತೂರ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಎಂ.ಎಚ್.ನಾಯ್ಕ ಮೇಲೆ ಹಣ ದುರುಪಯೋಗ ಆರೋಪವನ್ನು ಮಾಡಲಾಗಿದ್ದು, ಅವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಮುಂಡಗೋಡ ತಾಲೂಕಿನ ಇಂದೂರಿನ ಸಮೀಪದ ಕೊಪ್ಪದ ಬಸವರಾಜ ಪಾಟೀಲ್ ಆಗ್ರಹಿಸಿದ್ದಾರೆ.

ಕಳೆದ ಎರಡು ವರ್ಷದಿಂದ ಸರ್ಕಾರದಿಂದ ಅರಣ್ಯ ಅಭಿವೃದ್ಧಿಗಾಗಿ ಮಂಜೂರಾದ ಕೋಟ್ಯಂತರ ರೂ. ಹಣ ದುರ್ಬಳಕೆ ಮಾಡಿಕೊಂಡು ತಮ್ಮ ಖಜಾನೆ ತುಂಬಿಸಿಕೊಂಡಿದ್ದಾರೆ. ಶೇ.30 ರಷ್ಟು ಕಾಮಗಾರಿ ಮಾಡಿರುವುದು ಕಂಡು ಬಂದಿರುವ ಸತ್ಯ. ತಾವು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರ್‌ಎಫ್.ಒ.ರನ್ನು ಅಮಾನತ್ತುಗೊಳಿಸಿ, ಸೂಕ್ತ ಕಾನೂನು ಕ್ರಮ ಕೈಗೊಂಡು ನುಂಗಿದ ಹಣವನ್ನು ವಸೂಲಿ ಮಾಡಿ ಸರ್ಕಾರಿ ಖಜಾನೆಗೆ ಜಮೆ ಮಾಡಿಸುವಂತೆ ಅಪರ ಪ್ರಧಾನ ಅರಣ್ಯ ಜಾಗೃತ ದಳದ ಅಧಿಕಾರಿಗೆ ಪತ್ರ ಬರೆಯಲಾಗಿದೆ. ಇದನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೂ ಸಹ ಲಗತ್ತಿಸಲಾಗಿದೆ.

ಕಾತೂರ ವಲಯ ಅರಣ್ಯ ಪ್ರದೇಶದಲ್ಲಿ ಕಾತೂರ, ಛಳಗೇರಿ, ಕೂರ್ಲಿ, ರಾಮಾಪೂರ, ಪಾಳಾ ವ್ಯಾಪ್ತಿಯಲ್ಲಿ ತಲಾ ಒಂದು ಪ್ಲಾಂಟೇಶನ್ ಇವೆ. ಭದ್ರಾಪೂರ ಅರಣ್ಯ ಪುದೇಶದಲ್ಲಿ ಎರಡು ಪ್ಲಾಂಟೇಷನ್ ಇವೆ. ಪ್ರತಿ ಪ್ಲಾಂಟೇಷನ್‌ಗೆ 25 ಹೆಕ್ಟೇರ್ ನಂತೆ ಎಲ್ಲಾ ಪ್ಲಾಂಟೇಷನ್‌ನಲ್ಲಿ ಐದು ಸಾವಿರ ಸಸಿಗಳನ್ನು ಹಚ್ಚಿದ್ದಾರೆ. ಪಿಟ್ (ಗುಂಡಿ) ಸೈಜ್ ಕಡಿಮೆ ಮಾಡಿ ಲೂಟಿ ಹೊಡೆಯಲಾಗಿದೆ. ಅರಣ್ಯ ಸಸಿ ಪ್ಯಾಂಟೇಷನ್‌ನಲ್ಲಿ ಹಚ್ಚುವ ಜೂನ್ ತಿಂಗಳಲ್ಲಿ ವಿಡಿಂಗ್ (ಕಳೆ ನಿಯಂತ್ರಣ) ಮಾಡಬೇಕಿದೆ. ಅದನ್ನು ಮಾಡದೇ ಪ್ರತಿ ಹೆಕ್ಟೇರ್‌ಗೆ 3 ಸಾವಿರ ರೂ. ಖರ್ಚು ಹಾಕಿದ್ದಾರೆ. ಅಕ್ಟೋಬರನಲ್ಲಿ ಎರಡನೇ ಹಂತದ ವಿಡಿಂಗ್ ಮಾಡಬೇಕಿದೆ ಅದನ್ನೂ ಸಹ ಮಾಡದೇ ಪ್ರತಿ ಹೆಕ್ಟೇರಿಗೆ 1800 ರೂ. ಖರ್ಚು ಹಾಕಿದ್ದಾರೆ. ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳ ಗುತ್ತಿಗೆಯನ್ನು ಎಂ.ಎಚ್.ನಾಯ್ಕ ತಮ್ಮ ಆತ್ಮೀಯರಿಗೆ ನೀಡಿ, ಕಳಪೆ ಕಾಮಗಾರಿ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಡಾಟಾ ಎಂಟ್ರಿ ವಾಚಮನ್ ಹೆಸರಿನಲ್ಲಿ ಲೂಟಿ ಕಂಪೌಂಡ್ ವಾಚಮನ್ ಹೆಸರಿನಲ್ಲಿ ಲೂಟಿ, ನಕಲಿ ದಾಖಲೆ ಸೃಷ್ಟಿಸಿ ವಾಚರ್ಸ್‌ಗೆ ಕಡಿಮೆ ಹಣಕೊಟ್ಟು ವಂಚನೆ ಮಾಡಿದ್ದಲ್ಲದೇ, ಮುಂಡಗೋಡ ತಾಲೂಕಿನ ಕಾತೂರ ಅರಣ್ಯ ಇಲಾಖೆಗೆ ಸರ್ಕಾರದಿಂದ ವಿವಿಧ ಯೋಜನೆ ಮತ್ತು ಶೀರ್ಷಿಕೆಯಡಿ ಪ್ರತಿ ವರ್ಷ ಕೋಟಿಗಳ ಲೆಕ್ಕದಲ್ಲಿ ಅರಣ್ಯ ಅಭಿವೃದ್ಧಿಗೆ ಹಣ ಮಂಜೂರಿಯಾಗುತ್ತದೆ. ಸರ್ಕಾರದಿಂದ ಬಂದ ಹಣ ಸಮರ್ಪಕವಾಗಿ ಅರಣ್ಯ ಅಭಿವೃದ್ಧಿಗೆ ಖರ್ಚು ಮಾಡಿದ್ದರೆ, ಕಾತೂರ ಅರಣ್ಯ ವಲಯ ರಾಜ್ಯದಲ್ಲಿಯೇ ಬೃಹತ್ ಸಂಪದ್ಭರಿತ ಅರಣ್ಯ ಆಗುತ್ತಿತ್ತು. ಆದರೆ ಎರಡು ವರ್ಷದಿಂದ ಆರ್‌ಎಫ್‌ಒ ಎಂ.ಎಚ್.ನಾಯ್ಕ ಪರ್ಸಂಟೇಜ್ ದಂದೆ ನಡೆಸಿ ಅರಣ್ಯ ಅಭಿವೃದ್ಧಿಯನ್ನು ಸಂಪೂರ್ಣ ನಾಶ ಮಾಡಿದ್ದಾರೆ. ಕಾತೂರ ಆರ್‌ಎಫ್‌ಒ, ಅಧಿಕಾರಿಗಳು ಗುತ್ತಿಗೆದಾರರು, ತಮ್ಮ ಸಿಬ್ಬಂದಿ ವರ್ಗದವರಿಗೆ 35 ರೂ. ಕಮಿಷನ್ ನೀಡಿ, ಉಳಿದ 35 ರೂ. ತಮ್ಮ ಮನೆಯ ಟ್ರಜರಿ ತುಂಬಿಸಿಕೊಂಡಿದ್ದಾರೆ. ಕೂಡಲೇ ಇವರನ್ನು ಅಮಾನತು ಮಾಡಿ, ಸಮಗ್ರ ತನಿಖೆ ನಡೆಸಿ, ಅವರು ಪಡೆದ ಹಣವನ್ನು ಮರಳಿ ಸರ್ಕಾರದ ಖಜಾನೆಗೆ ಜಮೆ ಮಾಡಿಸಬೇಕು ಎಂದು ಪತ್ರ ಬರೆದು ಆಗ್ರಹಿಸಿದ್ದಾರೆ.

ತನಿಖಾಧಿಕಾರಿ ನೇಮಕ

ಆರ್.ಎಫ್.ಒ. ಅಮಾನತ್ತು ಮಾಡಲು ಪತ್ರ ಬರೆದ ಹಿನ್ನಲೆಯಲ್ಲಿ ಅರಣ್ಯ ಸಂಚಾರಿ ದಳದ ವಲಯ ಅರಣ್ಯಾಧಿಕಾರಿ ಅವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿದ್ದು, ಅವರು ಬಸವರಾಜ ಪಾಟೀಲ್‌ಗೆ ವಿಚಾರಣೆಗೆ ಹಾಜಾರಾಗಲು ಪತ್ರ ಬರೆದಿದ್ದಾರೆ. ಪಾಟೀಲ್ ಸಹ ವಿವರಗಳನ್ನು ನೀಡಿದ್ದು, ಅಕ್ರಮ ನಡೆದಿರುವ ಕುರಿತೂ ಸಹ ಉಲ್ಲೇಖಿಸಿ ಮಾಹಿತಿ ನೀಡಿದ್ದಾರೆ. ಕಾರಣ ಆರ್.ಎಫ್.ಒ. ಮೇಲೆ ಮುಂದಿನ ಕ್ರಮ ಏನಾಗಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಅಕ್ರಮವಾಗಿ ಎತ್ತುಗಳ ಸಾಗಾಟ: ಇಬ್ಬರ ಬಂಧನ

ಕುಮಟಾ : ತಾಲೂಕಿನ ಹೊಳೆಗದ್ದೆಯ ಟೋಲ್ ನಾಕಾ ಬಳಿ ಬೊಲೆರೋ ವಾಹನದಲ್ಲಿ 2 ಎತ್ತುಗಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ವೇಳೆ ಕುಮಟಾ ಪೊಲೀಸರು ದಾಳಿ ನಡೆಸಿ ವಾಹನ ಸಮೇತ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಸುಮಾರು 80 ಸಾವಿರ ರೂ. ಮೌಲ್ಯದ ಎತ್ತುಗಳ ಅಕ್ರಮ ಸಾಗಾಟ ನಡೆದಿತ್ತು ಎನ್ನಲಾಗಿದೆ. ಪ್ರಕರಣದಲ್ಲಿ ಗದಗ ಲಕ್ಷ್ಮೇಶ್ವರ ಮೂಲದ ನಿವಾಸಿ, ಬೊಲೆರೋ ವಾಹನ ಚಾಲಕ ಆಸೀಫ್ ಮೆಹಬೂಬ್ ಸಾಬ್ ಮಣಿಯಾರ್, ಲಕ್ಷ್ಮೇಶ್ವರದ ಸುರಣಗಿಯ ಬಸವರಾಜ ಹನುಮಂತ ಶಿಳ್ಳೆಕ್ಯಾತ್ ಬಂಧಿತ ಆರೋಪಿಗಳು. ಪ್ರಕರಣಕ್ಕೆ ಸಂಬಂಧಿಸಿದಂತೆ, ಭಟ್ಕಳ ಮೂಲದ ಅಬ್ದುಲ್ ಸಲಾಂ ಸಿದ್ದಿಬಾಪಾ ನಿಜಾಮುದ್ದೀನ್ ತಲೆಮರೆಸಿಕೊಂಡಿದ್ದಾನೆ.

80 ಸಾವಿರ ರೂ. ಮೌಲ್ಯದ ಎರಡು ಎತ್ತುಗಳನ್ನು ಬೊಲೆರೋ ವಾಹನದಲ್ಲಿ ತುಂಬಿ, ಮೇವು, ನೀರು ನೀಡದೇ ಹಿಂಸಾತ್ಮಕವಾಗಿ ಭಟ್ಕಳಕ್ಕೆ ಸಾಗಾಟ ಮಾಡುತ್ತಿದ್ದರು ಎನ್ನಲಾಗಿದೆ. ಕುಮಟಾ ಪಿಎಸ್‌ಐ ಮಂಜುನಾಥ ಗೌಡರ್ ಹಾಗೂ ರವಿ ಗುಡ್ಡಿ ಅವರು ವಾಹನದಲ್ಲಿದ್ದ ಜಾನುವಾರುಗಳನ್ನು ರಕ್ಷಣೆ ಮಾಡಿದ್ದು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೃಷಿಕ ಚಿನ್ಮಯ ಹೆಗಡೆಗೆ ಉದ್ಯಾನ ರತ್ನ ಪ್ರಶಸ್ತಿ

ಗುಜರಾತಿನ ಕೃಷಿ ಯುನಿವರ್ಸಿಟಿಯಲ್ಲಿ ಪ್ರಶಸ್ತಿ ಪ್ರದಾನ | ಜಿಲ್ಲೆಯ ಕೃಷಿ ಹಿರಿಮೆಗೆ ಪ್ರಶಸ್ತಿಯ ಗರಿ

ಶಿರಸಿ: ಕೃಷಿಯಲ್ಲಿ ವಿವಿಧ ತಂತ್ರಜ್ಞಾನ ಬಳಸುವುದರ ಮೂಲಕ ಬಹುವಿಧದ ಬೆಳೆಗಳನ್ನು ಬೆಳೆಯುವುದು, ಜಮೀನಿನಲ್ಲಿ ಆಧುನಿಕ ಮತ್ತು ಸುಧಾರಿತ ನೀರಾವರಿ ವ್ಯವಸ್ಥೆ ಮಾಡಿ ಕೃಷಿಯಲ್ಲಿ ಯಶಸ್ಸು ಗಳಿಸಿರುವ ದೇಶದ 12 ಜನರಿಗೆ ದೆಹಲಿಯ ಲೇಟ್ ಅಮಿತ್ ಸಿಂಗ್ ಮೆಮೊರಿಯಲ್ ಫೌಂಡೇಶನ್ ಉದ್ಯಾನ ರತ್ನ ಪ್ರಶಸ್ತಿ ನೀಡಿ ಗೌರವಿಸಿದ್ದು, ಶಿರಸಿ ತಾಲೂಕಿನ ಅಗಸಾಲ ಬೊಮ್ನಳ್ಳಿಯ ಯುವ ಕೃಷಿಕ ಚಿನ್ಮಯ ದಿವಾಕರ ಹೆಗಡೆ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಗುಜರಾತ್‌ನ ಜುನಾಗಡದಲ್ಲಿರುವ ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಜುನಾಗಡ ಯುನಿವರ್ಸಿಟಿಯ ಉಪ ಕುಲಪತಿ, ಆಂದ್ರ ಪ್ರದೇಶದ ವೈಎಸ್‌ಆರ್ ಯುನಿವರ್ಸಿಟಿಯ ಉಪಕುಲಪತಿ, ಅಹಮದಾಬಾದ್ ಇಸ್ರೋ ನಿರ್ದೇಶಕರು, ಐಸಿಎಆರ್ ನಿರ್ದೇಶಕರು ಉಪಸ್ಥಿತರಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಆಯ್ದ 12 ಜನ ಕೃಷಿಕರಿಗೆ ಈ ಪ್ರಶಸ್ತಿ ನೀಡಿ ಗೌರವಿಸಿದೆ. ದೆಹಲಿಯ ಸಂಸ್ಥೆಗೆ ಶಿರಸಿಯ ಖ್ಯಾತ ಕೃಷಿ ಸಹಕಾರಿ ಸಂಸ್ಥೆಯಾದ ದಿ ಅಗ್ರಿಕಲ್ಚರಲ್ ಸರ್ವಿಸ್ ಡೆವಲಪ್‌ಮೆಂಟ್ ಸೊಸೈಟಿಯು ಮುತುವರ್ಜಿ ವಹಿಸಿ, ಯುವ ಕೃಷಿಕ ಚಿನ್ಮಯ ಹೆಗಡೆ ಇವರ ಸುಧಾರಿತ ನೀರಾವರಿ ವ್ಯವಸ್ಥೆ ಮತ್ತು ಕೃಷಿ ಕುರಿತು ಮಾಹಿತಿ ಒದಗಿಸಿತ್ತು.

ಚಿನ್ಮಯ ಹೆಗಡೆ ಅವರ ಕೃಷಿ ಕೆಲಸದ ಕುರಿತು ಅನೇಕ ಹಿರಿಯ ಕೃಷಿಕರು, ಕೃಷಿ ವಿಜ್ಞಾನಿಗಳು, ಹಿರಿಯ ತೋಟಗಾರಿಕಾ ಅಧಿಕಾರಿಗಳು ಸಂತಸ ವ್ಯಕ್ತಪಡಿಸಿದ್ದು, ಕೃಷಿಯಲ್ಲಿ ಇವರ ಸಾಧನೆಯನ್ನು ಶ್ಲಾಘಿಸಿದ್ದಾರೆ. ಇವರ ತೋಟದಲ್ಲಿ ಅಡಕೆ, ಕಾಳುಮೆಣಸು, ಗಿಡ್ಡ ತೆಂಗು (ಎಳನೀರು), ನೇಂದ್ರ ಬಾಳೆ, ಏಲಕ್ಕಿ ಬಾಳೆ, ಪಪ್ಪಾಯಿ, ಬೆಣ್ಣೆ ಹಣ್ಣು, ಭತ್ತ ಹೀಗೆ ಮಿಶ್ರ ಕೃಷಿಗೆ ಆದ್ಯತೆ ನೀಡಿದ್ದಾರೆ.

ಕೃಷಿಯೆಡೆಗಿನ ಸೆಳೆತ, ಮನೆಯವರ ಸಹಕಾರ ಸಾಧನೆಗೆ ಪ್ರೇರಣೆ. ಮೂಲತಃ ಕೃಷಿ ಕುಟುಂಬದಿಂದ ಬಂದಿರುವ ಚಿನ್ಮಯ ಹೆಗಡೆ ವಿದ್ಯಾಭ್ಯಾಸದ ನಂತರ ಉದ್ಯೋಗಕ್ಕಾಗಿ ಬೆಂಗಳೂರು ಸೇರಿದ್ದರು. ಆದರೆ ಸ್ವತಃ ಏನಾದರೂ ಮಾಡಬೇಕೆಂಬ ಹಂಬಲ, ಹಠ ಅವರನ್ನು ಮತ್ತೆ ಊರಿನೆಡೆಗೆ ಕರೆಸಿತ್ತು. ಹಿಂತಿರುಗಿ ಬಂದವರು ಸುತ್ತಮುತ್ತಲಿನ ಅನೇಕ ಕೃಷಿಕರ ತೋಟಗಳಿಗೆ ಭೇಟಿ ನೀಡಿ, ಇಲಾಖೆಗಳಿಂದ ಮಾಹಿತಿ ಪಡೆದು ನೇರವಾಗಿ ಕೃಷಿ ಸಮುದ್ರಕ್ಕೆ ಧುಮುಕಿಯೇ ಬಿಟ್ಟರು. ಆಮೇಲೆ ಹಿಂತಿರುಗಿ ನೋಡಿದ ಮಾತೇ ಇಲ್ಲ. ಕೃಷಿಯಲ್ಲಿ ಪ್ರಯೋಗ ಮಾಡುವ ಮೂಲಕ ಹೊಸತುಗಳಿಗೆ ನಾಂದಿಯಾದರು. ಆ ಮೂಲಕ ಕೃಷಿಯೆಂದರೆ ಮೂಗು ಮುರಿಯುವ ಜನರ ಮಧ್ಯ ವಿಭಿನ್ನರಾಗಿ, ಸಾಧಕ ವ್ಯಕ್ತಿಯಾಗಿ ಚಿನ್ಮಯ ಹೆಗಡೆ ನಿಲ್ಲುತ್ತಾರೆ.

ಇವರ ಕೃಷಿಕೆ ಮನೆ ಮಂದಿಯ ಸಹಕಾರವೇ ಪ್ರೇರಣೆ ಎನ್ನುತ್ತಾರೆ ಚಿನ್ಮಯ ಹೆಗಡೆ. ದಿವಾಕರ ಹೆಗಡೆ ಮತ್ತು ಮಮತಾ ದಂಪತಿಯ ಪುತ್ರನಾಗಿರುವ ಇವರಿಗೆ, ಓರ್ವ ಸಹೋದರನಿದ್ದಾನೆ. ಸಹೋದರ ಪವನ್ ಹೆಗಡೆ ವೃತ್ತಿಯಲ್ಲಿ ಸಿಎ ಆಗಿದ್ದರೂ, ಪ್ರವೃತ್ತಿಯಿಂದ ಕೃಷಿಕನಾಗಿ ಅಣ್ಣ ಚಿನ್ಮಯನ ಕೃಷಿ ಸಾಧನೆಗೆ ಸಹಕಾರಿಯಾಗಿದ್ದಾನೆ.

ಜಿಲ್ಲೆಯ ರೈತರಿಗೆ ಬೆಳೆ ವಿಮಾ ಕಂತು ಪಾವತಿಸಲು ಕೋರಿಕೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಷ್ಕೃತ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ 2024-25 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆಯಾಶ್ರಿತ ಭತ್ತ, ಮಳೆಯಾಶ್ರಿತ ಮುಸುಕಿನ ಜೋಳ, ಮಳೆಯಾಶ್ರಿತ ಹತ್ತಿ ಮತ್ತು ನೀರಾವರಿ ಭತ್ತದ ಬೆಳೆಗಳಿಗೆ ವಿಮಾ ಸೌಲಭ್ಯವನ್ನು ಮುಂದುವರೆಸಲಾಗಿದ್ದು, ರೈತರು ಬ್ಯಾಂಕುಗಳಿಗೆ ಘೋಷಣೆಗಳನ್ನು ಸಲ್ಲಿಸುವಂತೆ ಕೋರಲಾಗಿದೆ.

ಭತ್ತ (ಮಳೆಯಾಶ್ರಿತ ಮತ್ತು ನೀರಾವರಿ) ಗ್ರಾಮ ಪಂಚಾಯತ ಮಟ್ಟದಲ್ಲಿ ಆಗಸ್ಟ್ 14 ರೊಳಗೆ, ಮುಸುಕಿನ ಜೋಳ (ಮಳೆಯಾಶ್ರಿತ) ಗ್ರಾಮ ಪಂಚಾಯತ ಮಟ್ಟದಲ್ಲಿ ಹಾಗೂ ಹತ್ತಿ (ಮಳೆಯಾಶ್ರಿತ) ಹೊಬಳಿ ಮಟ್ಟದಲ್ಲಿ ಜುಲೈ 31 ರೊಳಗೆ ಸಲ್ಲಿಕೆಯಾಗಬೇಕಿದೆ.

ಈ ಯೋಜನೆಯಡಿ ಪ್ರಸ್ತುತ ಸಾಲು ಹಾಗೂ ಹಂಗಾಮಿನಲ್ಲಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆದ/ಪಡೆಯದ ರೈತರು ಯೋಜನೆಯಡಿ ಭಾಗವಹಿಸಬಹುದು. ವಿಮಾ ಕಂತಿನ ಹಣವನ್ನು ಬೆಳೆ ಸಾಲ ಪಡೆಯುವ ರೈತರು ತಮ್ಮ ಸಾಲ ಪಡೆಯುವ ಹಣಕಾಸು ಸಂಸ್ಥೆಗಳಲ್ಲಿ ತುಂಬಬೇಕು. ಬೆಳೆ ಸಾಲ ಪಡೆಯದ ರೈತರು ಕೃಷಿ ವಿಮಾ ಯೋಜನೆಗೆ ನಿಗದಿಪಡಿಸಿದ ಹಣಕಾಸು ಸಂಸ್ಥೆ ಹಾಗೂ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಗಳಲ್ಲಿ ಕಂತು ತುಂಬಿ ಬೆಳೆಯನ್ನು ವಿಮೆಗೊಳಪಡಿಸಬಹುದು.

ಯೋಜನೆಯಡಿಯಲ್ಲಿ ಬೆಳೆ ಸಾಲ ಪಡೆಯದ ರೈತರು ಅಂದಾಜು/ಉಪೇಕ್ಷಿತ ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲೇ ಪಾಲ್ಗೊಳ್ಳಬಹುದು. ಬೆಳೆ ಸಾಲ ಪಡೆಯದ ರೈತರು ಬೆಳೆ ವಿಮೆಗೆ ನೋಂದಾಯಿಸಿದ ನಂತರ ಬೇರೆ ಬೆಳೆ ಬಿತ್ತನೆ ಮಾಡಿದ್ದಲ್ಲಿ ಹಾಗೂ ಬೆಳೆ ಸಾಲ ಪಡೆದ ರೈತರು ಸಾಲದ ಅರ್ಜಿಯಲ್ಲಿ ನಮೂದಿಸಿದ ಬೆಳೆ ಬದಲಾಗಿ ಬೇರೆ ಬೆಳೆ ಬಿತ್ತನೆ ಮಾಡಿದ್ದಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿದ ಅವಧಿಯೊಳಗಾಗಿ ನೋಂದಾಯಿಸಿದ ಆರ್ಥಿಕ ಸಂಸ್ಥೆಗಳಲ್ಲಿ ಬಿತ್ತನೆ ದೃಢೀಕರಣ ಪತ್ರ ನೀಡಿ ವಿಮೆ ಮಾಡಿಸಿದ ಬೆಳೆಯನ್ನು ಬದಲಾಯಿಸತಕ್ಕದ್ದು ಅಂತಹ ಸಂದರ್ಭದಲ್ಲಿ ಹೆಚ್ಚುವರಿ ವಿಮಾ ಕಂತಿನ ವ್ಯತ್ಯಾಸದ ಮೊತ್ತವನ್ನು ರೈತರು ಭರಿಸತಕ್ಕದ್ದು ಅಥವಾ ಹೆಚ್ಚುವರಿ ವಿಮಾ ಕಂತನ್ನು ಪಾವತಿಸಿದ್ದಲ್ಲಿ, ರೈತರಿಗೆ ವಿಮಾ ಸಂಸ್ಥೆಗಳು ಮರುಪಾವತಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಅಗ್ರೀಕಲ್ಚರ ಇನಶ್ಯೂರನ್ಸ್ ಕಂಪನಿ ಪವನ ಕುಮಾರ ದೂ.ಸಂ: 9440512879, ಬ್ಯಾಂಕುಗಳು, ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಹಾಗೂ ಹತ್ತಿರದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಜಂಟಿ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳು ಮಾದಕ ವಸ್ತುವಿಗೆ ಮರುಳಾಗಬೇಡಿ: ಶೇರಿಗಾರ್

ನವಲಗುಂದ: ಯುವಕರು ಮಾದಕ ವಸ್ತುಗಳ ಸೇವನೆಯಿಂದ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ದಿನೇಶ್ ಶೇರಿಗಾರ್ ಹೇಳಿದರು. ಅಣ್ಣಿಗೇರಿ ಪಟ್ಟಣದ ಬಾಪೂಜಿ ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಿಗೆ ಧ. ಗ್ರಾ. ಯೋಜನೆ ವತಿಯಿಂದ ವಿಶ್ವ ತಂಬಾಕು ವಿರೋಧಿ ದಿನಾಚರಣೆಯ ಅಂಗವಾಗಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು. ಶಾಲಾ-ಕಾಲೇಜು ವಿದ್ಯಾರ್ಥಿಗಳು ತಮ್ಮ ಮನೆಗಳಲ್ಲಿ ದುಶ್ಚಟ ದುರಭ್ಯಾಸ ಮಾಡುವವರಿಗೆ ಸರಿಯಾದ ಮಾಹಿತಿಯನ್ನು ಕೊಟ್ಟು ಸರಿದಾರಿಗೆ ತರುವಂತೆ ಪ್ರಯತ್ನಿಸಬೇಕೆಂದು ತಿಳಿಸಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಎಂ.ಎಸ್.ಪೂಜಾರ್ ಮಾತನಾಡಿ, ವಿದ್ಯಾರ್ಥಿಗಳಿಗೆ ದುಶ್ಚಟ, ದುರಭ್ಯಾಸಗಳನ್ನು ಮಾಡುವುದರಿಂದ ತಮ್ಮ ದೇಹದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಉದ್ಘಾಟನೆಯನ್ನು ಶಾಲೆಯ ಪ್ರಾಚಾರ್ಯರಾದ ಎಂ. ಡಿ.ಧಾರವಾಡ ಅವರು ದೀಪ ಬೆಳಗುವುದರ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಒಕ್ಕೂಟದ ಅಧ್ಯಕ್ಷತೆ ನಿರ್ಮಲ ಅಧ್ಯಕ್ಷತೆ ವಹಿಸಿದ್ದರು. ಜೆ.ವಿ.ಕೆ ಸಮನ್ವಯಾಧಿಕಾರಿ ಆಶಾ ಶಿಕ್ಷಕರಾದ ಶಿಫಾಖಾನಂ ಧಾರವಾಡ, ಶಬೀನಾ ಅಣ್ಣಿಗೇರಿ, ಶಿವಾನಂದ ಧಾರವಾಡ ಸಂಸ್ಥೆಯ ಸೇವಾ ಪ್ರತಿನಿಧಿ ದೇವಿಕಾ ಅಣ್ಣಿಗೇರಿ, ಮಹಾದೇವಿ ವರಕೇರಿ ಇದ್ದರು.

ಲಕ್ಷಾಂತರ ರು. ಅಕ್ರಮ ಗೋವಾ ಮದ್ಯ ವಶ, ಇಬ್ಬರು ಪೊಲೀಸರ ವಶಕ್ಕೆ

ಕಲಘಟಗಿಯ ಯಲ್ಲಾಪುರ-ಕಲಘಟಗಿ ರಾಷ್ಟ್ರೀಯ ಹೆದ್ದಾರಿ ದಾಬಾವೊಂದರ ಬಳಿ ಸಾಗಾಟ ಮಾಡುತ್ತಿದ್ದ ಲಕ್ಷಾಂತರ ರು. ಮೌಲ್ಯದ ಅಕ್ರಮ ಗೋವಾ ಮದ್ಯವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿದ ಕಲಘಟಗಿ ಪೊಲೀಸರು ಇನ್ನೋವಾ ಕ್ರಿಸ್ಟಾ ಕಾರಿನಲ್ಲಿ ಸಾಗಾಟ ಮಾಡುತ್ತಿದ್ದ, ಹಲವು ಬ್ರ್ಯಾಂಡಿನ ಅಕ್ರಮ ಗೋವಾ ಮದ್ಯವನ್ನು ವಶಪಡಿಸಿಕೊಂಡ ಪೊಲೀಸರು ಜಗದೀಶಗೌಡ ಹಾಗೂ ಪ್ರತಾಪ ಎಂಬ ಇಬ್ಬರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ದಾಳಿಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ಮಹಾಂತೇಶ ಗೌಡ,ಗೋಪಾಲ ಫಿರಗಿ,ರವಿ ಪೂಜಾರ, ಲೋಕೇಶ, ಶ್ರೀಧರ ಸೇರಿದಂತೆ ಹಲವರು ಭಾಗಿಯಾಗಿದ್ದರು. ಪೊಲೀಸರ ಕಾರ್ಯಕ್ಕೆ ಧಾರವಾಡ ಪೊಲೀಸ್‌ವರಿಷ್ಠಾಧಿಕಾರಿಗಳು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಕಾಶಿ ವಿಶ್ವಾರಾಧ್ಯ ಗುರುಕುಲ ಪ್ರವೇಶಕ್ಕೆ ಅರ್ಜಿ ಆಹ್ವಾನ

ಧಾರವಾಡ: ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾಗಿರುವ ಉತ್ತರಪ್ರದೇಶದ ಕಾಶಿ ಜ್ಞಾನ ಪೀಠದಲ್ಲಿರುವ ಶತಮಾನ ಕಂಡಿರುವ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲಕ್ಕೆ ಪ್ರಸಕ್ತ ಶೈಕ್ಷಣಿಕ ವರ್ಷಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಮತ್ತು ನೆರೆಯ ರಾಜ್ಯಗಳಲ್ಲಿರುವ ವೀರಶೈವ ಧರ್ಮದ ವಿಭಿನ್ನ ಮಠಗಳ ಮರಿದೇವರು, ಉತ್ತರಾಧಿಕಾರಿಗಳು ವಟುಗಳು ಮತ್ತು ವಿದ್ಯಾರ್ಥಿಗಳು ಗುರುಕುಲ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ಕನಿಷ್ಠ 8ನೇ ತರಗತಿ ಅಥವಾ 10 ನೇ ತರಗತಿಗಳಲ್ಲಿ ಸಂಸ್ಕೃತ ವಿಷಯವನ್ನು ತೆಗೆದುಕೊಂಡು ಉತ್ತೀರ್ಣರಾದವರು ಅಥವಾ ಕರ್ನಾಟಕದ ಸಂಸ್ಕೃತ ಪರೀಕ್ಷೆಗಳಲ್ಲಿ ಪ್ರಥಮ ಇಲ್ಲವೆ ಕಾವ್ಯ ಪರೀಕ್ಷೆಗಳನ್ನು ಪಾಸಾದವರು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯಲ್ಲಿ ಪೂರ್ಣ ಹೆಸರು, ಅಂಚೆ ವಿಳಾಸ, ವೈಯಕ್ತಿಕ ವಿವರಗಳು, ದೂರವಾಣಿ ಸಂಖ್ಯೆಗಳನ್ನು ನಮೂದಿಸಬೇಕು. ಅರ್ಜಿಯ ಜೊತೆಗೆ ಪೂರ್ವಾಧ್ಯಯನದ ಪ್ರಮಾಣ ಪತ್ರ ಮತ್ತು ಆಧಾರ ಕಾರ್ಡ್‌ಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು. ದಿ. 25-06-2024 ರೊಳಗಾಗಿ ಶ್ರೀಶೈಲ ಶಾಸ್ತ್ರಿಗಳು, ಪ್ರಾಚಾರ್ಯರು, ಶ್ರೀಸಿದ್ಧಲಿಂಗ ಶಿವಾಚಾರ್ಯ ವೇದಾಗಮ ಸಂಸ್ಕೃತ ಪಾಠಶಾಲೆ, ಶ್ರೀಕ್ಷೇತ್ರ ಯಡೂರು - 591213 ತಾ. ಚಿಕ್ಕೋಡಿ, ಜಿ. ಬೆಳಗಾವಿ. 9008967789' ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು.

ಸಮಾಚಾರ ಸಣ್ಣದಲ್ಲ

ವೃತ್ತಿಪರ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಧಾರವಾಡ: ಪ್ರಸಕ್ತ ಸಾಲಿನಲ್ಲಿ ನಿಗದಿ ಗ್ರಾಮದಲ್ಲಿರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಎರಡು ವರ್ಷದ ಫಿಟ್ಟರ್ ಹಾಗೂ ಎಲೆಕ್ಟ್ರಿಷಿಯನ್ ವೃತ್ತಿಪರ ಕೋರ್ಸ್‌ಗಳಲ್ಲಿ ತರಬೇತಿ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ವೆಬ್‌ಸೈಟ್ www.cite.Karnataka.gov.in ನಲ್ಲಿ ಜೂನ್ 09, 2024 ರೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಿರಿಯ ತರಬೇತಿ ಅಧಿಕಾರಿ ಆನಂದ ನಾಯಕವಾಡಿ 8217627744 ರಾಚಯ್ಯ ಧಾಬಿಮಠ 7760520427 ಅವರನ್ನು ಸಂಪರ್ಕಿಸಬಹುದು ಎಂದು ನಿಗದಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಂಗಶಿಕ್ಷಣ ತರಬೇತಿಗೆ ಅರ್ಜಿ ಆಹ್ವಾನ

ಧಾರವಾಡ: 2024-25ನೇ ಸಾಲಿಗೆ ರಂಗ ಶಿಕ್ಷಣದಲ್ಲಿ ಹತ್ತು ತಿಂಗಳ ಡಿಪ್ಲೊಮೊ ಕೋರ್ಸ್‌ಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ರಂಗತರಬೇತಿ ಪಡಯುವ ವಿದ್ಯಾರ್ಥಿಗಳು ರಂಗಭೂಮಿಯ ಪ್ರಾಥಮಿಕ ಅನುಭವ ಹೊಂದಿರಬೇಕು. ಅರ್ಜಿ ಸಲ್ಲಿಸಲು 18 ರಿಂದ 28 ವರ್ಷಗಳು ತುಂಬಿದ ಅಭ್ಯರ್ಥಿಗಳಾಗಿರಬೇಕು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಮತ್ತು ವಿದ್ಯಾರ್ಥಿ ವೇತನ ನೀಡಲಾಗುವುದು. ಆಸಕ್ತವುಳ್ಳ ವಿದ್ಯಾರ್ಥಿಗಳು ಕಚೇರಿಯಲ್ಲಿ ಅರ್ಜಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಜೂನ್ 20, 2024 ಸಂಜೆ 5.30ರೊಳಗೆ ಸಲ್ಲಿಸಬಹುದು ಅಥಾವಾ ಅಂಚೆಯ ಮೂಲಕ ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:0821-2512639, 9148827720 ಗೆ ಸಂಪರ್ಕಿಸಬಹುದು ಅಥವಾ ಕಚೇರಿಯ ವೆಬ್‌ಸೈಟ್ http://rangayanamysore.karnataka.gov.in ಗೆ ಭೇಟಿ ನೀಡಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಅಂತರ್ ಶಾಲಾ ಚಿತ್ರಕಲಾ ಸ್ಪರ್ಧೆ

ಹುಬ್ಬಳ್ಳಿ: ಇನ್ನರವೀಲ್ ಕ್ಲಬ್ ಆಫ್ ಹುಬ್ಬಳ್ಳಿ ಮಿಡ್ ಟೌನ್ ಆಶ್ರಯದಲ್ಲಿ ಜೂನ್ 9 ರಂದು ರವಿವಾರ ಅಂತರ್ ಶಾಲಾ ಚಿತ್ರಕಲಾ ಸ್ಪರ್ಧೆಯನ್ನು ಹುಬ್ಬಳ್ಳಿ ದೇಶಪಾಂಡೆ ನಗರದಲ್ಲಿರುವ ರೋಟರಿ ಪ್ರೈಮರಿ ಸ್ಕೂಲ್‌ನಲ್ಲಿ ಆಯೋಜಿಸಲಾಗಿದೆ. ಹು-ಧಾ ಅವಳಿನಗರ ಹಾಗೂ ಸಮೀಪದ ಪ್ರದೇಶಗಳಲ್ಲಿರುವ ಶಾಲಾ ಮಕ್ಕಳು ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 9845153318, 7204499927 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

130 ಶಾಲೆಗಳ 400 ಕೊಠಡಿ ಶಿಥಿಲ

ಅಪಾಯದ ಅಂಚಿನಲ್ಲಿರುವ ಶಾಲೆಗಳು | ದುರಸ್ತಿ ಭಾಗ್ಯಕ್ಕೆ ಕಾದಿವೆ ಮೇಲ್ಛಾವಣಿಗಳು

ಗದಗ: ಸರಕಾರದ ನಿರ್ಲಕ್ಷ್ಯ, ಸಂಬಂಧಿಸಿದ ಇಲಾಖೆ ನಿರಾಸಕ್ತಿ, ಅಸಮರ್ಪಕ ನಿರ್ವಹಣೆ ಪರಿಣಾಮ ಜಿಲ್ಲೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ 130 ಶಾಲೆಗಳ 400 ಕೊಠಡಿಗಳ ದುರಸ್ತಿ ಕಾರ್ಯವಾಗಬೇಕಿದೆ.

ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಸುರಿದ ಮಳೆ ಹಾಗೂ ಬಿರುಗಾಳಿಗೆ ನಾಲ್ಕೈದು ದಶಕಗಳ ಹಳೆಯ ಕಟ್ಟಡಗಳ ಗೋಡೆ ಬಿರುಕು ಬಿಟ್ಟಿರುವುದು, ಛಾವಣಿ ಶಿಥಿಲಗೊಂಡಿರುವುದು, ಹೆಂಚುಗಳು ಒಡೆದು ಹೋಗಿರುವುದು, ಸ್ಲ್ಯಾಬ್ ಉದುರುತ್ತಿರುವುದು, ಯಾವುದೇ ಕ್ಷಣದಲ್ಲಿ ತಳಪಾಯ ಕುಸಿಯುವ ಹಂತದಲ್ಲಿರುವ ಶಾಲೆಗಳು ಪಾಲಕರು, ಶಿಕ್ಷಕರ ಆತಂಕಕ್ಕೆ ಕಾರಣವಾಗಿವೆ.

ಶಿಕ್ಷಣ ಇಲಾಖೆಯೇ ಪಟ್ಟಿ ಮಾಡಿದಂತೆ ತಕ್ಷಣಕ್ಕೆ ಪುನರ್ ನಿರ್ಮಾಣಗೊಳ್ಳಬೇಕಾದ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕೊಠಡಿಗಳ ಸಂಖ್ಯೆಯೇ 383 ರಷ್ಟಿದೆ. ಅಪಾಯಕ್ಕೆ ಆಸ್ಪದವಾಗದಂತೆ ಶಿಥಿಲಗೊಂಡ ಕಟ್ಟಡಗಳಲ್ಲಿ ತರಗತಿ ನಡೆಸದೇ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಎರಡು ವಿಭಾಗದ ಶಾಲೆಗಳಲ್ಲಿ 212 ಹೆಚ್ಚುವರಿ ಕೊಠಡಿಗಳು ಲಭ್ಯವಿವೆ. ಅವುಗಳಲ್ಲಿಯೇ ತರಗತಿ ನಡೆಸಲಾಗುತ್ತದೆ ಎನ್ನುತ್ತಾರೆ ಅಧಿಕಾರಿಗಳು.

ಜಿಲ್ಲೆಯ 184 ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗಳು, 432 ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳು, 115 ಸರಕಾರಿ ಪ್ರೌಢಶಾಲೆಗಳ ಪೈಕಿ 522 ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳಿದ್ದರೆ, ಅವುಗಳಲ್ಲಿ 400 ಕೊಠಡಿಗಳನ್ನು ತಕ್ಷಣಕ್ಕೆ ದುರಸ್ತಿ ಕಾಮಗಾರಿ ನಡೆಸಲೇಬೇಕಾಗಿದೆ.

ಅನುದಾನ ಬಿಡುಗಡೆ

ಕೊಠಡಿಗಳ ದುರಸ್ತಿಗೆ 2.75 ಕೋಟಿ ರು. ಬಿಡುಗಡೆ ಗದಗ ಗ್ರಾಮೀಣ 9.64 ಲಕ್ಷ ರು., ನರಗುಂದ 40.64 ಲಕ್ಷ ರೂ., ಮುಂಡರಗಿ 40.64 ಲಕ್ಷ ರು., ಹಾಗೂ ಶಿರಹಟ್ಟಿ ತಾಲೂಕಿಗೆ 175 ಲಕ್ಷ ರೂ. ಸೇರಿ ಶಾಲಾ ಕೊಠಡಿಗಳ ದುರಸ್ತಿಗೆ 2.75 ಕೋಟಿ ರು. ಅನುದಾನ ಬಿಡುಗಡೆಯಾಗಿದ್ದು, ಚುನಾವಣಾ ನೀತಿ ಸಂಹಿತೆ ಪೂರ್ಣಗೊಂಡ ಬಳಿಕ ಟೆಂಡರ್ ಪ್ರಕ್ರಿಯೆ ಮುಗಿದು, ಕೂಡಲೇ ಕಾಮಗಾರಿ ಆರಂಭವಾಗಲಿದೆ.

ಜಿಲ್ಲೆಯಲ್ಲಿ ಈಗಾಗಲೇ ಶಾಲಾ ಕೊಠಡಿಗಳ ದುರಸ್ತಿಗೆ ಅನುದಾನ ಬಿಡುಗಡೆಯಾಗಿದೆ. ಕೆಲವೆಡೆ ಕಾಮಗಾರಿಯೂ ಆರಂಭವಾಗಿದೆ. ಟೆಂಡರ್ ಕರೆದು ಮಾಡಬೇಕಾದ ಕಾಮಗಾರಿಗಳು ಮಾತ್ರ ಬಾಕಿಯಿವೆ. ಈ ಸಂಬಂಧ ಜಿಪಂ ಸಿಇಒ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಈಗಾಗಲೇ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿ ಆರಂಭವಾಗಿದೆ.

-ಎಂ.ಎ. ರಡ್ಡೇರ, ಉಪನಿರ್ದೇಶಕ ಸಾರ್ವಜನಿಕ ಶಿಕ್ಷಣ ಇಲಾಖೆ

ವಕೀಲರ ಸಂಘಕ್ಕೆ ಓಲೇಕಾರ ಆಯ್ಕೆ

ಕಲಘಟಗಿ: ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಅಣ್ಣಪ್ಪ. ಟಿ. ಓಲೇಕಾರ ಆಯ್ಕೆಯಾಗಿದ್ದಾರೆ.

ಶುಕ್ರವಾರ ನಡೆದ ಅಧ್ಯಕ್ಷ ಆಯ್ಕೆಯ ಚುನಾವಣೆಯಲ್ಲಿ ಬಹುಮತ ಪಡೆದು ಆಯ್ಕೆಯಾಗಿದ್ದಾರೆ. ಇವರ ಪ್ರತಿಸ್ಪರ್ಧಿಯಾಗಿ ಸ್ಪರ್ಧಿಸಿದ್ದ, ವಿ.ಬಿ.ಶಿವನಗೌಡ್ರ ಮತ್ತು ಮಂಜುನಾಥ್ ದನಿಗೊಂಡ ಕಡಿಮೆ ಮತಗಳನ್ನ ಪಡೆದು ಪರಾಭವಗೊಂಡರು. ವಕೀಲರ ಸಂಘಕ್ಕೆ ಅವಿರೋಧವಾಗಿ ಉಪಾಧ್ಯಕ್ಷರಾಗಿ ಕೆ ಬಿ ಗುಡಿಹಾಳ, ಪ್ರಧಾನ ಕಾರ್ಯದರ್ಶಿಯಾಗಿ ಸಿ.ಬಿ.ಧಾಸ್ತಿಕೊಪ್ಪ, ಖಜಾಂಚಿಯಾಗಿ ಶೋಭಾ ಬಳಿಗಾರ, ಮಹಿಳಾ ಪ್ರತಿನಿಧಿಯಾಗಿ ಗೀತಾ ಮಟ್ಟಿ ಆಯ್ಕೆಯಾಗಿದ್ದಾರೆ.

ಇದೇ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿಗಳಾದ ಬಿ.ವಿ.ಪಾಟೀಲ್, ಆರ್.ಎಸ್. ಉಡುಪಿ, ಎಸ್.ಟಿ. ತೆಗ್ಗಿಹಳ್ಳಿ ಎಸ್.ಜೆ. ಸುಂಕದ, ಎಂ.ಎಂ . ಚಲವಾದಿ, ಎಸ್.ಎನ್. ಉಪಾಧ್ಯ, ಎಸ್.ಜಿ.ಕುಲಕರ್ಣಿ, ಜಿ.ಬಿ ಕರಲಟ್ಟಿ, ರಾಕೇಶ ಅಳಗವಾಡಿ, ಎನ್.ಎಂ. ಇಂಗಳಗಿ, ಆರ್.ಕೆ. ಮಲ್ಲಾಡದ ಸೇರಿದಂತೆ ಹಿರಿಯ ನ್ಯಾಯವಾದಿಗಳು ಉಪಸ್ಥಿತರಿದ್ದರು.

ಸಕಾಲಕ್ಕೆ ಬೀಜ, ಗೊಬ್ಬರ ಪೂರೈಸಲು ಡಿಸಿ ಸೂಚನೆ

ತುಪ್ಪರಿ ಹಳ್ಳ, ಬೆಣ್ಣೆಹಳ್ಳದ ಪ್ರವಾಹದ ಬಗ್ಗೆ ನಿರಂತರ ನಿಗಾ, ಮುನ್ನೆಚ್ಚರಿಕೆ ವಹಿಸಿ: ಜಿಲ್ಲಾಧಿಕಾರಿ ದಿವ್ಯ ಪ್ರಭು

ಧಾರವಾಡ: ಜಿಲ್ಲೆಯಲ್ಲಿ ಮುಂಗಾರು ಪೂರ್ಣ ಆವರಿಸಿದ್ದು, ಮಳೆ ತೀವ್ರಗೊಳ್ಳುತ್ತಿದೆ. ಜಿಲ್ಲೆಯ ಎರಡು ಮುಖ್ಯ ಹಳ್ಳಗಳಾದ ತುಪ್ಪರಿ ಹಳ್ಳ ಮತ್ತು ಬೆಣ್ಣೆ ಹಳ್ಳದ ಪ್ರವಾಹದ ಬಗ್ಗೆ ನಿರಂತರ ನಿಗಾ ವಹಿಸಿ, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಎರಡು ಹಳ್ಳಗಳಿಗೆ ಸಂಬಂಧಿಸಿದ ಪಿಡಿಒಗಳು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಸ್ಥಾನಿಕವಾಗಿ ಕೇಂದ್ರ ಸ್ಥಾನದಲ್ಲಿದ್ದು, ತಾಲೂಕು ಆಡಳಿತಕ್ಕೆ ಮತ್ತು ಜಿಲ್ಲಾಡಳಿತಕ್ಕೆ ನೀರಿನ ಮಟ್ಟದ ಏರಿಕೆ ಹಾಗೂ ಪ್ರವಾಹದ ಮಾಹಿತಿ ನೀಡಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ಜರುಗಿಸಿ, ಜಿಲ್ಲೆಯ ಮಳೆ ಪ್ರಮಾಣ ಮತ್ತು ಹಾನಿ, ಕುಡಿಯುವ ನೀರು ಮತ್ತು ಮೇವು ಸಂಗ್ರಹಣೆ ಹಾಗೂ ಬೆಳೆಹಾನಿ ಪರಿಹಾರ ಪ್ರಗತಿ ಕುರಿತು ಪರಿಶೀಲಿಸಿದರು.

ಜಿಲ್ಲೆಯಲ್ಲಿ ಮುಂಗಾರು ಮಳೆ ಉತ್ತಮವಾಗಿ ಸುರಿಯುತ್ತಿದೆ. ರೈತರು ಬಿತ್ತನೆ ಆರಂಭಿಸಿದ್ದಾರೆ. ಕೆರೆಗಳು ತುಂಬುತ್ತಿವೆ. ಹಳ್ಳಗಳು ಹರಿಯುತ್ತಿವೆ. ಈ ಹಿನ್ನಲೆಯಲ್ಲಿ ಕಂದಾಯ, ಕೃಷಿ ಮತ್ತು ಪೊಲೀಸ್ ಇಲಾಖೆ ಜಾಗೃತಿ ವಹಿಸಿ, ಜನರ ಜೀವ ಹಾನಿ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮತ್ತು ರೈತರಿಗೆ ಸಕಾಲದಲ್ಲಿ ಬೀಜ, ಗೊಬ್ಬರ ಸೀಗುವಂತೆ ಕ್ರಮವಹಿಸಬೇಕೆಂದು ತಿಳಿಸಿದರು. ಜಿಲ್ಲೆಯ ಎರಡು ಮುಖ್ಯ ಹಳ್ಳಗಳಾದ ತುಪ್ಪರಿಹಳ್ಳ ಮತ್ತು ಬೆಣ್ಣಿಹಳ್ಳದ ಪ್ರವಾಹ ಉಂಟಾದರೆ ಸಮರ್ಥವಾಗಿ ನಿರ್ವಹಿಸಿ, ಜನ-ಜಾನುವಾರ ಜೀವ ಹಾನಿ ಆಗದಂತೆ ಮುಂಜಾಗ್ರತೆ ವಹಿಸಬೇಕು. ಅಗತ್ಯವಿದ್ದಲ್ಲಿ ತಕ್ಷಣ ಬಾಧಿತ ಗ್ರಾಮಗಳ ಜನರನ್ನು ಸ್ಥಳಾಂತರಿಸಲು ಸ್ಥಳ ಗುರುತಿಸಿ, ಸಿದ್ಧತೆ ಮಾಡಿಕೊಳ್ಳುವಂತೆ ತಹಸಿಲ್ದಾರರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಜಿಲ್ಲೆಯ ಎಲ್ಲ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಕರ್ತವ್ಯದ ಕೇಂದ್ರ ಸ್ಥಾನದಲ್ಲಿರಬೇಕು. ಮಳೆ ಹಾನಿ, ಮಳೆ ಪ್ರವಾಹ, ಸಾರ್ವಜನಿಕ ದೂರುಗಳ ಬಗ್ಗೆ ಜಿಲ್ಲಾ ಹಾಗೂ ತಾಲೂಕು ಆಡಳಿತಕ್ಕೆ ವರದಿ ನೀಡಿ, ಸಾರ್ವಜನಿಕರಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಅವರು ಹೇಳಿದರು.

ಧಾರವಾಡ ಎಪಿಎಂಸಿಯಲ್ಲಿನ ಮೇವು ಬ್ಯಾಂಕ್ ದಲ್ಲಿ ಮಾತ್ರ ಮೇವು ಸರಬರಾಜುಗೆ ಬೇಡಿಕೆ ಇದ್ದು, ಅಲ್ಲಿ 100 ಟನ್ ಮೇವು ದಾಸ್ತಾನಿದೆ. ಉಳಿದಂತೆ ಜಿಲ್ಲೆಯ ಮೇವು ಬ್ಯಾಂಕಗಳಿಂದ ಮೇವು ಖರೀದಿಸಲು ಜನರ ಬೇಡಿಕೆ ಇಲ್ಲ. ಈಗಾಗಲೆ ಕೆಲವು ಕಡೆ ಹಸಿರು ಮೇವು ಲಭ್ಯವಾಗುತ್ತಿರುವದರಿಂದ ಮೇವಿನ ಬೇಡಿಕೆ ಕಡಿಮೆ ಆಗಿದೆ. ಸ್ಥಳೀಯ ಶಾಸಕರೊಂದಿಗೆ ಸಮಾಲೋಚಿಸಿ ಮೇವು ಬ್ಯಾಂಕ್ ಮುಂದುವರಿಕೆ ಬಗ್ಗೆ ಮುಂದಿನ ಕ್ರಮಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಬಿತ್ತನೆ ಸಮಯದಲ್ಲಿ ರೈತರು ಡಿಎಪಿ ಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಸಲ್ಲಿಸಿ, ಪಡೆದುಕೊಂಡರು. ಬೆಳೆ ಎತ್ತರಕ್ಕೆ ಬಂದ ಕೂಡಲೆ ಯೂರಿಯಾ ಗೊಬ್ಬರಕ್ಕೆ ರೈತರ ಬೇಡಿಕೆ ಹೆಚ್ಚಳವಾಗುತ್ತದೆ. ಮತ್ತು ನಿರಂತರ ಮಳೆಯಿಂದಾಗಿ ಭೂಮಿಯಲ್ಲಿ ನೀರು ನಿಂತು ಬೆಳೆಗಳು ಹಳದಿ ವರ್ಣಕ್ಕೆ ತಿರುಗಿದಾಗ ಯೂರಿಯಾ ಗೊಬ್ಬರ ಬೇಡಿಕೆ ಹೆಚ್ಚುತ್ತದೆ. ಈ ಸಂದರ್ಭದಲ್ಲಿ ರೈತರಿಗೆ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸಿ, ಜಿಲ್ಲೆಯ ರೈತರ ಯೂರಿಯಾ ಗೊಬ್ಬರ ಬೇಡಿಕೆಗೆ ಅನುಗುಣವಾಗಿ, ಯೂರಿಯಾ ದಾಸ್ತಾನು ಮಾಡಿಕೊಳ್ಳಬೇಕು. ಕೃಷಿ ಇಲಾಖೆ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ನಿರಂತರ ಮಳೆಯಿಂದಾಗಿ ಕೆರೆಗಳು ತುಂಬುತ್ತಿವೆ. ಕೆರೆಯ ಒಡ್ಡು ಒಡೆಯದಂತೆ ಮತ್ತು ಸುಸ್ಥಿತಿಯ ಗೇಟ್‌ಗಳು ಇರುವಂತೆ ಕೆರೆ ಮಾಲೀಕತ್ವ ಹೊಂದಿರುವ ಇಲಾಖೆಗಳು ಕ್ರಮವಹಿಸಬೇಕು. ಕೆರೆಯ ದಂಡೆಯಲ್ಲಿ ಸಾರ್ವಜನಿಕರು ಕೆರೆಗೆ ಇಳಿಯದಂತೆ ಎಚ್ಚರಿಕೆ ಫಲಕಗಳನ್ನು ಹಾಕಬೇಕು ಎಂದು ಹೇಳಿದರು.

ಹಳ್ಳಗಳು ತುಂಬಿ ಹರಿಯುವದರಿಂದ ಗಿಡಗಂಟಿ, ತ್ಯಾಜ್ಯವಸ್ತುಗಳು ಹಳ್ಳದಲ್ಲಿ ಅಡ್ಡಲಾಗಿ, ನೀರು ಸರಾಗವಾಗಿ ಹರಿದು ಹೋಗಲು ಅಡಚಣೆ ಮಾಡುತ್ತವೆ. ಅಂತಹುಗಳನ್ನು ಈಗಲೇ ತೆರವುಗೊಳಿಸಬೇಕು. ಹಳ್ಳದ ಪ್ರವಾಹ ಹೆಚ್ಚಳ ಕುರಿತು ನಿರಂತರ ಮಾಹಿತಿ ಪಡೆದು, ಸಾರ್ವಜನಿಕರಿಗೆ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಅವರು ಹೇಳಿದರು.

ಮಳೆ ನೀರು, ಪ್ರವಾಹದಿಂದಾಗಿ ನೀರಿನ ಹರಿವು ಹೆಚ್ಚಳವಾಗಿ ಸೇತುವೆಗಳು ಮುಳುಗುತ್ತವೆ. ಇಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯತ ಹಾಗೂ ಪೊಲೀಸ್ ಕಾವಲು ಹಾಕಿ ಜನರನ್ನು ಸಂಚರಿಸದಂತೆ ತಡೆಯಬೇಕು. ಅಗತ್ಯವಾದಲ್ಲಿ ತಾತ್ಕಾಲಿಕ ತಡೆಗೊಡೆ ನಿರ್ಮಿಸಿ, ಸಾರ್ವಜನಿಕರ ಸಂಚಾರ ನಿಯಂತ್ರಿಸಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಿರಂತರವಾಗಿ ನಡೆಯುತ್ತಿದ್ದು, ಕೆಲವು ಇಲಾಖೆ ಅಧಿಕಾರಿಗಳು ಪೂರ್ವಾನುಮತಿ ಪಡೆಯದೇ ಸಭೆಗೆ ಗೈರಾಗುತ್ತಿದ್ದಾರೆ. ಇಂದಿನ ಸಭೆಗೆ ಮುಖ್ಯವಾಗಿ ಲೋಕೋಪಯೋಗಿ ಇಲಾಖೆ ಇಇ ಬರಬೇಕಿತ್ತು. ಅನುಮತಿ ಪಡೆಯದೇ ಗೈರಾಗಿದ್ದಾರೆ. ಮುಂದಿನ ಸಭೆಗೆ ಹಾಜರಾಗದಿದಲ್ಲಿ, ಅಮಾನತ್ತು ಮಾಡಿ ಆದೇಶಿಸಲಾಗುತ್ತದೆ. ಇದು ಬಹು ಮುಖ್ಯ ಸಭೆ ಆಗಿರುವದರಿಂದ ಸಂಬಂಧಿಸಿದ ಎಲ್ಲ ಇಲಾಖೆ ಅಧಿಕಾರಿಗಳು ತಪ್ಪದೇ ಸಭೆಗೆ ಹಾಜರಾಗಬೇಕೆಂದು ಅವರು ಎಚ್ಚರಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ವಿಜಯಕುಮಾರ ಆಜೂರ, ಉಪವಿಭಾಗಾಧಿಕಾರಿ ಶಾಲಂ ಹುಸೇನ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಶಶಿ ಪಾಟೀಲ, ಮಹಾನಗರ ಪಾಲಿಕೆ ಅಧೀಕ್ಷಕ ಅಭಿಯಂತರ ತಿಮ್ಮಪ್ಪ,ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಕಿರಣಕುಮಾರ ಎಂ., ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೆ.ಸಿ. ಭದ್ರಣ್ಣವರ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನೀಯರ್ ಆರ್.ಎಂ. ಸೊಪ್ಪಿಮಠ ಭಾಗವಹಿಸಿದ್ದರು.

ಅಧಿಕಾರಿಗಳಿಗೆ ಎಚ್ಚರಿಕೆ

ಜಿಲ್ಲೆಯಲ್ಲಿ ಈಗಾಗಲೇ ಅಗತ್ಯಕ್ಕಿಂತ ಹೆಚ್ಚು ವಿವಿಧ ಪ್ರಕಾರದ ಬೀಜ ಮತ್ತು ಗೊಬ್ಬರಗಳ ದಾಸ್ತಾನು ಇದೆ. ರೈತರ ಬೇಡಿಕೆಗೆ ಅನುಗುಣವಾಗಿ ಬೀಜ, ಗೊಬ್ಬರ ಪೂರೈಸಲಾಗುತ್ತಿದೆ. ಒಟ್ಟಾರೆ ಜಿಲ್ಲೆಯಲ್ಲಿ ಕಳೆದ ಒಂದು ವಾರದಲ್ಲಿ ಸರಾಸರಿ ಶೇ. 22 ರಷ್ಟು ಭೂಮಿಯಲ್ಲಿ ಬಿತ್ತನೆ ಆಗಿದೆ. ಕಳೆದ ಎರಡಮೂರು ದಿನಗಳಿಂದ ಜಿಲ್ಲೆಯಲ್ಲಿ ಉತ್ತಮ ಮಳೆ ಆಗುತ್ತಿರುವದರಿಂದ ಬಿತ್ತನೆ ಕಾರ್ಯ ಮುಂದಿನ ದಿನಗಳಲ್ಲಿ ವೇಗ ಪಡೆಯುತ್ತದೆ. ಕೃಷಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಯಾವುದೇ ಬೀಜ, ಗೊಬ್ಬರದ ಕೊರತೆ, ಕೃತಕ ಅಭಾವ ಹಾಗೂ ನಿಗದಿತ ದರಕ್ಕಿಂತ ಹೆಚ್ಚು ಬೆಲೆಗೆ ಮಾರಾಟವಾಗದಂತೆ ಎಚ್ಚರಿಕೆ ವಹಿಸಬೇಕು. ರಶೀದಿ ಇಲ್ಲದೆ ಬೀಜ, ಗೊಬ್ಬರ ಮಾರಾಟ, ಅನಧಿಕೃತ ದಾಸ್ತಾನು, ಬೇರೆ ಗೊಬ್ಬರಗಳ ಜಿಂಕ್ ಲಿಂಕ್ ಕಂಡು ಬಂದಲ್ಲಿ ತಕ್ಷಣ ಅಧಿಕಾರಿಗಳು ಎಫ್.ಐ.ಆರ್. ದಾಖಲಿಸಿ, ಅಂತಹ ಅಂಗಡಿ ಸೀಜ್ ಮಾಡಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ನಿರ್ದೇಶಿಸಿದರು.

ಕುಡಿಯುವ ನೀರು ಸರಬರಾಜು

ಬರಗಾಲದ ಹಿನ್ನಲೆಯಲ್ಲಿ ಜಿಲ್ಲೆಯ 51 ಗ್ರಾಮಗಳಲ್ಲಿ 84 ಖಾಸಗಿ ಕೊಳವೆಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ನಿರಂತರ ಮಳೆಯಿಂದಾಗಿ ಬೋರವೆಲ್‌ಗಳು ಪುನಶ್ಚೇತನ ಆಗುತ್ತವೆ. ಕೆರೆಗಳಿಗೆ ನೀರು ಬರುತ್ತಿದೆ. ಆದ್ದರಿಂದ ಮುಂದಿನ ದಿನಗಳ ಪರಿಶೀಲಿಸಿ, ಸ್ಥಳೀಯ ಸಂಸ್ಥೆಗಳ ಬೋರವೆಲ್ ರಿಚಾರ್ಜ್ ಆಗಿದ್ದರೆ, ಖಾಸಗಿ ಬೋರವೆಲ್ ಬಳಕೆ ಬಗ್ಗೆ ಪುನರ್ ಪರಿಶೀಲಿಸಬೇಕು. ಅಗತ್ಯವಿರುವ ಗ್ರಾಮಗಳಲ್ಲಿ ಪರ್ಯಾಯ ವ್ಯವಸ್ಥೆ ಆಗುವವರೆಗೆ ಮುಂದುವರಿಸಲು ತಾಲೂಕು ಟಾಸ್ಕ್‌ಪೋಸ್ ರ್ದಲ್ಲಿ ಚರ್ಚಿಸಿ, ಜನರಿಗೆ ತೊಂದರೆ ಆಗದಂತೆ ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿ ತಿಳಿಸಿದರು.

10 ಸಾವಿರ ಕೋಟಿ ಸಿವಿಲ್ ಗುತ್ತಿಗೆದಾರರ ಸಂಘದ ಹಣ ಬಾಕಿ

ಸಮಸ್ಯೆಗೆ ಸ್ಪಂದಿಸದ ಸರಕಾರದ ವಿರುದ್ಧ ಹೋರಾಟಕ್ಕೆ ಮುಂದಾದ ಗುತ್ತಿಗೆದಾರರು | ಸುದ್ದಿಗೋಷ್ಠಿಯಲ್ಲಿ ಮಾಹಿತಿ

ಧಾರವಾಡ: ಉತ್ತರ ಕರ್ನಾಟಕ ಗುತ್ತಿಗೆದಾರರ ಸಂಘದವರು ಬೀದಿಗಿಳಿದು ಸರಕಾರದ ವಿರುದ್ಧ ಹೋರಾಟ ಮಾಡಲು ಮುಂದಾಗಿದ್ದಾರೆ. ಈ ತಿಂಗಳ ಜೂನ್ ತಿಂಗಳಲ್ಲಿ ಕೊನೆಯವರೆಗೆ ಸರಕಾರಕ್ಕೆ ಡೆಡ್‌ಲೈನ್ ಕೊಟ್ಟಿರುವ ಉತ್ತರ ಕರ್ನಾಟಕ ಸಿವಿಲ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸುಭಾಷ.ಬಿ.ಪಾಟೀಲ್ ಸಿಎಂ ಸೇರಿದಂತೆ ಇತರೆ ಸಂಬಂಧಿಸಿದ ಸಚಿವರುಗಳಿಗೆ ಪತ್ರ ಬರೆದಿದ್ದಾರೆ.

ಧಾರವಾಡದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುಭಾಷ.ಬಿ.ಪಾಟೀಲ್ ಗುತ್ತಿಗೆದಾರರ ಹಣ ಬಾಕಿ ಇರುವುದರಿಂದ ಹಲವಾರು ಗುತ್ತಿಗಾದಾರರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಇತ್ತೀಚಿಗೆ ರಾಜ್ಯದಲ್ಲಿ ಕೆಲವು ಉದಾಹರಣೆಗಳು ಆಗಿವೆ. ಈಗಿನ ಸರಕಾರ ಬಾಕಿ ಇರುವ ಬಿಲ್ ಪಾವತಿಸದೇ ಹೋದರೆ, ಸರಕಾರದ ಕಾಮಾಗಾರಿಕಗಳ ಎಲ್ಲಾ ಕೆಲಸಗಳನ್ನು ಬಂದ್ ಮಾಡಿ, ಅನಿವಾರ್ಯವಾಗಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ಉತ್ತರ ಕರ್ನಾಟಕದ ಗುತ್ತಿಗೆದಾರರ ಸುಮಾರು 19,000 ಸಾವಿರ ಕೋಟಿ ಬಾಕಿಯಿದೆ. ಅದರಲ್ಲಿ ಲೋಕೋಪಯೋಗಿ ಇಲಾಖೆಯ ಸುಮಾರು 4,000 ಸಾವಿರ ಕೋಟಿ, ಬೃಹತ್ ನೀರಾವರಿ ಇಲಾಖೆಯ ಸುಮಾರು 8000 ಸಾವಿರ ಕೋಟೆ, ಸಣ್ಣ ನೀರಾವರಿ ಇಲಾಖೆಯ ಸುಮಾರು 2000 ಸಾವಿರ ಕೋಟಿ ಮತ್ತು ಇತರೆ ಎಲ್ಲಾ ಇಲಾಖೆ ಸೇರಿ ಸುಮಾರು 5000 ಕೋಟಿ ಹಣ ಬಾಕಿ ಇರುತ್ತದೆ. ಈ ರೀತಿ ಗುತ್ತಿಗೆದಾರರು ಆರ್ಥಿಕವಾಗಿ ತುಂಬಾ ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

ಬ್ಯಾಂಕಿನ ಸಾಲದ ಬಡ್ಡಿಯನ್ನು ತುಂಬಲಾಗದಕ್ಕೆ ಗುತ್ತಿಗೆದಾರರ ಯಂತ್ರೋಪಕರಣಗಳನ್ನು ಮತ್ತು ಆಸ್ತಿಯನ್ನು ಬ್ಯಾಂಕಿನ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದಾರೆ. ಈ ರೀತಿ ಸಮಾಜದಲ್ಲಿ ಅವಮಾನ ವಾಗುತ್ತಿರುವುದರಿಂದ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ತಲುಪಿದ್ದಾರೆ.

ಈಗಾಗಲೇ K.R.I.D.L. (Land army) ಈ ಇಲಾಖೆಯಿಂದ ಉಪ ಗುತ್ತಿಗೆ ಪಡೆದು ಕಾಮಗಾರಿ ನಿರ್ವಹಿಸಿದ ದಾವಣಗೆರೆಯ ಸಂತೇಬೆನ್ನೂರಿನ ಗುತ್ತಿಗೆದಾರರಾದ ಪಿ. ಎಸ್. ಗೌಡರ ರವರು ತಾವು ನಿರ್ವಹಿಸಿದ ಕಾಮಗಾರಿಯ ಸುಮಾರು 80 ಲಕ್ಷ ಹಣವು K.R.I.D.L ನಿಂದ ಬಿಲ್ ಪಾವತಿಯಾಗದೇ ಮತ್ತು ಅಧಿಕಾರಿಗಳ ಕಿರುಕುಳ ತಾಳಲಾರದೇ ಮನನೊಂದು ಮೇ 26, 2024 ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಕುಟುಂಬಕ್ಕೆ ಅವರು ನಿರ್ವಹಿಸಿದ ಕಾಮಗಾರಿಯ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು ಮತ್ತು ಗುತ್ತಿಗೆದಾರರ ಕ್ಷೇಮನಿಧಿ ಕಮೀಟಿಯಿಂದ ದೊರೆಯುವ ಹಣವಲ್ಲದೇ ಸರಕಾರ 25 ಲಕ್ಷ ರೂಪಾಯಿ ಪರಿಹಾರ ಧನವನ್ನು ನೀಡಬೇಕೆಂದು ಸರಕಾರಕ್ಕೆ ಒತ್ತಾಯಿಸುತ್ತೇವೆ ಎಂದರು.

ಗುತ್ತಿಗೆದಾರರ ಮಾಡಿದ ಕೆಲಸ ಸರಿಯಾಗಿಲ್ಲ ಎಂದು ಕಂಡು ಬಂದಲ್ಲಿ, ಸರಕಾರದಲ್ಲಿ ಜಮಾ ಇರುವ ಅವರ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ಮತ್ತು ಅವರನ್ನು ಕಪ್ಪು ಪಟ್ಟಿಯಲ್ಲಿ ಇಡಬಹುದು. ಸರಕಾರಿ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರ ಸಮಸ್ಯೆಗಳ ಬಗ್ಗೆ ರಾಜ್ಯದ ಕಾಂಗ್ರೆಸ ಸರಕಾರ ಸೂಕ್ತ ಕ್ರಮ ಕೈಗೊಳ್ಳುತ್ತೆ ಎಂದು ನಂಬಿರುತ್ತೇವೆ. ಆದ್ದರಿಂದ ಜೂನ್ 30, 2024 ರೊಳಗಾಗಿ ಸಂಪೂರ್ಣ ಹಣ ಪಾವತಿಸಬೇಕು. ಇಲ್ಲವಾದರೆ ಅನಿವಾರ್ಯವಾಗಿ ಎಲ್ಲ ಕಾಮಗಾರಿಗಳನ್ನು ಬಂದ್ ಮಾಡಿ ನಮ್ಮ ಸಂಘದಿಂದ ರಾಜ್ಯಾದ್ಯಂತ ಮುಷ್ಕರ ಹಮ್ಮಿಕೊಳ್ಳಲಾಗುವುದು ಸುದ್ದಿಗೋಷ್ಠಿಯ ಮೂಲಕ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಉತ್ತರ ಕರ್ನಾಟಕ ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ರವೀಂದ್ರ ಮಾನೆ, ಹಾಗೂ ಇತರೆ ಪದಾಧಿಕಾರಿಗಳು ಇದ್ದರು.

ಕೇಂದ್ರ ಸ್ಥಾನದಲ್ಲಿದ್ದು ಕಾರ್ಯನಿರ್ವಹಿಸಿ

ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ನಿರ್ದೇಶನ

ಗದಗ: ಜಿಲ್ಲೆಗೆ ಉಪ ಲೋಕಾಯುಕ್ತ ನ್ಯಾಯ ಮೂರ್ತಿ ಕೆ.ಎನ್.ಫಣೀಂದ್ರ, ಅವರು ಜೂನ್ 14 ರಿಂದ 16 ರವರೆಗೆ ಭೇಟಿ ನೀಡಲಿದ್ದು ಈ ಸಂದರ್ಭದಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಸರಿಯಾಗಿ ಕಾರ್ಯನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ. ಎಲ್. ಅವರು ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉಪಲೋಕಾಯುಕ್ತರು ಜಿಲ್ಲೆಗೆ ಆಗಮಿಸಿದ ಸಂದರ್ಭದಲ್ಲಿ ಜಿಲ್ಲೆಯ ಸರ್ಕಾರಿ ಕಚೇರಿಗಳಿಗೆ ಹಾಗೂ ಸಂಸ್ಥೆಗಳಿಗೆ ಅನಿರೀಕ್ಷಿತ ಭೇಟಿ ನೀಡಲಿದ್ದಾರೆ ಎಂದರು.

ಜಿಲ್ಲಾ ಹಂತದ ಎಲ್ಲ ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆ ವ್ಯಾಪ್ತಿಯಲ್ಲಿ ನಿರ್ವಹಿಸುವ ಕಾರ್ಯಗಳನ್ನು ಸರಿಯಾಗಿ ನಿಭಾಯಿಸಬೇಕು.

ಕಚೇರಿಗೆ ಸಮಯಕ್ಕೆ ಸರಿಯಾಗಿ ಆಗಮಿಸಿ ಕಚೇರಿಯ ಬಾಕಿ ಉಳಿದ ಕೆಲಸಗಳನ್ನು ಪೂರ್ಣಗೊಳಿಸಬೇಕು ಅಲ್ಲದೇ ಕಚೇರಿ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಲು ಜಿಲ್ಲಾಧಿಕಾರಿಗಳು ಸೂಚಿಸಿದರು. ಕಚೇರಿಗೆ ಆಗಮಿಸುವ ಸಾರ್ವಜನಿಕರಿಗೆ ಸೌಜನ್ಯದಿಂದ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ನಡೆದುಕೊಳ್ಳಬೇಕು. ಉಪಲೋಕಾ ಯುಕ್ತರು ನಡೆಸುವ ಸಭೆಗೆ ಇಲಾಖೆಯ ಮುಖ್ಯಸ್ಥರು ಕಡ್ಡಾಯವಾಗಿ ಹಾಜರಿದ್ದು ತಮ್ಮ ಇಲಾಖೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯೊಂದಿಗೆ ಆಗಮಿಸಬೇಕು. ಇಲಾಖೆಗೆ ಸಂಬಂಧಿಸಿದ ಬಾಕಿ ಪ್ರಕರಣಗಳ ಕುರಿತು ಅಗತ್ಯ ದಾಖಲೆಗಳೊಂದಿಗೆ ವಿಚಾರಣೆ ಸಂದರ್ಭದಲ್ಲಿ ಹಾಜರಿರಬೇಕು ಎಂದು ತಿಳಿಸಿದರು.

ಹಾಸ್ಟೆಲ್‌ಗಳು, ಜಿಲ್ಲಾ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ ಕೇಂದ್ರಗಳು, ಶಾಲಾ ಕಾಲೇಜುಗಳಲ್ಲಿ ಸ್ವಚ್ಛತೆ ಕಾಪಾಡುವ ಜೊತೆಗೆ ಮೂಲ ಸೌಲಭ್ಯಗಳ ಕೊರತೆಯಾಗದಂತೆ ಸಂಬಂಧಿತ ಅಧಿಕಾರಿಗಳು ನಿಗಾ ವಹಿಸಬೇಕು. ಲೋಕಾಯುಕ್ತರ ಭೇಟಿ ಸಂದರ್ಭದಲ್ಲಿ ಇಲಾಖೆಯ ಎಲ್ಲ ಹಂತದ ಅಧಿಕಾರಿಗಳು ಕಚೇರಿಯಲ್ಲಿ ಇರುವಂತೆ ನೋಡಿಕೊಳ್ಳಲು ಇಲಾಖಾ ಮುಖ್ಯಸ್ಥರಿಗೆ ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್ ಮಾತನಾಡಿ ಸಕಾಲದಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ಶೀಘ್ರ ವಿಲೇವಾರಿಗೊಳಿಸಬೇಕು. ಐಪಿಜಿಆರ್ ಎಸ್, ಮುಖ್ಯಮಂತ್ರಿಗಳ ಜನತಾ ದರ್ಶನದಡಿ ಸ್ವೀಕೃತವಾಗಿರುವ ಅರ್ಜಿಗಳನ್ನು ಪ್ರಥಮಾದ್ಯತೆ ನೀಡಿ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಪ್ರತಿ ಕಚೇರಿಗಳಲ್ಲಿಯೂ ಲೋಕಾಯುಕ್ತರ ಸೂಚನಾ ಫಲಕ ಅಳವಡಿಸಬೇಕು ಎಂದು ಸೂಚಿಸಿದರು.

ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಗುರುತಿನ ಚೀಟಿ ಧರಿಸಬೇಕು. ಹಾಜರಾತಿಗಾಗಿ ಬಯೋಮೆಟ್ರಿಕ್ ಅಳವಡಿಸಲು ಕ್ರಮ ಕೈಗೊಳ್ಳಬೇಕು. ಕಚೇರಿಗಳಲ್ಲಿ ಚಲನವಲನ ವಹಿ ಮತ್ತು ನಗದು ವಹಿ ಕಡ್ಡಾಯವಾಗಿ ನಿರ್ವಹಿಸಬೇಕೆಂದು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸರಕಾರಿ ಆಸ್ಪತ್ರೆ ಬಳಿ ನವಜಾತ ಶಿಶುವಿನ ಮೃತದೇಹ ಪತ್ತೆ

ಹಿರಿಯೂರು: ಇಲ್ಲಿನ ಸರಕಾರಿ ಆಸ್ಪತ್ರೆಯ ಸ್ನಾನದ ಕೊಠಡಿಯಲ್ಲಿ ಹೆರಿಗೆ ಮಾಡಿಸಿ, ನವಜಾತ ಶಿಶುವನ್ನು ಹತ್ಯೆಗೈದು ಕಿಟಕಿಯಿಂದ ಹೊರಗೆ ಎಸೆದು ಪರಾರಿಯಾಗಿರುವ ಘಟನೆ ಗುರುವಾರ ರಾತ್ರಿ ನಡೆದಿದೆ. ಗುರುವಾರ ಸಂಜೆ 7 ಗಂಟೆ ಸಮಯದಲ್ಲಿ

ಒಬ್ಬ ಪುರುಷ ಹಾಗೂ ಮೂವರು ಮಹಿಳೆಯರು (ಗರ್ಭಿಣಿ ಸೇರಿ) ಆಸ್ಪತ್ರೆಯ ಒಳಗೆ ಪ್ರವೇಶಿಸಿದ್ದಾರೆ. ಆ ಸಮಯದಲ್ಲಿ ಜಿಟಿಜಿಟಿ ಮಳೆ ಬರುತ್ತಿದ್ದ ಕಾರಣಕ್ಕೆ ತುರ್ತು ಚಿಕಿತ್ಸಾ ಕೊಠಡಿ ಹೊರತುಪಡಿಸಿದರೆ ಬೇರೆಡೆ ರೋಗಿಗಳು ಹಾಗೂ ಆಸ್ಪತ್ರೆ ಸಿಬ್ಬಂದಿ ಇರಲಿಲ್ಲ. ಆಸ್ಪತ್ರೆಯಲ್ಲಿ ಜನರು ವಿರಳವಾಗಿರುವುದನ್ನು ಗಮನಿಸಿದ ಅವರು, ವಾರ್ಡ್‌ನೊಳಗೆ ತೆರಳಿ ಅಲ್ಲಿನ ಸ್ನಾನದ ಕೊಠಡಿಯಲ್ಲೇ ಹೆರಿಗೆ ಮಾಡಿಸಿ ನವಜಾತ ಶಿಶುವನ್ನು ಹತ್ಯೆ ಮಾಡಿ ಕಿಟಕಿಯಿಂದ ಹೊರಗೆ ಎಸೆದು ಅಲ್ಲಿಂದ ಪರಾರಿಯಾಗಿದ್ದಾರೆ. ಮಳೆ ಬರುತ್ತಿದ್ದ ಕಾರಣಕ್ಕೆ ಬಿಸಾಡಿ ಹೋಗಿದ್ದ ಮಗುವನ್ನು ಯಾರೂ ಗಮನಿಸಿಲ್ಲ. ಇದು ಸಿ.ಸಿ. ಕ್ಯಾಮೆರಾದಲ್ಲಿ ದಾಖಲಾಗಿದೆ. ಬೆಳಿಗ್ಗೆ 6 ಗಂಟೆಯ ವೇಳೆಗೆ ಸಾರ್ವಜನಿಕರಿಗೆ ನವಜಾತ ಶಿಶು ಬಿದ್ದಿರುವುದು ಗಮನಕ್ಕೆ ಬಂದಿದೆ. ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಸಿ.ಸಿ. ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸುತ್ತಿದ್ದಾರೆ.

ಚಿಕ್ಕೋಡಿಯ ನೂತನ ಸಂಸದರಾದ ಪ್ರಿಯಾಂಕಾ ಜಾರಕಿಹೊಳಿ ಅವರು ಸಚಿವ ಎಂ.ಬಿ.ಪಾಟೀಲ ಅವರ ಬೆಂಗಳೂರಿನ ಮನೆಯಲ್ಲಿ ಭೇಟಿಯಾಗಿ ಧನ್ಯವಾದ ಅರ್ಪಿಸಿದರು. ಸಚಿವ ಎಂ.ಬಿ.ಪಾಟೀಲ ಮತ್ತು ಆಶಾ ಪಾಟೀಲ ಅವರು ಪ್ರಿಯಾಂಕಾ ಅವರನ್ನು ಅಭಿನಂದಿಸಿದರು. ಈ ವೇಳೆ ಸಚಿವ ಸತೀಶ ಜಾರಕಿಹೊಳಿ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಇದ್ದರು.

ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನ: ಒಬ್ಬ ಸಾವು

ಚಾಮರಾಜನಗರ: ಯುವಕನೋರ್ವ ಯುವತಿಯ ನಗ್ನ ವಿಡಿಯೋವನ್ನು ಮನೆಯವರಿಗೆ ಕಳುಹಿಸಿ ಬೆದರಿಕೆ ಹಾಕಿದ್ದರಿಂದ ಮರ್ಯಾದೆಗೆ ಅಂಜಿದ ಒಂದೇ ಕುಟುಂಬದ ನಾಲ್ವರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಮಹದೇಶ್ವರ ಬೆಟ್ಟ ಬಳಿಯ ತಾಳ ಬೆಟ್ಟದಲ್ಲಿ ನಡೆದಿದೆ. ಈ ಪೈಕಿ ಒಬ್ಬರು ಸಾವನ್ನಪ್ಪಿದ್ದು, ಮೂವರು ಸ್ಥಿತಿ ಗಂಭೀರವಾಗಿದೆ.

ವಿಷ ಸೇವನೆ ಮಾಡಿದವರನ್ನು ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೋಕಿನ ಚಂದಗಾಲು ಗ್ರಾಮದ ಕುಟುಂಬದ ಸದಸ್ಯರು ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಮಹದೇವ ನಾಯಕ (65) ಎಂಬವರು ಮೃತಪಟ್ಟಿದ್ದು, ಉಳಿದವರನ್ನು ಕೊಳ್ಳೇಗಾಲ ಸರಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಘಟನೆ ಕುರಿತಂತೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಆಗಿದೆ.

ಯುವಕ ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲೂಕಿನ ಚೀರನಹಳ್ಳಿಯವನು ಎನ್ನಲಾಗಿದೆ. ಈತ ಆತ್ಮಹತ್ಯೆಗೆ ಯತ್ನಿಸಿದ ಕುಟುಂಬದ ಯುವತಿಯನ್ನು ಪ್ರೀತಿ ಮಾಡುತ್ತಿದ್ದ, ಇಬ್ಬರೂ ಸಲುಗೆಯಿಂದ ಇದ್ದಾಗ ಯುವತಿಯ ನಗ್ನ ವಿಡಿಯೊ ಹಾಗೂ ಫೋಟೊ ತೆಗೆದುಕೊಂಡಿದ್ದಾನೆ. ನಂತರ ಅದನ್ನು ಆಕೆಯ ಕುಟುಂಬ ಸದಸ್ಯರಿಗೆ ವಿಡಿಯೊ ತೋರಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದಾನೆ. ಈ ಬಗ್ಗೆ ಬೇಸತ್ತ ಕುಟುಂಬ ಸದಸ್ಯರು ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಬಸ್ ಪಲ್ಟಿ: 10 ಪ್ರಯಾಣಿಕರಿಗೆ ಗಾಯ

ಶಿರಸಿ: ಇಲ್ಲಿನ ಶಿರಸಿ-ಕುಮಟಾ ಹೆದ್ದಾರಿಯ ಬಂಡಲ ಬಳಿ ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಪಲ್ಟಿಯಾದ ಪರಿಣಾಮ ಹತ್ತಕ್ಕೂ ಅಧಿಕ ಪ್ರಯಾಣಿಕರು ಗಾಯಗೊಂಡಿರುವ ಘಟನೆ ಶನಿವಾರ ನಡೆದಿದೆ. ಬಳ್ಳಾರಿಯಿಂದ ಚಿತ್ರದುರ್ಗ, ಶಿವಮೊಗ್ಗ ಪ್ರವಾಸ ಮುಗಿಸಿ ಶಿರಸಿಯಿಂದ ಮುರಡೇಶ್ವರಕ್ಕೆ ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರು ಪ್ರಯಾಣಿಕರನ್ನು ಟಿ.ಎಸ್.ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮೀಣ ಠಾಣೆಯ ಪೊಲೀಸರು ಪರಿಶೀಲನೆ ಕೇಸ್ ದಾಖಲಿಸಿದ್ದಾರೆ.

ಮಗುಚಿ ಬಿದ್ದ ಟ್ಯಾಂಕರ್

ಉಡುಪಿ: ಇಲ್ಲಿನ ಸಂತೆಕಟ್ಟೆ ಬಳಿ ಟ್ಯಾಂಕರ್ ಒಂದು

ಮಗುಚಿ ಬಿದ್ದ ಘಟನೆ ಶನಿವಾರ ಮುಂಜಾನೆ ವೇಳೆ ನಡೆದಿದೆ. ಸಂತೆಕಟ್ಟೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿದ್ದು, ಬೃಹತ್ ಗಾತ್ರದ ಹೊಂಡವನ್ನು ಸ್ಥಳದಲ್ಲಿ ನಿರ್ಮಿಸಲಾಗಿದೆ. ಇದರೊಳಗೆ ಟ್ಯಾಂಕರ್ ಬಿದ್ದಿದೆ. ಘಟನೆಯಲ್ಲಿ ಯಾರಿಗೂ ಯಾವುದೇ ಅಪಾಯ ಉಂಟಾಗಿಲ್ಲ.

ನೈತಿಕ ಪೊಲೀಸ್‌ಗಿರಿ: ಯುವಕನ ಮೇಲೆ ಹಲ್ಲೆ

ದಾವಣಗೆರೆ: ಉತ್ತರ ಭಾರತದ ರೀತಿಯಲ್ಲಿ ಯುವಕನೋರ್ವನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಅಮಾನವೀಯ ಘಟನೆ ಜಿಲ್ಲೆಯಲ್ಲಿ ಬೆಳಕಿಗೆ ಬಂದಿದೆ. ಹರಿಹರದ ಕಾಳಿದಾಸ ನಗರದಲ್ಲಿ ಈ ಘಟನೆ ನಡೆದಿದೆ. ಯುವಕನೊಬ್ಬನನ್ನು ರೂಮ್‌ನಲ್ಲಿ ಕೂಡಿಹಾಕಿ ಎಂಟತ್ತು ಜನರು ಸೇರಿಕೊಂಡು ಯುವಕ ಪರಿ ಪರಿಯಾಗಿ ಬೇಡಿಕೊಂಡರೂ ಬಿಡದೇ ಹಲ್ಲೆ ಮಾಡಿ ನೈತಿಕ ಪೊಲೀಸ್ ಗಿರಿ ಮೆರೆದಿದ್ದಾರೆ. ಇನ್ನು ಹಲ್ಲೆ ಮಾಡಿದವರು ಹಾಗೂ ಹಲ್ಲೆಗೊಳಗಾದ ಯುವಕ ಒಂದೇ ಕೋಮಿಗೆ ಸೇರಿದವರಾಗಿದ್ದು, ಕಟ್ಟಿಗೆ ತುಂಡಿನಿಂದ ಯುವಕನಿಗೆ ಹೊಡೆದು ಹಲ್ಲೆ ಮಾಡಿ, ನಂತರ ತಲೆ ಬೋಳಿಸಿ ಹಿಂಸೆ ನೀಡಿದ ವಿಡಿಯೊ ವೈರಲ್ ಆಗಿದೆ. ಹಲ್ಲೆಗೆ ಕಾರಣವೇನು ಎಂಬುದು ತಿಳಿದಿಲ್ಲ. ಆದರೆ ವೈರಲ್ ವಿಡಿಯೊ ಜಾಲವನ್ನರಸಿ ಪೊಲೀಸರು ಹಲ್ಲೆಗೊಳಗಾದ ಯುವಕನ ವಿಳಾಸ ಶೋಧಕ್ಕೆ ಮುಂದಾಗಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಉತ್ತರ ಒಳನಾಡು, ಕರಾವಳಿಯಲ್ಲಿ ವ್ಯಾಪಕ ಮಳೆ | ಉಡುಪಿಯಲ್ಲಿ ಶಾಲೆಗೆ ನುಗ್ಗಿದ ನೀರು

ಶನಿವಾರವೂ ಮುಂದುವರಿದ ವರುಣ ಅಬ್ಬರ

ಬೆಂಗಳೂರು: ರಾಜ್ಯಾದ್ಯಂತ ಮಳೆಯ ಅಬ್ಬರ ಮುಂದುವರಿದಿದೆ. ಭಾರಿ ಮಳೆಯಿಂದಾಗಿ ಉಡುಪಿಯ ಶಾಲೆಗೆ ನೀರು ನುಗ್ಗಿದ್ದರಿಂದ ಮಕ್ಕಳಿಗೆ ರಜೆ ನೀಡಲಾಗಿತ್ತು. ದಾವಣಗೆರೆ, ವಿಜಯಪುರ, ವಿಜಯನಗರ, ಚಿಕ್ಕಮಗಳೂರು, ಬೆಳಗಾವಿ, ಗದಗ ಜಿಲ್ಲೆಗಳಲ್ಲಿ ಮಳೆಯಿಂದ ನಾನಾ ಅವಾಂತರ ಸೃಷ್ಟಿಯಾಗಿದೆ.

ಶಾಲೆಗೆ ನುಗ್ಗಿದ್ದ ನೀರು: ಕಳೆದೆರಡು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಗೆ ಉಡುಪಿಯ ಬೈಂದೂರು ತಾಲೂಕಿನ ಯಡ್ತರೆ ಸಮೀಪ ರಾಹುತನಕಟ್ಟೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನೀರು ನುಗ್ಗಿದೆ. ತರಗತಿ ಕೋಣೆಗಳು ಜಲಾವೃತಗೊಂಡ ಪರಿಣಾಮ ಶಾಲಾ ಮಕ್ಕಳಿಗೆ ಶನಿವಾರ ರಜೆ ನೀಡಲಾಗಿತ್ತು. ಶಾಲೆ ಸಮೀಪ ಸಮರ್ಪಕವಾದ ಚರಂಡಿ ವ್ಯವಸ್ಥೆಯಿಲ್ಲದೇ ರಾಷ್ಟ್ರೀಯ ಹೆದ್ದಾರಿಯಿಂದ ಹರಿದ ನೀರು ನೇರ ಶಾಲೆಗೆ ನುಗ್ಗುತ್ತಿದೆ. ಕಳೆದ ಹಲವು ವರ್ಷಗಳಿಂದ ಮಳೆಗಾಲದಲ್ಲಿ ಇದೇ ಸಮಸ್ಯೆ ಆಗುತ್ತಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಕೆರೆಯಂತಾದ ಜಮೀನುಗಳು: ದಾವಣಗೆರೆಯ ಜಗಳೂರು ತಾಲೂಕಿನಲ್ಲಿ ಶನಿವಾರ ಭರ್ಜರಿ ಮಳೆಯಾಗಿದೆ. ಹನುಮಂತಪುರ, ದಿದ್ದಗಿ , ಹುಚ್ಚವನಹಳ್ಳಿ, ಪಲ್ಲಾಗಟ್ಟೆ, ಮೇದಕೇರನಹಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಭಾರಿ ಮಳೆಯಾಗಿದೆ. ಧಾರಾಕಾರವಾಗಿ ಸುರಿದ ಮಳೆಯಿಂದ ಜಮೀನುಗಳು ಕೆರೆಯಂತಾಗಿದೆ.

ಗ್ರಾಮಕ್ಕೆ ನುಗ್ಗಿದ ಹಳ್ಳದ ನೀರು: ವಿಜಯನಗರ ಜಿಲ್ಲೆಯ ಗುಡೇಕೋಟೆ ಹೋಬಳಿಯ ಮಹದೇವಪುರ ಗ್ರಾಮದಲ್ಲಿ ಮಳೆಯಿಂದಾಗಿ ಭಾರಿ ಪ್ರಮಾಣದ ಹಳ್ಳದ ನೀರು ಗ್ರಾಮಕ್ಕೆ ನುಗ್ಗಿದೆ. ಗ್ರಾಮದ ಬೀದಿಗಳಲ್ಲಿ ರಭಸವಾಗಿ ಹರಿದು ಮನೆ ಒಳಗೆ ನುಗ್ಗಿದೆ. ಮಹದೇವಪುರ ಗ್ರಾಮದ ಮಾರಿಗುಡ್ಡ

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಆಯಟ್ಟಿ ಬ್ರಿಡ್ಜ್ ಮಳೆಗೆ ಮುಳುಗಡೆಯಾಗಿರುವುದು.

ಏರಿಯಾದಿಂದ ಗ್ರಾಮಕ್ಕೆ ನೀರು ನುಗ್ಗುತ್ತಿದೆ. ಮಹದೇವಪುರ ಗ್ರಾಮದಲ್ಲಿ ದಲಿತ ಕೇರಿ ತಗ್ಗು ಪ್ರದೇಶದಲ್ಲಿ ಇದೆ.

ಚಿಕ್ಕಮಗಳೂರು, ಉತ್ತರ ಕನ್ನಡದಲ್ಲಿ ಮಳೆಯ ಅಬ್ಬರ: ಕರಾವಳಿ ಹಾಗೂ ಮಲೆನಾಡು ಭಾಗಗಳಲ್ಲಿ ಮಳೆ ಮುಂದುವರಿದಿದೆ. ಕರಾವಳಿಯ ಉತ್ತರಕನ್ನಡ ಜಿಲ್ಲೆಯಲ್ಲಿ ಮಳೆಯ ಅಬ್ಬರ ಜೋರಾಗಿದೆ. ಇನ್ನೂ ಚಿಕ್ಕಮಗಳೂರಿನ ಕೊಟ್ಟಿಗೆಹಾರ, ಚಾರ್ಮಾಡಿ ಘಾಟ್, ಬಣಕಲ್, ಬಾಳೂರು ಸುತ್ತಮುತ್ತ ಭಾರೀ ಮಳೆಯಾಗಿದೆ. ಚಾರ್ಮಾಡಿ ಘಾಟಿಯಲ್ಲಿ ಭಾರೀ ಮಳೆಗೆ ವಾಹನ ಸವಾರರು ಪರದಾಡಿದರು. ಮಳೆ ರಭಸಕ್ಕೆ ರಸ್ತೆ ಕಾಣದೆ ಇರುವುದರಿಂದ ಸವಾರರು ಕೊಟ್ಟಿಗೆಹಾರದಲ್ಲೇ ವಾಹನ ನಿಲ್ಲಿಸಿಕೊಂಡಿರುವುದು ಕಂಡು ಬಂತು.

ಬೆಳಗಾವಿಯಲ್ಲಿ ಕೆರೆಯಂತಾದ ರಸ್ತೆಗಳು : ಮಳೆರಾಯನ ಆರ್ಭಟಕ್ಕೆ ಬೆಳಗಾವಿ ಕ್ಯಾಂಪ್ ಪ್ರದೇಶದ ಹತ್ತಿರ ರಸ್ತೆಗಳು ಕೆರೆಯಂತೆ ಮಾರ್ಪಾಟ್ಟಿವೆ. ಬೆಳಗಾವಿಯ ವಿವಿಧೆಡೆ ರಸ್ತೆಗಳು ಸಂಪೂರ್ಣ ಜಲಾವೃತಗೊಂಡಿದೆ. ವಾಹನ ಸಂಚಾರಕ್ಕೆ ಅಡೆತಡೆ ಉಂಟಾಯಿತು. ಬೆಳಗಾವಿಯ ಖಾನಾಪುರ ರಸ್ತೆಯಲ್ಲಿ ಎರಡು ಅಡಿ ನೀರು ನಿಂತು ಅವಾಂತರವೇ ಸೃಷ್ಟಿಯಾಗಿತ್ತು. ಬೆಳಗಾವಿಯ ಗ್ಲೋಬ್ ಥಿಯೇಟರ್ ಅಂಗಳಕ್ಕೆ ನೀರು ನುಗ್ಗಿತ್ತು. ಟಿಕೆಟ್ ಕೌಂಟರ್ ಸಂಪೂರ್ಣ ಜಲಾವೃತಗೊಂಡಿತ್ತು.

ಭಾರಿ ಮಳೆಯಿಂದಾಗಿ ಉಡುಪಿಯ ಶಾಲೆಗೆ ನೀರು ನುಗ್ಗಿರುವುದು.

ಗದಗದಲ್ಲಿ ಕೊಚ್ಚಿ ಹೋದ ಕಿರುಸೇತುವೆ

ಸತತ ಮಳೆಯಿಂದಾಗಿ ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಧರ್ಮಾಪುರ ಗ್ರಾಮದ ಗಣಪತಿ ಕೆರೆಯ ಕಿರುಸೇತುವೆ ಕೊಚ್ಚಿ ಹೋಗಿದೆ. ಜಮೀನುಗಳಿಗೆ ಸಂಪರ್ಕ ಕಲ್ಪಿಸಲು ನಿರ್ಮಾಣ ಮಾಡಿದ್ದ ಕಿರುಸೇತುವೆ ನೀರು ಪಾಲಾಗಿದೆ. ಕಳೆದ ವರ್ಷವಷ್ಟೇ ರೈತರು ತಮ್ಮ ಜಮೀನುಗಳಿಗೆ ತೆರಳಲು ನಿರ್ಮಿಸಲಾಗಿತ್ತು. ನಿರಂತರ ಮಳೆಯಿಂದಾಗಿ ಕಿರುಸೇತುವೆ ರಸ್ತೆ ಕೊಚ್ಚಿ ಹೋಗಿದ್ದು, ರೈತರು ಪರದಾಡುತ್ತಿದ್ದಾರೆ. ರಸ್ತೆ ಇಲ್ಲದ ಹಿನ್ನೆಲೆ ಇದೀಗ ರೈತರು ಕೃಷಿ ಚಟುವಟಿಕೆ ನಡೆಸಲು ಸಮಸ್ಯೆಯಾಗಿದೆ.

ಧಾರವಾಡದ ಆಯಟ್ಟಿ ಬ್ರಿಡ್ಜ್ ಬಂದ್

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಆಯಟ್ಟಿ ಬ್ರಿಡ್ಜ್ ಮಳೆಗೆ ಮುಳುಗಡೆಯಾಗಿದ್ದು, ಸಂಚಾರ ಬಂದ್ ಮಾಡಲಾಗಿದೆ. ಹಲವಾರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆಯು ಮಳೆ ಬಂದರೆ ಸಾಕು ನೀರಿನಲ್ಲಿ ಮುಳುಗಡೆಯಾಗುತ್ತದೆ. ಹೀಗಾಗಿ ಸೇತುವೆ ಮೇಲೆ ನೀರು ತಗ್ಗುವವರೆಗೂ ಜನರ ಓಡಾಟ ಸಂಪೂರ್ಣ ಬಂದ್ ಮಾಡಲಾಗಿದೆ. ಇನ್ನೂ ಸೇತುವೆ ಎತ್ತರ ಮಾಡಬೇಕೆಂದು ಗ್ರಾಮಸ್ಥರು ಮನವಿ ಮಾಡಿದರೂ ಅಧಿಕಾರಿಗಳು ಮಾತ್ರ ಕ್ಯಾರೆ ಎನ್ನುತ್ತಿಲ್ಲ. ಇತ್ತ ಹೊಸ ಬ್ರಿಡ್ಜ್ ನಿರ್ಮಾಣ ಮಾಡುವವರೆಗೂ ಜನರ ಸಮಸ್ಯೆ ತಪ್ಪಿದ್ದಲ್ಲ.

ಸಿಡಿಲಿಗೆ ಎಮ್ಮೆ-ಕುರಿ ಸಾವು

ವಿಜಯಪುರ ಜಿಲ್ಲೆಯಲ್ಲಿ 12.16 ಮಿ.ಮೀ. ಮಳೆಯಾಗಿದೆ. ಸಿಡಿಲಿಗೆ ಎಮ್ಮೆಗಳು ಬಲಿಯಾಗಿದ್ದರೆ, ಭಾರಿ ಮಳೆಗೆ ಹತ್ತಾರು ಮನೆಗಳು ನೆಲಕ್ಕೆ ಉರುಳಿವೆ. ಡೋಣಿ ನದಿ ಸೇರಿದಂತೆ ಹಳ್ಳಗಳು ಮೈದುಂಬಿ ಹರಿಯುತ್ತಿವೆ. ಅಬ್ಬರದ ಮಳೆಗೆ ಚಡಚಣದಲ್ಲಿ ಶನಿವಾರ ಸಂಜೆ ಬಡಿದ ಸಿಡಿಲಿಗೆ ದುಂಡಪ್ಪ ನಿರಾಳೆ ಎಂಬವರಿಗೆ ಸೇರಿದ ಎಮ್ಮೆ ಸಾವಿಗೀಡಾಗಿದ್ದು, ಪಕ್ಕದಲ್ಲಿದ್ದ ಮೇವಿನ ಬಣವೆಗೂ ಬೆಂಕಿ ಹೊತ್ತಿಕೊಂಡಿದೆ. ಚಡಚಣ ಭಾಗದಲ್ಲಿ ವಿಠ್ಠಲ ಅಗಸರ ಎಂಬವರಿಗೆ ಸೇರಿದ ಎಮ್ಮೆ ಸಿಡಿಲು ಬಡಿದು ಸಾವಿಗೀಡಾಗಿದೆ. ಆಲಮೇಲ ತಾಲೂಕಿನ ಕುಮಸಗಿ ಗ್ರಾಮದಲ್ಲಿ ಶರಣಪ್ಪ ಯಂಕಂಚಿ ಎಂಬವರಿಗೆ ಸೇರಿದ ಕುರಿ ಬಲಿಯಾಗಿದೆ.

ಚುನಾವಣೆಯಲ್ಲಿ ಹಿನ್ನಡೆ, ಕಾಂಗ್ರೆಸ್ ಆತ್ಮಾವಲೋಕನ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ ಪಕ್ಷ 14 ಸ್ಥಾನ ಗೆಲ್ಲುವ ನಿರೀಕ್ಷೆ ಇತ್ತು. ಆದರೆ 9 ಸ್ಥಾನಗಳಷ್ಟೇ ಬಂದಿವೆ. ಈ ಹಿನ್ನಡೆಗೆ ಕಾರಣಗಳೇನು ಎಂದು ಪಕ್ಷ ಆತ್ಮಾವಲೋಕನ

ಮಾಡಿಕೊಳ್ಳಲಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಒಂದು ವರ್ಷದಲ್ಲಿ ರಾಜ್ಯ ಸರಕಾರವು ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು, ಜನರಿಗೆ ಅದರ ಲಾಭ ಸಿಗುವಂತೆ ಮಾಡಿತ್ತು. ಆದರೂ ನಾವು ಎಡವಿದ್ದೆಲ್ಲಿ ಎನ್ನುವುದನ್ನು ನಾವು ಕಂಡುಕೊಳ್ಳಲಿದ್ದೇವೆ. ಚುನಾವಣೆ ಹಿನ್ನಡೆಗೆ ಯಾರೋ ಒಬ್ಬರನ್ನು ಹೊಣೆ ಮಾಡುವುದು ಸಾಧ್ಯವಿಲ್ಲ. ಸಚಿವರ ಅಥವಾ ಶಾಸಕರ ಮೌಲ್ಯಮಾಪನ ಕೂಡ ನಡೆಯುವುದಿಲ್ಲ. ಪಕ್ಷದ ಮುಂದಿನ ಕಾರ್ಯತಂತ್ರ ಏನಿರಬೇಕು ಎಂದಷ್ಟೇ ಚಿಂತಿಸಲಾಗುವುದು. ಈಗ ನರೇಂದ್ರ ಮೋದಿ ಮೂರನೇ ಬಾರಿ ಪ್ರಧಾನಿ ಆಗುತ್ತಿದ್ದಾರೆ. ಕಳೆದ ಎರಡು ಬಾರಿಗಿಂತ ಈ ಸಲ ಬಿಜೆಪಿ ಬಲ ಕುಂದಿದೆ. ಆದ್ದರಿಂದ ಈ ಸಲ ಅವರ ಸರಕಾರ ಎಷ್ಟು ದಿನವಿರಲಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

1,791 ಕೋಟಿ ಬೆಳೆ ವಿಮೆ ಇತ್ಯರ್ಥಪಡಿಸಿ: ಸಚಿವ ಚಲುವರಾಯಸ್ವಾಮಿ

ಬೆಳೆ ವಿಮೆ ಶೀಘ್ರ ಪಾವತಿಗೆ ಸೂಚನೆ

ಬೆಂಗಳೂರು: ಕಳೆದ ಮುಂಗಾರು ವೈಫಲ್ಯದಿಂದ ಸುಮಾರು 1791 ಕೋಟಿ ರು. ಬೆಳೆ ವಿಮಾ ಪರಿಹಾರ ನೀಡಬೇಕಿದೆ. ಆದ್ದರಿಂದ ಕೂಡಲೇ ಈ ಪರಿಹಾರವನ್ನು ರೈತರಿಗೆ ನೀಡಲು ಕ್ರಮವಹಿಸಬೇಕು ಎಂದು ವಿಮಾ ಕಂಪನಿಗಳಿಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಜಲಾನಯನ ಇಲಾಖೆ, ಕರ್ನಾಟಕ ರಾಜ್ಯ ಬೀಜ ನಿಗಮ, ಕೃಷಿಕ ಸಮಾಜದ ಅಧಿಕಾರಿಗಳ ಸಭೆ ನಡೆಸಿದ ಅವರು, ಕಳೆದ ಸಾಲಿನ ವಿಮೆ ಇತ್ಯರ್ಥದೊಂದಿಗೆ ಈ ಮುಂಗಾರಿಗೂ ಬೆಳೆ ವಿಮೆ ನೋಂದಣಿ ಹಾಗೂ ರೈತ ಜಾಗೃತಿಗೆ ಆದ್ಯತೆ ನೀಡಬೇಕೆಂದು ಸೂಚನೆ ನೀಡಿದರು.

ಕಳೆದ ಸಾಲಿನಲ್ಲಿ ಬರದಿಂದಾಗಿ ಉಂಟಾದ ಬೆಳೆ ಹಾನಿಗೆ ರಾಜ್ಯದಲ್ಲಿ ಮುಂಗಾರು ಹಂಗಾಮಿಗೆ 1,791 ಕೋಟಿ ಬೆಳೆ ವಿಮೆ ಲೆಕ್ಕಾಚಾರ ಮಾಡಿದ್ದು, ಬಹುತೇಕ ಇತ್ಯರ್ಥಪಡಿಸಲಾಗಿದೆ. ಅದೇ ರೀತಿ ಹಿಂಗಾರು ಬೆಳೆ ವಿಮೆ ಪರಿಹಾರ ಹಣ ತಲುಪಿಸಲು ವಿಮಾ ಕಂಪನಿಗಳೊಂದಿಗೆ ಸಮನ್ವಯ ಮಾಡಬೇಕು. 2023-24ರ ಮುಂಗಾರಿನಲ್ಲಿ 19.14 ಲಕ್ಷ ರೈತರು 15.10 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ವಿಮೆ ನೋಂದಾಯಿಸಿದ್ದರು. ನಿಯಮಾನುಸಾರ ಪರಿಶೀಲಿಸಿ ಅಂತಿಮವಾಗಿ ಬಾಕಿ ಇರುವ 130 ಕೋಟಿ ರು.ಗಳನ್ನು ಶೀಘ್ರ ವಿತರಣೆ ಮಾಡಿ ಎಂದು ಸೂಚನೆ ನೀಡಿದರು.

2023-24ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 5.88 ಲಕ್ಷ ರೈತರು 5.43 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಬೆಳೆ ವಿಮೆ ನೋಂದಾಯಿಸಿದ್ದರು. ಈವರೆಗೆ ಪ್ರಿವೆಂಟೆಡ್ ಸೋಯಿಂಗ್, ಸ್ಥಳೀಯ ಪ್ರಕೃತಿ ವಿಕೋಪ ಮತ್ತು ಮಿಡ್ ಸೀಜನ್ ಅಡ್ವರ್ಸಿಟಿ ಅಡಿ 16,053 ರೈತರಿಗೆ 7.93 ಕೋಟಿ ಪರಿಹಾರ ಇತ್ಯರ್ಥ ಪಡಿಸಲಾಗಿದೆ. ಉಳಿದ ರೈತರಿಗೆ ವಿಮೆ ಹಣ ತಲುಪಿಸಿ ಎಂದು ನಿರ್ದೇಶಿಸಿದರು.

ಉತ್ತಮ ಮುಂಗಾರು: ರಾಜ್ಯಾದ್ಯಂತ ಪೂರ್ವ ಮುಂಗಾರು ಉತ್ತಮವಾಗಿದ್ದು, ಮುಂಗಾರು ಕೂಡ ಆರಂಭವಾಗಿದೆ. ಬಿತ್ತನೆ ಬೀಜ, ರಸಗೊಬ್ಬರ ಬೇಡಿಕೆ ಆಧಾರದಲ್ಲಿ ಪೂರೈಕೆಯಾಗಿದ್ದು, ಎಲ್ಲೂ ಕೊರತೆಯಾಗದಂತೆ ಎಚ್ಚರ ವಹಿಸಿ ರೈತರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಕೃಷಿ ಇಲಾಖೆ ಹಾಗೂ ವಿವಿಗಳಲ್ಲಿ ವಿವಿಧ ಕಟ್ಟಡ ಕಾಮಗಾರಿಗಳನ್ನು ಅತ್ಯಂತ ತ್ವರಿತವಾಗಿ ಮುಕ್ತಾಯಗೊಳಿಸುವಂತೆ ಸೂಚನೆ ನೀಡಿದರು.

ಈ ವೇಳೆ ಕೃಷಿ ಇಲಾಖೆ ಆಯುಕ್ತ ವೈ.ಎಸ್ .ಪಾಟೀಲ್, ನಿರ್ದೇಶಕ ಡಾ.ಜಿ.ಟಿ.ಪುತ್ರ, ಅಪರ ನಿರ್ದೇಶಕ ರೆಡ್ಡಿ, ಅಧಿಕಾರಿಗಳು ಸಭೆಯಲ್ಲಿದ್ದರು.

ಆರ್ಥಿಕ ಸಾಂಖ್ಯಿಕ ನಿರ್ದೇಶನಾಲಯ ಬೆಳೆ ಕಟಾವು ಪ್ರಯೋಗಗಳ ಇಳುವರಿ ನೀಡಿರುವ ಹಿಂಗಾರು ಹಂಗಾಮಿನ 4,368 ವಿಮಾ ಘಟಕಗಳಿಗೆ 1,03,044 ರೈತರ 152.71 ಕೋಟಿ ಬೆಳೆ ವಿಮೆ ಪರಿಹಾರ ಮೊತ್ತ ಲೆಕ್ಕಾಚಾರ ಮಾಡಲಾಗಿದೆ. ವಿಮಾ ಸಂಸ್ಥೆಗಳಿಂದ ಇತ್ಯರ್ಥಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

-ಎ.ವೈ. ಪಾಟೀಲ್, ಕೃಷಿ ಇಲಾಖೆ ಆಯುಕ್ತ

ಇಸ್ರೇಲ್ ಪ್ರತಿನಿಧಿಗಳೊಂದಿಗೆ ಸಭೆ

ಇನ್ನು ಕೃಷಿಯಲ್ಲಿ ಹೊಸ ಸಂಭಾವ್ಯ ಸುಧಾರಣೆಗಳ ಬಗ್ಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಇಸ್ರೇಲ್ ದೇಶದ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದರು. ಹವಾಮಾನ ಬದಲಾವಣೆ, ನೀರಿನ ಮಿತ ಬಳಕೆ, ವೈಜ್ಞಾನಿಕ ಕೃಷಿ ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆಸಿದ ಸಚಿವರು, ರಾಜ್ಯದ ಕೃಷಿ ಪದ್ಧತಿಯಲ್ಲಿ ಪರಿಣಾಮಕಾರಿ ಹಾಗೂ ಗುಣಾತ್ಮಕ ಬದಲಾವಣೆಗೆ ಸಲಹೆ, ಸಹಕಾರ ನೀಡುವಂತೆ ಕೋರಿದರು. ಇಸ್ರೇಲ್‌ನ ಕೃಷಿ ಸಂಸ್ಥೆ, ತಳಿ ಸಂರಕ್ಷಣೆ ಹಾಗೂ ಅಭಿವೃದ್ಧಿ, ಕೃಷಿ ಇಲಾಖೆ, ವಿವಿ ಗಳ ಪಾತ್ರದ ಬಗ್ಗೆ ಮಾಹಿತಿ ಪಡೆದ ಸಚಿವರು, ನಡೆಸಲಾಗುತ್ತಿರುವ ನಿರಂತರ ಸಂಶೋಧನೆಗಳು ಕೃಷಿ ಭೂಮಿಗೆ ಅದರ ವರ್ಗಾವಣೆ, ಸರಕಾರದ ಯೋಜನೆ, ಪ್ರೋತ್ಸಾಹ ಕ್ರಮಗಳ ಬಗ್ಗೆಯೂ ಚರ್ಚಿಸಿದರು.

ಆಲಮಟ್ಟಿ ಜಲಾಶಯಲ್ಲಿ 1,768 ಕ್ಯೂಸೆಕ್ ಒಳಹರಿವು

ಆಲಮಟ್ಟಿ: ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಆರಂಭಗೊಂಡಿದ್ದು, ಈ ವರ್ಷದ ಮೊದಲ ಒಳಹರಿವು ಶನಿವಾರ ದಾಖಲಾಗಿದೆ. 1,768 ಕ್ಯೂಸೆಕ್ ಒಳಹರಿವು ದಾಖಲಾಗಿದ್ದು, ಕೃಷ್ಣಾ ನದಿ ಪಾತ್ರದ ಜನರ ಸಂತಸಕ್ಕೆ ಕಾರಣವಾಗಿದೆ. ಕಳೆದ ವರ್ಷ ಜೂನ್ ಕಳೆದರೂ ಒಳಹರಿವು ಇರಲಿಲ್ಲ. ಆದರೆ ಈ ವರ್ಷ ಜೂನ್ ಮೊದಲ ವಾರವೇ ಒಳಹರಿವು ಆರಂಭವಾದ ಕಾರಣ ಕೃಷ್ಣಾ ನದಿ ಪಾತ್ರದ ಜನರಿಗೆ ಸಂತಸ ತಂದಿದೆ. ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಸುರಿದ ಮಳೆಯಿಂದ ಈ ಒಳಹರಿವು ಬಂದಿದ್ದು, ಇನ್ನೂ ಮಹಾರಾಷ್ಟ್ರದಿಂದ ಬಿಟ್ಟ ನೀರು ಬಂದಿಲ್ಲ. ಕಳೆದ ವರ್ಷ ಮಳೆಯ ಅಭಾವ, ನೀರಿನ ಬರ ಅನುಭವಿಸದ ರೈತರಿಗೆ ಈ ಬಾರಿ ಅಣೆಕಟ್ಟಿಗೆ ನೀರು ಬಂದ ಕಾರಣ ನೆಮ್ಮದಿಯ ನಿಟ್ಟುಸಿರು ಬಿಟ್ಟಂತಾಗಿದೆ. ಜಲಾಶಯ ಶೀಘ್ರ ಭರ್ತಿಯತ್ತ ಸಾಗಲಿ ಎಂದು ರೈತರ ಅಪೇಕ್ಷೆಯಾಗಿದೆ.

519.60 ಮೀ ಗರಿಷ್ಟ ಎತ್ತರದ ಆಲಮಟ್ಟಿ ಜಲಾಶಯದಲ್ಲಿ ಶುಕ್ರವಾರ 507.79 ಮೀ, ವರೆಗೆ ನೀರು ಇತ್ತು. 123.081 ಟಿಎಂಸಿ ಗರಿಷ್ಠ ಸಂಗ್ರಹದ ಜಲಾಶಯದಲ್ಲಿ 20.6 ಟಿಎಂಸಿ ನೀರಿದೆ. ಅದರಲ್ಲಿ ಬಳಕೆ ಯೋಗ್ಯ 3 ಟಿಎಂಸಿ ನೀರಿದೆ. ಈಗ ಜಲಾಶಯಕ್ಕೆ ಬಂದಿರುವುದು ಅಲ್ಪ ಒಳಹರಿವು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು
ಹುಲ್ಲಹಳ್ಳಿ ರಸ್ತೆ, ನಂಜನಗೂಡು-571301
ದೂರವಾಣಿ: 08221-226309 ಇಮೇಲ್:apmcnanjanagud@rediffmail.com

ನಂ.ಕೃಉಮಾಸ(ನಂ)/107/2024-25 ದಿನಾಂಕ:06.06.2024

"ಪ್ರಕಟಣೆ"

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದ ಹೊರ ಭಾಗದಲ್ಲಿರುವ ರೈತಭವನದ ಎಡಭಾಗದಲ್ಲಿ 10 ಸಂಖ್ಯೆ ವಾಣಿಜ್ಯ ಸಂಕೀರ್ಣ ಮಳಿಗೆಗಳಲ್ಲಿ ಖಾಲಿಯಿರುವ 05 ಸಂಖ್ಯೆ ಮಳಿಗೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004ರ ನಿಯಮ 14ರನ್ವಯ ವಾಣಿಜ್ಯ ಸಂಕೀರ್ಣ ಮಳಿಗೆಗಳನ್ನು ಟೆಂಡರ್-ಕಂ-ಬಹಿರಂಗ ಹರಾಜು ಮೂಲಕ ಗರಿಷ್ಠ 55 ತಿಂಗಳ ಅವಧಿಗೆ ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸುವ ಷರತ್ತಿಗೊಳಪಟ್ಟು ಹಾಗೂ 33 ತಿಂಗಳುಗಳ ನಂತರ ಶೇ.5 ರಷ್ಟನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಲು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಮಳಿಗೆ ವಿವರ	ನೋಂದಣಿ ಶುಲ್ಕ (ತೆರಿಗೆ ಪ್ರತ್ಯೇಕ)	ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ	ಮುಂಗಡ ಠೇವಣಿ ರೂ.
1.	ಮುಖ್ಯ ಮಾರುಕಟ್ಟೆ ಪ್ರಾಂಗಣದ ಹೊರ ಭಾಗದಲ್ಲಿರುವ ರೈತಭವನದ ಎಡಭಾಗದಲ್ಲಿನ ಖಾಲಿಯಿರುವ 10 ಸಂಖ್ಯೆ ಮಳಿಗೆಗಳಲ್ಲಿ, ನೆಲ ಹಂತಸ್ತಿನ ಮಳಿಗೆ ಸಂಖ್ಯೆ-02	500.00	5,270-00	10,540-00
2.	ಮುಖ್ಯ ಮಾರುಕಟ್ಟೆ ಪ್ರಾಂಗಣದ ಹೊರ ಭಾಗದಲ್ಲಿರುವ ರೈತಭವನದ ಎಡಭಾಗದಲ್ಲಿನ ಖಾಲಿಯಿರುವ 10 ಸಂಖ್ಯೆ ಮಳಿಗೆಗಳಲ್ಲಿ, ಮೊದಲ ಹಂತಸ್ತಿನ ಮಳಿಗೆ ಸಂಖ್ಯೆ 06,07,08,09	500.00	4,315-00	8,630-00

ಷರತ್ತು ಹಾಗೂ ನಿಬಂಧನೆಗಳು: 1. ನೋಂದಣಿ **ಶುಲ್ಕ ರೂ.500-00** ಗಳನ್ನು ಕಛೇರಿಯಲ್ಲಿ ಪಾವತಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ನಿಗಧಿತ ಅರ್ಜಿ ನಮೂನೆ-1 ನ್ನು ಸಲ್ಲಿಸಲು ಕೊನೆಯ **ದಿನಾಂಕ: 24.06.2024 ರ ಸಂಜೆ 4-00 ಗಂಟೆಯವರೆಗೆ. 2.** ನೋಂದಾವಣಿ ಪಡೆದ ಅರ್ಜಿದಾರರು ನಿಗಧಿತ ಅರ್ಜಿ ನಮೂನೆಯೊಂದಿಗೆ ಮುಂಗಡ ಹಣ ಪಾವತಿಸಲು ಕೊನೆಯ **ದಿನಾಂಕ 28.06.2024 ರ ಮಧ್ಯಾಹ್ನ 12-00 ಗಂಟೆಯವರೆಗೆ. 3.** ಬಹಿರಂಗ ಹರಾಜನ್ನು **28.06.2024ರಂದು ಮಧ್ಯಾಹ್ನ 3-00 ಗಂಟೆಗೆ** ನಂಜನಗೂಡು ಸಮಿತಿಯ ಆಡಳಿತ ಕಛೇರಿಯ ಸಭಾಂಗಣದಲ್ಲಿ ನಡೆಸಲಾಗುವುದು. **4.** ಮುಂಗಡ ಪಾವತಿಯನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು ಇವರ ಹೆಸರಿನಲ್ಲಿ ಡಿ.ಡಿ ಯನ್ನು ಖರೀದಿಸಿ ಸಲ್ಲಿಸತಕ್ಕದ್ದು. **5.** ಈ ಹಂಚಿಕೆಯು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟಿರುತ್ತದೆ. **6.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಟೆಂಡರ್ ಹಾಗೂ ಬಹಿರಂಗ ಹರಾಜು ಎರಡು ಪ್ರಕ್ರಿಯೆಯಲ್ಲಿ ಭಾಗವಹಿಸತಕ್ಕದ್ದು ಒಂದರಲ್ಲಿ ಭಾಗವಹಿಸಿದರೆ ಪರಿಗಣಿಸಲಾಗುವುದಿಲ್ಲ. **7.** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004ರಂತೆ ಕ್ರಮ ಸಂಖ್ಯೆ 02 ರಲ್ಲಿನ ಮಳಿಗೆಗಳಲ್ಲಿ ಪರಿಶಿಷ್ಠ ಜಾತಿಗೆ ಮಳಿಗೆ ಸಂಖ್ಯೆ 06 ಅನ್ನು ಮೀಸಲಿರಿಸಲಾಗಿದೆ. **8.** ಹೆಚ್ಚಿನ ಷರತ್ತು ಹಾಗೂ ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಸಹಿ/- ಆಡಳಿತಾಧಿಕಾರಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

DIPR/MYS/KAVITA/48/24-25

ಜೆಡಿಎಸ್‌ಗೆ ಪುನರ್ಜನ್ಮ ನೀಡಿದ ಮೈತ್ರಿ

← ಮೊದಲಪುಟದಿಂದ

ಇನ್ನು ಲೋಕಸಭಾ ಚುನಾವಣೆಯ ಬೆನ್ನಲ್ಲೇ ನಡೆದ ವಿಧಾನ ಪರಿಷತ್‌ನ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದ ಚುನಾವಣೆ ಯಲ್ಲಿ ಸ್ಪರ್ಧಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಜೆಡಿಎಸ್ ಜಯಭೇರಿ ಭಾರಿಸಿದೆ. ಕಾಂಗ್ರೆಸ್‌ನೊಂದಿಗೆ ಕಳೆದ ಲೋಕಸಭಾ ಚುನಾವಣೆ ಯಲ್ಲಿ ಸ್ಪರ್ಧಿಸಿದಾಗ ನಿರೀಕ್ಷಿತ ಫಲಿತಾಂಶ ದೊರೆಯದೇ ಅಸಮಾಧಾನ ಉಂಟಾಗು ತ್ತಿತ್ತು. ಆದರೆ ಈ ಬಾರಿ ಬಿಜೆಪಿಯೊಂದಿಗಿನ ಮೈತ್ರಿ ಹೆಚ್ಚಿನ ಅನುಕೂಲವಾಗಿದೆ. ಆದ್ದರಿಂದ ಮುಂಬರುವ ಬಿಬಿಎಂಪಿ, ನಗರ ಸ್ಥಳೀಯ ಸಂಸ್ಥೆಗಳು, ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲೂ ಮೈತ್ರಿಯನ್ನು ಮುಂದುವರಿಸಲು ಉತ್ಸುಕವಾಗಿದೆ ಎಂದು ತಿಳಿದುಬಂದಿದೆ.

ಸೋಮವಾರ ಹಾಜರಿ ಕಡ್ಡಾಯ

← ಮೊದಲಪುಟದಿಂದ

ಈ ಹಿಂದೆ, ಪ್ರತಿ ಸೋಮವಾರಗಳಂದು ತಾಲೂಕು ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳಾದಿಯಾಗಿ ಎಲ್ಲರೂ ತಮ್ಮ ತಮ್ಮ ಕೇಂದ್ರಸ್ಥಾನದ ಕಚೇರಿಗಳಲ್ಲಿದ್ದು, ಜನರ ಕೆಲಸಗಳನ್ನು ಮಾಡುತ್ತಿದ್ದರು. ಆದರೆ, ಕೃಷಿಯೇತರ ಹಿನ್ನೆಲೆಯಿಂದ ಅಧಿಕಾರಿಗಳು, ನೌಕರರು ಸರಕಾರಿ ಸೇವೆಗೆ ಬರುವ ಪ್ರಮಾಣ ಹೆಚ್ಚಿದ ಮೇಲೆ ಈ ಪದ್ಧತಿಯಲ್ಲಿ ಸ್ವಲ್ಪ ಮಟ್ಟಿಗೆ ಏರು ಪೇರಾಗಿದೆ.

ಆದ್ದರಿಂದ, ಪ್ರತಿಯೊಂದು ಇಲಾಖೆಯ ಅಧಿಕಾರಿ, ನೌಕರರು ಪ್ರತಿ ಸೋಮವಾರಗಳಂದು ತಮ್ಮ ತಮ್ಮ ಕೇಂದ್ರಸ್ಥಾನದ ಕಚೇರಿಗಳಲ್ಲಿ ಹಾಜರಿದ್ದು, ಕರ್ತವ್ಯ ನಿರ್ವಹಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಂಎಲ್‌ಸಿ ಅಡಗೂರು ಎಚ್.ವಿಶ್ವನಾಥ್ ಮನವಿ ಕೋರಿದ್ದರು. ಈ ಬಗ್ಗೆ ಸಕಾರಾತ್ಮಕವಾಗಿ ಸಿಎಂ ಸಿದ್ದರಾಮಯ್ಯ ಸ್ಪಂದಿಸಿ, ಅಗತ್ಯ ಕ್ರಮವಹಿಸಲು ಸೂಚನೆ ನೀಡಿದ್ದಾರೆ.

ಮೋದಿ ಮೋದಿ ಮೋದಿ...

← ಮೊದಲಪುಟದಿಂದ

ರಾಷ್ಟ್ರರಾಜಧಾನಿಗೆ ಬಿಗಿ ಭದ್ರತೆ: ಪ್ರಧಾನಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದ ಹಿನ್ನೆಲೆಯಲ್ಲಿ ರಾಷ್ಟ್ರರಾಜಧಾನಿಗೆ ಬಿಗಿ ಭದ್ರತೆ ಒದಗಿಸಲಾಗಿದೆ. ಅರೆಸೇನಾ ಸಿಬ್ಬಂದಿಗಳ 5 ತಂಡ, ಎನ್‌ಎಸ್‌ಜಿ ಕಮಾಂಡೋಗಳು, ಡ್ರೋನ್ಸ್ ಮತ್ತು ಸ್ನೈಪರ್‌ಗಳು, ಪೊಲೀಸ್ ಸೇರಿ 2500 ಸಿಬ್ಬಂದಿಯನ್ನು ಕಾರ್ಯಕ್ರಮದ ಭದ್ರತೆಗೆ ನಿಯೋಜಿಸಲಾಗಿದೆ. ಭದ್ರತಾ ದೃಷ್ಟಿಯಿಂದ ಜೂನ್ 9 ಮತ್ತು 10 ರಂದು ದೆಹಲಿಯನ್ನು 'ಹಾರಾಟ ರಹಿತ' ವಲಯ ಎಂದು ಘೋಷಿಸಲಾಗಿದ್ದು, ಡ್ರೋನ್ಸ್ ಮತ್ತು ಗ್ಲೈಡರ್ಸ್‌ಗಳ ಹಾರಾಟವನ್ನು ಸಂಪೂರ್ಣ ನಿಷೇಧಿಸಲಾಗಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರಿಗಾಗಿ ಹೋಟೆಲ್‌ನಿಂದ ರಾಷ್ಟ್ರಪತಿ ಭವನದವರೆಗೆ ವಿಶೇಷವಾಗಿ ಮಾರ್ಗವನ್ನು ನಿಯೋಜನೆ ಮಾಡಲಾಗಿದ್ದು, ಹೋಟೆಲ್ ಲೀಲಾ, ತಾಜ್, ಐಟಿಸಿ ಮೌರ್ಯ, ಕ್ಲಾರಿಡ್ಜಸ್, ಒಬೆರಾಯ್‌ಗೆ ಬಿಗಿ ಭದ್ರತೆ ಒದಗಿಸಲಾಗಿದೆ. ರಾಷ್ಟ್ರಪತಿ ನಿವಾಸ ಹಾಗೂ ಆಯಕಟ್ಟಿನ ಜಾಗಗಳಲ್ಲಿ ದೆಹಲಿ ಕಮಾಂಡೋಗಳು, ಎನ್‌ಎಸ್‌ಜಿ ತಂಡಗಳನ್ನು ನಿಯೋಜಿಸಲಾಗಿದ್ದು, ಗಣ್ಯರು ಓಡಾಡುವ ಮಾರ್ಗದಲ್ಲೂ ಸ್ನೈಪರ್ ಹಾಗೂ ಶಸ್ತ್ರಸಜ್ಜಿತ ಸಿಬ್ಬಂದಿಯನ್ನು

ನಿಯೋಜಿಸಲಾಗಿದೆ. ಶನಿವಾರದಿಂದಲೇ ದೆಹಲಿ ಗಡಿ ಭಾಗದಲ್ಲಿ ತಪಾಸಣೆ ಆರಂಭವಾಗಿದ್ದು, ರಾಷ್ಟ್ರಪತಿ ಭವನ ಸೇರುವ ಹಲವು ಮಾರ್ಗಗಳನ್ನು ಸಾರ್ವಜನಿಕ ಬಳಕೆಗೆ ಬಂದ್ ಮಾಡಲಾಗಿದೆ.

ರಾಷ್ಟ್ರಪತಿಗಳಿಂದ ಔತಣಕೂಟ: ಪ್ರಧಾನ ಮಂತ್ರಿ ಹಾಗೂ ನೂತನ ಸಂಸದರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದ ಬಳಿಕ ರಾಷ್ಟ್ರಪತಿ ಭವನದಲ್ಲಿ ದ್ರೌಪದಿ ಮುರ್ಮು ಅವರು ಔತಣ ಕೂಟ ಆಯೋಜಿಸಿದ್ದು, ಈ ಕಾರ್ಯಕ್ರ ಮದಲ್ಲಿ ವಿದೇಶಿ ಅತಿಥಿಗಳು ಭಾಗವಹಿಸಲಿದ್ದಾರೆ. ಉನ್ನತ ಮಟ್ಟದ ವಿಚಾರ ವಿನಿಮಯಕ್ಕೆ ಈ ಕಾರ್ಯಕ್ರಮ ವೇದಿಕೆಯಾಗಲಿದ್ದು, ಸಾರ್ಕ್ ರಾಷ್ಟ್ರಗಳ ನಡುವಿನ ಬಾಂಧವ್ಯ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಗಂಭೀರ ಚರ್ಚೆಗಳು ನಡೆಯಲಿವೆ.

ರೌಡಿ ಚೈಲ್ಡ್ ರವಿ ಕೊಲೆ ಪ್ರಕರಣ: ನಾಲ್ವರು ಅರೆಸ್ಟ್

ಹಾಸನ: ಕುಖ್ಯಾತ ರೌಡಿಶೀಟರ್ ಚೈಲ್ಡ್ ರವಿಯನ್ನು ಇತ್ತೀಚೆಗೆ ನಾಲ್ವರು ಬರ್ಬರವಾಗಿ ಕೊಲೆ ಮಾಡಿದ್ದರು. ದೃಶ್ಯಾವಳಿಗಳು ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಕೊನೆಗೂ ಹಂತಕರನ್ನು ಹೆಡೆಮುರಿಕಟ್ಟುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಚುನಾವಣಾ ಫಲಿತಾಂಶ ಹೊರಬಂದ ಮಾರನೇ ದಿನ ನೀರು ತರಲೆಂದು ಹೋಗಿದ್ದ ಚೈಲ್ಡ್ ರವಿ ಆಲಿಯಾಸ್ ರವಿಕುಮಾರ್‌ನನ್ನು ಕಾರಿನಲ್ಲಿ ಬಂದ 4 ಮಂದಿ ದುಷ್ಕರ್ಮಿಗಳು ಕೊಚ್ಚಿ ಕೊಲೆ ಮಾಡಿದ್ದರು. ಕೊಲೆ ಆರೋಪಿಗಳನ್ನು ಹಾಸನ ಹೊರವಲಯದ ಗ್ಯಾರಳ್ಳಿ ಬಳಿ ಅರೆಸ್ಟ್ ಮಾಡಲಾಗಿದೆ. ಪ್ರೀತಮ್ (27), ಕೀರ್ತಿ(26), ರಂಗನಾಥ್ ಅಲಿಯಾಸ್ ರಂಗ(26) ಹಾಗೂ ಅಮಿತ್ ಆಲಿಯಾಸ್ ಅಮ್ಮಿ (31) ಬಂಧಿತ ಆರೋಪಿಗಳು. ಜೂನ್ 5ರ ಮುಂಜಾನೆ ರೌಡಿ ಶೀಟರ್ ರವಿಕುಮಾರ್ ಅಲಿಯಾಸ್ ಚೈಲ್ಡ್ ರವಿ ಅವರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಮೃತ ರೌಡಿಶೀಟರ್ 2 ಕೊಲೆ ಸೇರಿ 7 ಪ್ರಕರಣದಲ್ಲಿ ಭಾಗಿಯಾಗಿದ್ದ ಎಂಬ ಆರೋಪವಿದೆ. ಈಗಾಗಲೇ 3 ಕೊಲೆ ಮಾಡಿ ಜೈಲಿಗೆ ಹೋಗಿ ಬಂದಿದ್ದ ಪ್ರೀತಮ್ ಹಾಗೂ ರವಿ ನಡುವೆ ಹಾಸನದಲ್ಲಿ ಡಾನ್ ಪಟ್ಟಕ್ಕಾಗಿ ಫೈಟ್ ಶುರುವಾಗಿತ್ತು.

ಕರ್ತವ್ಯ ಲೋಪ: ಗ್ರಾಮೀಣ ಠಾಣೆ ಇನ್ಸ್‌ಪೆಕ್ಟರ್ ಸಸ್ಪೆಂಡ್

ಗದಗ: ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಗದಗ ಗ್ರಾಮೀಣ ಪೊಲೀಸ್ ಠಾಣೆ ಸಿಪಿಐ ಎಂ.ಎಂ ನದಾಫ್ ಅವರನ್ನು ಅಮಾನತು ಮಾಡಲಾಗಿದೆ. ಸಸ್ಪೆಂಡ್ ಮಾಡಿ ಗದಗ ಎಸ್ಪಿ ಬಿ.ಎಸ್ ನೇಮಗೌಡ ಆದೇಶ ಮಾಡಿದ್ದಾರೆ.

ಸಿಪಿಐ ನದಾಫ್ ಅವರು ಲಂಚ ಪಡೆದು ನೊಂದ ಕುಟುಂಬಸ್ಥರ ಮೇಲೆ ದೌರ್ಜನ್ಯ ಮಾಡಿದ ಆರೋಪ ಎದುರಿಸುತ್ತಿದ್ದಾರೆ. ಈ ಬಗ್ಗೆ ಶುಕ್ರವಾರ ಎಸ್ಪಿ ಕಚೇರಿ ಬಳಿ ಅಡವಿ ಸೋಮಾಪುರ ಕುಟುಂಬಸ್ಥರು ಘೇರಾವ್ ಹಾಕಿದ್ದರು. ಹಲ್ಲೆ ಮಾಡಿದವರ ಪರವಾಗಿ ಸಿಪಿಐ ಕೆಲಸ ಮಾಡುತ್ತಿದ್ದಾನೆ ಎಂದು ತರಾಟೆಗೆ ತೆಗೆದುಕೊಂಡಿದ್ದರು. ಜಿಮ್ಸ್ ಬಳಿಯ ಮೆಡಿಕಲ್ ಶಾಪ್ ಮೇಲಿನ ದಾಳಿ, ಅಡವಿ ಸೋಮಾಪೂರ ಸಣ್ಣ ತಾಂಡಾದಲ್ಲಿ ಮನೆಗಳಿಗೆ ನುಗ್ಗಿ ಹಲ್ಲೆ ಪ್ರಕರಣಗಳು ನಿಭಾಯಿಸುವಲ್ಲಿ ಕರ್ತವ್ಯ ಲೋಪ, ಲಂಚ ಪಡೆದ ಆರೋಪ ಸೇರಿ ಹಲವಾರು ಪ್ರಕರಣಗಳಲ್ಲಿ ನಿರ್ಲಕ್ಷ್ಯ ಹಿನ್ನಲೆಯಲ್ಲಿ ಅಮಾನತು ಮಾಡಿ ಆದೇಶಿಸಲಾಗಿದೆ. ಇಲಾಖೆ ತನಿಖೆಗೂ ಮೇಲಾಧಿಕಾರಿಗಳಿಗೆ ವರದಿ ಕಳಿಸಲಾಗಿದೆ.

ಪಾಕ್‌ನೊಂದಿಗೆ ಭಾರತ ಕ್ರಿಕೆಟ್ ಆಡಲೇಬಾರದು

ಮಂಗಳೂರು: ಪಾಕ್‌ನೊಂದಿಗೆ ಭಾರತ ಕ್ರಿಕೆಟ್ ಪಂದ್ಯಾಟದಲ್ಲಿ ಭಾಗವಹಿಸಲೇ ಬಾರದು. ಇದು ನನ್ನ ವೈಯುಕ್ತಿಕ ಅಭಿಪ್ರಾಯ ಎಂದು ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್ ಆಕ್ರೋಶ ವ್ಯಕ್ತಪಡಿಸಿದರು. ನ್ಯೂಯಾರ್ಕ್‌ನಲ್ಲಿ ಇಂಡಿಯಾ

– ಪಾಕಿಸ್ತಾನದ ನಡುವೆ ಟಿ-20 ವರ್ಲ್ಡ್ ಕಪ್ ಕ್ರಿಕೆಟ್ ಮ್ಯಾಚ್ ನಡೆಯಲಿರುವ ಹಿನ್ನೆಲೆಯಲ್ಲಿ ಮಾತನಾಡಿದ ಅವರು, ಹಿಂದೆ ಪಾಕಿಸ್ತಾನದವರು ಕ್ರಿಕೆಟ್ ಆಟವಾಡಲು ಬಂದ ವೇಳೆ ಪಿಚ್ ಅಗೆದಿದ್ದಾರೆ. ವಿನಾಕಾರಣ ಪ್ರತಿಭಟನೆ ಮಾಡಿದ್ದರು. ಆದ್ದರಿಂದ ಎಲ್ಲಿಯವರೆಗೆ ನಮಗೆ ಅವರು ತೊಂದರೆ ಕೊಡುತ್ತಾರೋ, ಅಲ್ಲಿಯವರೆಗೆ ನಾವು ಅವರೊಂದಿಗೆ ಆಟವಾಡಬಾರದು ಎಂದು ಹೇಳಿದರು. ಎರಡೂ ದೇಶಗಳ ನಡುವೆ ಸಂಚರಿಸುವುದನ್ನೂ ನಿಲ್ಲಿಸಲಾಗಿದೆ. ಅಲ್ಲದೆ ಅವರು ನಮ್ಮಲ್ಲಿಗೆ ಬಂದು ಆಟವಾಡುವುದನ್ನೂ ನಿಲ್ಲಿಸಲಾಗಿದೆ. ಇಷ್ಟಾದ ಮೇಲೆ ಪಾಕಿಸ್ತಾನದ ಆಟಗಾರರನ್ನು ದುಬೈ, ನ್ಯೂಯಾರ್ಕ್‌ಗೆ ಕರೆದೊಯ್ದು ಅಲ್ಲಿ ಅವರೊಂದಿಗೆ ಭಾರತದ ಆಟಗಾರರು ಆಡುವುದೆಂದರೆ ಏನರ್ಥ ಎಲ್ಲಿಯವರೆಗೆ ಪಾಕ್‌ನವರು ಭಾರತ ಹೇಳುವುದನ್ನು ಕೇಳುವುದಿಲ್ಲವೋ ಅಲ್ಲಿಯವರೆಗೆ ಅವರೊಂದಿಗೆ ಆಟವಾಡುವುದು ಬೇಡ ಎಂದರು.

ಪದೇ ಪದೇ ಪಕ್ಷೇತರನಾಗಿ ನಿಲ್ಲುವ ಚಟ ನನಗೆ ಇಲ್ಲ

ಉಡುಪಿ: ಪದೇ ಪದೇ ಪಕ್ಷೇತರನಾಗಿ ನಿಲ್ಲುವ ಚಟ ಇಲ್ಲ. ಈ ಮಟ್ಟಿನ ಸೋಲು ನಿರೀಕ್ಷೆ ಮಾಡಿರಲಿಲ್ಲ. ಸೋಲಿನಿಂದ ಓಡಿ ಹೋಗುವ ಪ್ರಶ್ನೆಯೇ ಇಲ್ಲ. ರಾಜಕೀಯ, ಸಾಮಾಜಿಕ ಕಾರ್ಯಕರ್ತನಾಗಿ ಸಮಾಜದೊಂದಿಗೆ ಇರುತ್ತೇನೆ

ಎಂದು ಮಾಜಿ ಶಾಸಕ ಕೆ. ರಘುಪತಿ ಭಟ್ ಹೇಳಿದರು.

ವಿಧಾನ ಪರಿಷತ್‌ನ ನೈಋತ್ಯ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡಿದ್ದ ರಘುಪತಿ ಭಟ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಎಲ್ಲ ಬೂತ್‌ಗಳಲ್ಲೂ ಕಾರ್ಯಕರ್ತರು ನಮ್ಮ ಜತೆಗೆ ಇದ್ದರು. ಪಕ್ಷದ ತಪ್ಪು ನಿರ್ಣಯ ಪ್ರತಿಭಟಿಸಿ ಸ್ಪರ್ಧೆ ಮಾಡಿದ್ದೇನೆ. ಮುಂದೆಯೂ ರಾಜಕೀಯದಲ್ಲಿ ಸಕ್ರಿಯವಾಗಿ ಇರಲಿದ್ದೇನೆ. ಬಿಜೆಪಿ ಕಾರ್ಯಕರ್ತನಾಗಿಯೇ ಇರುತ್ತೇನೆ ಎಂದು ಹೇಳಿದರು.

ನೈಋತ್ಯ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕೆ. ರಘುಪತಿ ಭಟ್ 7039 ಮತಗಳನ್ನು ಪಡೆದಿದ್ದಾರೆ. ಬಿಜೆಪಿ ಅಭ್ಯರ್ಥಿ ಡಾ. ಧನಂಜಯ ಸರ್ಜಿ 37,627 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ 13,516 ಮತಗಳನ್ನು ಪಡೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ಬಾಲಕೃಷ್ಣ ವಿರುದ್ಧ ನಿಂದನೆ: ದೂರು

ಮಾಗಡಿ: ಶಾಸಕ ಎಚ್.ಸಿ.ಬಾಲಕೃಷ್ಣ ವಿರುದ್ಧ ಜಿಲ್ಲಾ ಜೆಡಿಎಸ್ ಯುವ ಕಾರ್ಯಾಧ್ಯಕ್ಷ ಎಸ್.ವಿ.ಟಿ ವೆಂಕಟೇಶ್ ಎಂಬುವವರು ಜಾಲತಾಣದಲ್ಲಿ

ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದಾರೆ ಎಂದು ಕಾಂಗ್ರೆಸ್ ಯುವ ಮುಖಂಡ ಕೆಂಪೇಗೌಡ ದೂರು ನೀಡಿದ್ದಾರೆ. ಈಚೆಗೆ ಶಾಸಕ ಬಾಲಕೃಷ್ಣ ತಮ್ಮ ಕಚೇರಿಯಲ್ಲಿ ಲೋಕಸಭೆ ಚುನಾವಣೆ ಸೋಲಿನ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದ್ದ ವೇಳೆ ಎಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಹೇಳಿಕೆ ನೀಡಿದ್ದರು. ಇದರ ವಿಡಿಯೊ ಜಾಲತಾಣದಲ್ಲಿ ಹರಿದಾಡಿತ್ತು. ಇದಕ್ಕೆ ಪ್ರತಿಯಾಗಿ ಎಸ್.ವಿ.ಟಿ ವೆಂಕಟೇಶ್, ಶಾಸಕ ಬಾಲಕೃಷ್ಣ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದಾರೆ. ಇದರಿಂದ ಅಭಿಮಾನಿಗಳು, ಅವರ ಬೆಂಬಲಿಗರಿಗೆ ಅಪಾರ ನೋವಾಗಿದೆ ಎಂದು ದೂರಿದ್ದಾರೆ.

ವಿದ್ಯುತ್ ಸ್ಪರ್ಶ: ಬೆಸ್ಕಾಂ ಸಿಬ್ಬಂದಿ ಸಾವು

ಚಿಕ್ಕಬಳ್ಳಾಪುರ: ಜಿಲ್ಲೆಯ ನೂತನ ತಾಲೂಕು ಮಂಚೇನಹಳ್ಳಿಯ ಬಿಸಲಹಳ್ಳಿ ಗ್ರಾಮದಲ್ಲಿ ಬೆಸ್ಕಾಂ ಸಿಬ್ಬಂದಿಯೊಬ್ಬರು ಪ್ರಸರಣ ಘಟಕದ ಕಂಬದಲ್ಲಿಯೇ ಮೃತಪಟ್ಟ ಘಟನೆ ನಡೆದಿದೆ. ಶಿರಾ ಮೂಲದ ಉದಯ್ ಕುಮಾರ್ ಎಂಬುವರು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಸಿಬ್ಬಂದಿ. ದುರಸ್ತಿ ಕಾರ್ಯಕ್ಕೆ ವಿದ್ಯುತ್ ಕಂಬ ಏರಿದ್ದ ವೇಳೆ ವಿದ್ಯುತ್ ಹರಿದು ಉದಯ ಕುಮಾರ್ ಕಂಬದಲ್ಲಿಯೇ ಅಸುನೀಗಿದ್ದಾರೆ. ವಿಷಯ ತಿಳಿದ ಕೂಡಲೇ ಬೆಸ್ಕಾಂ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ವಿದ್ಯುತ್ ಪ್ರಸರಣ ಘಟಕದಲ್ಲಿ ರಿಪೇರಿ ಕಾರ್ಯದಲ್ಲಿ ತೊಡಗಿದ್ದ ವೇಳೆ ಘಟನೆ ನಡೆದಿದೆ.

ಮರ ಬಿದ್ದು ಯುವಕ ಸಾವು

ಚಿಕ್ಕಮಗಳೂರು: ಮರ ಕಡಿಯುವಾಗ ಮರ ಬಿದ್ದು ಯುವಕರೊಬ್ಬರು ಸಾವನ್ನಪ್ಪಿದ ಘಟನೆ ಮೂಡಿಗೆರೆ

ತಾಲೂಕಿನ ಹೆಗ್ಗುಡ್ಲು ಎಸ್ಟೇಟಿನಲ್ಲಿ ನಡೆದಿದೆ. ಅಬ್ದುಲ್ ಅಜೀಜ್ (20) ಮೃತಪಟ್ಟವರು ಎಂದು ಗುರುತಿಸಲಾಗಿದೆ. ಕೇರಳದಿಂದ ಮರ ಕಡಿಯಲು ಅಪ್ಪ-ಮಗ ಬಂದಿದ್ದರು ಎನ್ನಲಾಗಿದೆ. ಅಪ್ಪ ಮರ ಕತ್ತರಿಸುತ್ತಿದ್ದು, ಈ ವೇಳೆ ಮಗ ಕೆಳಗೆ ನಿಂತಿದ್ದ. ಈ ವೇಳೆ ಮರ ಆಕಸ್ಮಿಕವಾಗಿ ಅಬ್ದುಲ್ ಅಜೀಜ್ ಅವರ ಮೇಲೆ ಬಿದ್ದಿದೆ. ಪರಿಣಾಮವಾಗಿ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ಸಂಬಂಧ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲೂಕಿನ ಬಾಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ಮುಖಂಡನ ಮೃತದೇಹ ಪತ್ತೆ

ಬೀದರ್: ಬಿಜೆಪಿ ಮುಖಂಡ, ಹಿರಿಯ ಯೋಗ ಶಿಕ್ಷಕ ಧೋಂಡಿರಾಮ ಚಾಂದಿವಾಲೆ ಅವರ ಮೃತದೇಹವು ಶನಿವಾರ ಬೆಳಿಗ್ಗೆ ನೆರೆಯ ಮಹಾರಾ

ಷ್ಟ್ರದ ಉಮರ್ಗಾ ರಾಷ್ಟ್ರೀಯ ಹೆದ್ದಾರಿ ಪಕ್ಕ ಪತ್ತೆಯಾಗಿದೆ. ಮೃತರ ಜೇಬಿನಲ್ಲಿ ದೊರೆತ ಬಸ್ ಟಿಕೆಟ್ ಮತ್ತು ಟ್ಯಾಟೋ ಆಧಾರದ ಮೇಲೆ ಉಮರ್ಗಾ ಪೊಲೀಸರು ಬೀದರ್ ಜಿಲ್ಲೆಗೆ ಸಂಪರ್ಕಿಸಿದ್ದು, ಚಾಂದಿವಾಲೆ ಅವರ ಮೃತದೇಹ ಎಂಬುದು ಧೃಡವಾಗಿದೆ. ಮೃತದೇಹದ ಫೋಟೋ ಗಳನ್ನು ಗಮನಿಸಿದರೆ ಅನುಮಾನಾಸ್ಪದವಾಗಿದ್ದು, ಇದು ಕೊಲೆ ಅಥವಾ ರಸ್ತೆ ಅಪಘಾತ ಎನ್ನುವುದು ತನಿಖೆಯಿಂದಲೇ ತಿಳಿಯಬೇಕಿದೆ. ಉಮರ್ಗಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಮೈದನನ್ನು ಇರಿದು ಕೊಂದ ಭಾವ

ಮೈಸೂರು: ಸಹೋದರಿ ಪರ ನ್ಯಾಯ ಕೇಳಲು ತೆರಳಿದ್ದವನಿಗೆ ಭಾವನೇ ಚಾಕುವಿನಿಂದ ಇರಿದು ಕೊಂದ ಘಟನೆ ಮೈಸೂರಿನ ಕುವೆಂಪುನಗರದ ಐ ಬ್ಲಾಕ್‌ನಲ್ಲಿ ನಡೆದಿದೆ. ಅಭಿಷೇಕ್(27) ಸಾವನ್ನಪ್ಪಿದ ಯುವಕ. ಬಾಮೈದನಿಗೆ ಚಾಕುವಿನಿಂದ ಇರಿದು ಹತ್ಯೆಗೈದು ಆರೋಪಿ ಭಾವ ರವಿ ಪರಾರಿಯಾಗಿದ್ದಾನೆ. ಸ್ಥಳಕ್ಕೆ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಮ್ಮೆ ಅಸಮಾಧಾನ ಹೊರಹಾಕಿದ ಸತೀಶ್ | ಕುಡಚಿ, ಅಥಣಿಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆ

ಕಾಂಗ್ರೆಸ್ ಹಿನ್ನಡೆಗೆ ಶಾಸಕರೇ ಕಾರಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿಕ್ಕೋಡಿ ಲೋಕಸಭಾ ಚುನಾವಣೆಯಲ್ಲಿ ಇನ್ನಷ್ಟು ಮತಗಳ ಅಂತರದ ಗೆಲ್ಲುವ ಸಾಧ್ಯತೆಯಿದ್ದರೂ, ಕಾಂಗ್ರೆಸ್ ಸಾಧಾರಣ ಗೆಲುವು ಸಾಧಿಸಿರುವುದಕ್ಕೆ ಅಸಮಾಧಾನ ಮುಂದುವರೆಸಿರುವ ಸಚಿವ ಸತೀಶ್ ಜಾರಕಿಹೊಳಿ ಸ್ಥಳೀಯ ಶಾಸಕರ ವಿರುದ್ಧ ವಾಕ್ಸಮರ ಮುಂದುವರೆಸಿದ್ದಾರೆ.

ಫಲಿತಾಂಶದ ಮರುದಿನವೇ ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಅಥಣಿ ಶಾಸಕ ಲಕ್ಷ್ಮಣ ಜಾರಕಿಹೊಳಿ ವಿರುದ್ಧ ಅಸಮಾಧಾನ ಹೊರಹಾಕಿದ್ದರು. ಇದೀಗ ಬೆಂಗಳೂರಿನಲ್ಲಿ ಅಥಣಿ ಶಾಸಕರೊಂದಿಗೆ, ಕುಡುಚಿ ಶಾಸಕ ಮಹೇಂದ್ರ ತಮ್ಮಣ್ಣವರ್ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿ ಜಿಲ್ಲೆಯ ರಾಜಕಾರಣದಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದು, ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಎರಡು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ. ಅಥಣಿ ವಿಧಾನಸಭಾ ಕ್ಷೇತ್ರದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 70 ಸಾವಿರ ಲೀಡ್ ಬಂದಿತ್ತು. ಆದರೀಗ 8 ಸಾವಿರ ಕಡಿಮೆಯಾಗಿದೆ. ಶಶಿಕಲಾ ಜೊಲ್ಲೆ ಕ್ಷೇತ್ರದಲ್ಲಿ 30 ಸಾವಿರ ಲೀಡ್ ಸೇರಿದಂತೆ ದುರ್ಬಲ ಕ್ಷೇತ್ರದಲ್ಲಿಯೂ ಕಾಂಗ್ರೆಸ್ ಉತ್ತಮವಾಗಿ ಮತ ಗಳಿಸಿದೆ. ಆದರೆ ಅಥಣಿಯಲ್ಲಿ ಮತ್ತು ಕುಡಚಿಯಲ್ಲಿ ಹಿನ್ನಡೆಯಾಗಿದೆ ಎಂದರು.

ಕಾಂಗ್ರೆಸ್‌ಗೆ ಹಿನ್ನಡೆಯಾಗಲು ಶಾಸಕರೇ ಕಾರಣ: ಕುಡಚಿ ಕ್ಷೇತ್ರದ ಶಾಸಕ ಮಹೇಂದ್ರ, ಕೆ.ತಮ್ಮಣ್ಣವರ್ ಮತದಾನಕ್ಕೆ ಎರಡು ದಿನ ಮೊದಲೇ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಎಲ್ಲೋ ಹೋಗಿ ಮಲಗಿದ್ದರು. ನಾನು ಮೂರು ದಿನ ಅದೇ ಕ್ಷೇತ್ರದಲ್ಲಿ ಉಳಿದು ಕೆಲಸ ಮಾಡಬೇಕಾಯಿತು. ಮತದಾನದ ದಿನ ಮತಗಟ್ಟೆಗಳಿಗೆ ಭೇಟಿ ನೀಡುವುದು ಶಾಸಕರ ಕರ್ತವ್ಯ. ಅಂದೂ ಕೂಡ ಮಹೇಂದ್ರ ಅವರು ಪತ್ತೆ ಇರಲಿಲ್ಲ ಎಂದು ಆರೋಪಿಸಿದರು.

ಈ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಲು ಶಾಸಕರುಗಳೇ ಕಾರಣ. ಅವರ ಕಾರ್ಯಕರ್ತರು ಹಾಗೂ ಅನುಯಾಯಿಗಳು ಯಾರ ಪರವಾಗಿ ಕೆಲಸ ಮಾಡಿದ್ದಾರೆ ಎಂದು ಗೊತ್ತಿದೆ. ಈ ಬಗ್ಗೆ ರಾಜ್ಯ ನಾಯಕರಿಗೆ ಮಾಹಿತಿಯಿರುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಹಿನ್ನಡೆಗೆ ಕಾರಣವನ್ನು ಶಾಸಕರು ಹೇಳಿದಾಗ ಮಾತ್ರ ವಿಷಯ ಗೊತ್ತಾಗಲಿದೆ ಎಂದರು.

ಗ್ಯಾರಂಟಿ ಯೋಜನೆ ಕೈ ಹಿಡಿದಿರುವುದರಿಂದಾಗಿಯೇ ಬಿಜೆಪಿಯವರ ಗೆಲುವಿನ ಅಂತರ ಕಡಿಮೆಯಾಗಿದೆ. ಈ ಮೊದಲೆಲ್ಲಾ 2-3 ಲಕ್ಷದ ಅಂತರದಲ್ಲಿ ಫಲಿತಾಂಶ ಬರುತ್ತಿತ್ತು. ಅದು ಕುಸಿದಿದೆ. ಗ್ಯಾರಂಟಿ ಯೋಜನೆಗಳು ಮುಂದುವರೆಯಲಿವೆ. ಜೆಡಿಎಸ್ -ಬಿಜೆಪಿ ಮೈತ್ರಿ ಕಾಂಗ್ರೆಸ್‌ಗೆ ಮುಂದಿನ ದಿನಗಳಲ್ಲಿ ಸವಾಲಾಗಿದ್ದು, ಅದನ್ನು ಎದುರಿಸಲು ಈಗಿನಿಂದಲೇ ಕಾರ್ಯತಂತ್ರ ರೂಪಿಸುವ ಅಗತ್ಯವಿದೆ.

- ಸತೀಶ್ ಜಾರಕಿಹೊಳಿ, ಸಚಿವ

ಲಕ್ಷ್ಮಣ್ ಸವದಿ ಜತೆ ಯಥಾಸ್ಥಿತಿ

ಲಕ್ಷ್ಮಣ್ ಸವದಿ ಲೋಕಸಭಾ ಚುನಾವಣೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ರಾಜಕೀಯವಾಗಿ ನಮ್ಮೊಂದಿಗೆ ಮತ್ತಷ್ಟು ಗಟ್ಟಿಗೊಳ್ಳುವ ಅವಕಾಶವಿತ್ತು. ಆದರೆ ಈಗ ಯಥಾಸ್ಥಿತಿ ಮುಂದುವರೆದಿದೆ. ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸುವ ಕ್ಷೇತ್ರಗಳಲ್ಲಿ ವಿಶ್ಲೇಷಣೆ ನಡೆಯುವುದು ಸಹಜ. ಆದರೆ ಸಚಿವರ ತಲೆದಂಡ ಆಗುವುದಿಲ್ಲ. ಸೋಲು- ಗೆಲುವಿಗೆ ಸಚಿವರನ್ನು ಹೊಣೆ ಮಾಡುವುದಾಗಿಯೂ ಯಾರೂ ಸೂಚನೆ ನೀಡಿರಲಿಲ್ಲ. ಅಂತಹ ಚರ್ಚೆಗಳೂ ನಡೆದಿರಲಿಲ್ಲ. ಮತದಾರರು ರಾಷ್ಟ್ರ ರಾಜಕಾರಣಕ್ಕೆ ಮತ್ತು ರಾಜ್ಯ ರಾಜಕಾರಣಕ್ಕೆ ಬೇರೆಯದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ಎಂದು ಹೇಳಿದರು. ಇನ್ನು ಸಚಿವರ ಪ್ರಗತಿ ಕುರಿತು ವರದಿ ನೀಡಬೇಕು ಎಂದು ರಾಹುಲ್ ಗಾಂಧಿ ಅವರು ಹೇಳಿದ್ದಾರೆ ಎನ್ನುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, ನಾವೇನು ಸರಕಾರಿ ನೌಕರರಲ್ಲ. ಪ್ರಗತಿಪತ್ರ ಅಗತ್ಯವಿಲ್ಲ ಎಂದರು.

ವಲಸಿಗ ಕೈ ಕಾರ್ಯಕರ್ತರ ಮೇಲೆ ಆಪಾದನೆ ಸರಿಯಲ್ಲ

ಸತೀಶ್ ಜಾರಕಿಹೊಳಿ ವಿರುದ್ಧ ಸಿಡಿದೆದ್ದ ಸವದಿ ಬೆಂಬಲಿಗರು

ಸುದ್ದಿಗೋಷ್ಠಿಯಲ್ಲಿ ಶಾಸಕ ಸವದಿ ಬೆಂಬಲಿಗರು ಮಾತನಾಡಿದರು.

ಅಥಣಿ : ಚಿಕ್ಕೋಡಿ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅಥಣಿ ಮತ ಕ್ಷೇತ್ರದಲ್ಲಿ ಬಿಜೆಪಿ ಪಕ್ಷಕ್ಕೆ ಲೀಡ್ ಕೊಟ್ಟ ವಿಚಾರವಾಗಿ ಸಚಿವ ಸತೀಶ್ ಜಾರಕಿಹೊಳಿ ಆರೋಪಕ್ಕೆ ಲಕ್ಷ್ಮಣ ಸವದಿ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶನಿವಾರ ಅಥಣಿ ಪಟ್ಟಣದಲ್ಲಿ ಸೇರಿದ್ದ ಸವದಿ ಬೆಂಬಲಿಗರು ಸುದ್ದಿಗೋಷ್ಠಿ ನಡೆಸಿ ಸಚಿವ ಸತೀಶ್ ಜಾರಕಿಹೊಳಿ ವಿರುದ್ಧ ಹರಿಹಾಯ್ದರು. ಅಥಣಿಯಲ್ಲಿ ನಮ್ಮ ನಂಬಿಕೆಗೆ ಮೋಸವಾಗಿದೆ. ಇಲ್ಲಿನ ಶಾಸಕರು ಕೈ ಕೊಟ್ಟಿದ್ದಾರೆ ಎಂಬ ಸತೀಶ್ ಜಾರಕಿಹೊಳಿ ಹೇಳಿಕೆಗೆ ತಿರುಗೇಟು ನೀಡಿದ ಅವರು, ಯಾರದೋ ಮಾತು ಕೇಳಿ ಲಕ್ಷ್ಮಣ ಸವದಿ ವಿರುದ್ಧ ಆರೋಪ ಮಾಡುವುದು ತಪ್ಪು. ಕಾಂಗ್ರೆಸ್ ಪಕ್ಷದ ಪರವಾಗಿ ನಾವು ನಿರಂತರ ಶ್ರಮವಹಿಸಿ ಕೆಲಸ ಮಾಡಿದ್ದೇವೆ. ಚುನಾವಣೆ ಮುಗಿದು ಫಲಿತಾಂಶದ ನಂತರ ಸಚಿವರ ಈ ಹೇಳಿಕೆ ಎಷ್ಟು ಸರಿ ಎಂದು ಪ್ರಶ್ನಿಸಿದರು. ಒಂದು ವೇಳೆ ಲಕ್ಷ್ಮಣ ಸವದಿ ಬಹಿರಂಗವಾಗಿ ಬಿಜೆಪಿ ಪರ ನಿಂತಿದ್ದರೆ, ಅಥಣಿ ಮತ್ತು ಕಾಗವಾಡ ಕ್ಷೇತ್ರಗಳಲ್ಲಿ ಕನಿಷ್ಠ 50 ರಿಂದ 80 ಸಾವಿರದಷ್ಟು ಹೆಚ್ಚುವರಿ ಮತಗಳು ಬಿಜೆಪಿಗೆ ಬರುತ್ತಿದ್ದವು. ಅಥಣಿ ಮತ ಕ್ಷೇತ್ರದಲ್ಲಿ ಬಿಜೆಪಿ ಮುನ್ನಡೆ ಸಾಧಿಸಿರುವುದಕ್ಕೆ ಹೊಸ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಗೋಕಾಕ್ ಮತ್ತು ಅರಬಾವಿ ಮತಕ್ಷೇತ್ರಗಳಲ್ಲಿ ತಮ್ಮ ಪ್ರಾಬಲ್ಯವೇನು..? ಅಲ್ಲಿ ಏಕೆ ಬಿಜೆಪಿಗೆ ಹೆಚ್ಚಿನ ಮತಗಳು ಬಂದವು ಎಂಬುದಕ್ಕೆ ಸಚಿವರು ಉತ್ತರಿಸಬೇಕು ಎಂದರು.

ಚೆನ್ನಾಂಬಿಕಾ ನಿವಾಸಕ್ಕೆ ಪ್ರಜ್ವಲ್ ಕರೆತಂದ ಎಸ್‌ಐಟಿ

ಹೊಳೆನರಸೀಪುರ: ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಆರೋಪದಡಿ ಬಂಧಿತನಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಶನಿವಾರ ಎಸ್‌ಐಟಿ ವಿಶೇಷ ತಂಡ ಕ್ಯೂಆರ್‌ಟಿ ವಾಹನದಲ್ಲಿ ಪಟ್ಟಣಕ್ಕೆ ಕರೆತಂದು ಸ್ಥಳ ಮಹಜರ್ ನಡೆಸಿತು.

ಬಿಗಿ ಭದ್ರತೆಯ ನಡುವೆ ಬೆಂಗಳೂರಿನಿಂದ ಎಸ್‌ಐಟಿ ತಂಡ, ಪಟ್ಟಣದ ಚೆನ್ನಾಂಬಿಕಾ ನಿವಾಸಕ್ಕೆ ಪ್ರಜ್ವಲ್‌ನನ್ನು ಕರೆ ತಂದಿತು. ಆದರೆ ಮಾಜಿ ಸಂಸದರು ಮಾಧ್ಯಮದವರ ಕಣ್ಣಿಗೆ ಬೀಳದಂತೆ ನೋಕೊಂಡರು. ವಾಹನದಲ್ಲೇ ಮಲಗಿದ್ದರು. ನಿವಾಸದ ಎದುರು ಹಾಸನ ಎಎಸ್‌ಪಿ ವೆಂಕಟೇಶ್ ನಾಯ್ಡು ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಸುಮಾರು 3-4 ವಾಹನಗಳಲ್ಲಿ ಎಸ್‌ಐಟಿ ತಂಡ ಆಗಮಿಸಿದೆ. ಡಿವೈಎಸ್ಪಿ ಸತ್ಯನಾರಾಯಣ ಅವರು ತನಿಖಾ ತಂಡದ ನೇತೃತ್ವ ವಹಿಸಿದ್ದಾರೆ. ಪ್ರಜ್ವಲ್ ಕರೆತಂದ ಬೆನ್ನಲ್ಲೇ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರ ನಿವಾಸಕ್ಕೆ ಎಫ್‌ಎಸ್‌ಎಲ್ ಟೀಂ ಸಹ ಆಗಮಿಸಿತು. ತಾಂತ್ರಿಕ ಸಾಕ್ಷಿ ಇತ್ಯಾದಿ ಸಾಕ್ಷ್ಯಾಧಾರಗಳನ್ನು ಎಸ್‌ಐಟಿ ಹಾಗೂ ಎಫ್‌ಎಸ್‌ಎಲ್ ತಂಡ ಕಲೆ ಹಾಕುತ್ತಿದೆ.

ಮತ್ತಷ್ಟು ಸಾಕ್ಷ್ಯಾಧಾರಕ್ಕೆ ಶೋಧನೆ

ಪ್ರಜ್ವಲ್ ಮೇ 31 ರಂದು ಆಗಮಿಸಿ ಎಸ್‌ಐಟಿ ಮುಂದೆ ಹಾಜರಾಗುವುದಾಗಿ ತಿಳಿಸಿದ್ದರು. ಅದರಂತೆ ಜರ್ಮನಿಯಿಂದ ಆಗಮಿಸಿದ ಪ್ರಜ್ವಲ್‌ಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೇ ಎಸ್‌ಐಟಿ ತಂಡ ವಶಕ್ಕೆ ಪಡೆದಿತ್ತು. ಜೂ.10 ರವರೆಗೆ ಎಸ್‌ಐಟಿ ವಶಕ್ಕೆ ನೀಡಿ ಕೋರ್ಟ್ ಆದೇಶಿಸಿದೆ. ಅದಾದ ಬಳಿಕ ಮತ್ತೊಮ್ಮೆ ಆಗಮಿಸಿ ಸಂಸದರ ನಿವಾಸದ ಹಾಸಿಗೆ, ದಿಂಬು ಮೊದಲಾದ ಸಾಕ್ಷ್ಯಾಧಾರಗಳನ್ನು ಕೊಂಡೊಯ್ಯಲಾಗಿತ್ತು. ಇದೀಗ ಕರೆ ತಂದು ಸ್ಥಳ ಮಹಜರ್ ಮಾಡಲಾಗುತ್ತಿದ್ದು, ಈ ವೇಳೆ ಮತ್ತಷ್ಟು ಪೂರಕ ಸಾಕ್ಷ್ಯಾಧಾರ ಸಿಗಬಹುದು ಎಂದು ಎಸ್‌ಐಟಿ ತಲಾಶ್ ನಡೆಸುತ್ತಿದೆ.

ತವರು ಜಿಲ್ಲೆಯಲ್ಲೇ ಎಷ್ಟು ಬಾರಿ ಅಪಮಾನ ಮಾಡುತ್ತೀರಿ?

ನನ್ನ ಸೋಲು ಸಿದ್ದರಾಮಯ್ಯಗೆ ಮಾಡಿದ ಅಪಮಾನ: ಲಕ್ಷ್ಮಣ್

ಮೈಸೂರು: ಲೋಕಸಭಾ ಕ್ಷೇತ್ರದಲ್ಲಿ ನನ್ನ ಸೋಲು ಸಿಎಂ ಸಿದ್ದರಾಮಯ್ಯ ಅವರಿಗೆ ಮಾಡಿದ ಅಪಮಾನ ಎಂದು ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಬೇಸರ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ಸಿದ್ದರಾಮಯ್ಯ ಅವರ ತವರು ಜಿಲ್ಲೆ. ನನ್ನನ್ನು ಸೋಲಿಸಿ ಬೇಜಾರಿಲ್ಲ. ಆದರೆ, ಸಿದ್ದರಾಮಯ್ಯ ಏನು ತಪ್ಪು ಮಾಡಿದ್ದಾರೆ. ತವರು ಜಿಲ್ಲೆಯಲ್ಲೇ ಎಷ್ಟು ಬಾರಿ ಅಪಮಾನ ಮಾಡುತ್ತೀರಿ? ಇಷ್ಟರ ಮಟ್ಟಿಗೆ ಸ್ಯಾಡಿಸ್ಟಿಕ್ ನೇಚರ್ ಇದ್ದರೆ ಹೇಗೆ ? ಎಂದು ಅಸಮಾಧಾನ ಹೊರಹಾಕಿದರು. ಸಿದ್ದರಾಮಯ್ಯನವರೇ ನನಗೆ ದೇವರು. ಟಿಕೆಟ್ ಕೊಟ್ಟರು. ಅದಕ್ಕೆ ಡಿ.ಕೆ.ಶಿವಕುಮಾರ ಸಹಕಾರ ನೀಡಿದರು. ಎಂಟು ಕ್ಷೇತ್ರದ ಶಾಸಕ, ಮಾಜಿ ಶಾಸಕರು ನನಗೆ ಸಹಕಾರ ನೀಡಿದ್ದಾರೆ. ನನಗೆ ಅದೃಷ್ಟ ಇರಲಿಲ್ಲ, ಹಾಗಾಗಿ ನಾನು ಸೋತಿದ್ದೇನೆ ಎಂದು ನೊಂದು ನುಡಿದರು.

ಬಗೆ ಬಗೆಯ ನಮಸ್ಕಾರ : ನನಗೆ ಮತ ಹಾಕಿದವರಿಗೆ ಸಾಷ್ಟಾಂಗ ನಮಸ್ಕಾರ. ಮತ ಹಾಕದವರಿಗೆ ಬರೀ ನಮಸ್ಕಾರ ಎಂದರು. ನಂತರ ಸಿದ್ದರಾಮಯ್ಯಗೆ ಎದ್ದು ನಿಂತು ಸಾಷ್ಟಾಂಗ ನಮಸ್ಕಾರ ಮಾಡಿದರು. ಮೈಸೂರು- ಕೊಡಗು ಕ್ಷೇತ್ರದಲ್ಲಿ 6.5 ಲಕ್ಷ ಜನ ಮತ ನೀಡಿದ್ದಾರೆ. 7.9ಲಕ್ಷ ಜನ ಮತ ನೀಡಿಲ್ಲ. ಇವರಿಗೂ ಧನ್ಯವಾದ ಹೇಳುತ್ತೇನೆ. ನನ್ನನ್ನು ಎಷ್ಟು ಬಾರಿ ಬೇಕಾದರೂ ಸೋಲಿಸಿ. ಆದರೆ ಸಿದ್ದರಾಮಯ್ಯರಿಗೆ ಎಷ್ಟು ಬಾರಿ ಅನ್ಯಾಯ ಮಾಡುತ್ತೀರಾ. ಸಾಕಷ್ಟು ಅನುದಾನ ಮೈಸೂರಿಗೆ ಕೊಡುತ್ತಿದ್ದಾರೆ. ಅವರಿಗೂ ಇದರ ಬಗ್ಗೆ ನೋವಿದೆ ಎಂದರು.

ಗ್ಯಾರಂಟಿ ಮರು ಪರಿಶೀಲಿಸಿ

ಗ್ಯಾರಂಟಿ ಯೋಜನೆ ಬಗ್ಗೆ ಮುಖ್ಯಮಂತ್ರಿ ಈಗ ಮರು ಪರಿ ಶೀಲನೆ ಮಾಡ ಬೇಕು. ಜನರಿಗೆ ಕಾಂಗ್ರೆಸ್ ಗ್ಯಾರಂಟಿ ಇಷ್ಟ ಆಗಿಲ್ಲ. ಅದನ್ನು ಅವರು ಫಲಿತಾಂಶದ ಮೂಲಕ ತೋರಿಸಿದ್ದಾರೆ. ಬಿಜೆಪಿ ನಮ್ಮ ಗ್ಯಾರಂಟಿ ವಿರುದ್ಧ ಮಾತನಾಡುತ್ತಿತ್ತು. ಜನರು ಅವರನ್ನು ಬೆಂಬಲಿಸಿದ್ದಾರೆ. ಹಾಗಾಗಿ ಜನರಿಗೆ ನಮ್ಮ ಗ್ಯಾರಂಟಿ ಇಷ್ಟ ಆಗಿಲ್ಲ ಎಂದು ಗೊತ್ತಾಗಿದೆ. ಹೀಗಾಗಿ ಗ್ಯಾರಂಟಿ ನಿಲ್ಲಿಸೋದೇ ಒಳಿತು ಎಂದರು.

ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ಶ್ರಮಿಸಿದ್ದೇವೆ

ಯಾರೊಂದಿಗೂ ಒಳ ಒಪ್ಪಂದ ಇಲ್ಲ: ಮಹಾಂತೇಶ ಕವಟಗಿಮಠ

ಬೆಳಗಾವಿ: ಬೆಳಗಾವಿ ಲೋಕಸಭೆ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಚಿಕ್ಕೋಡಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಬೇಕೆಂದು ಯಾರೊಂದಿಗೂ ಒಳ ಒಪ್ಪಂದ ಮಾಡಿಕೊಂಡಿಲ್ಲ. ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ಶ್ರಮಿಸಿದ್ದೇವೆ. ಆದರೆ, ಬೆಳಗಾವಿಯಲ್ಲಿ ಜನ ಕೈಹಿಡಿದಿದ್ದಾರೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬೆಳಗಾವಿ ಕ್ಷೇತ್ರದಲ್ಲಿ ನಾನು ಸೇರಿದಂತೆ ಹೆಚ್ಚಿನ ನಾಯಕರು ಪ್ರಚಾರ ಕೈಗೊಂಡಿರಬಹುದು. ಆದರೆ, ಚಿಕ್ಕೋಡಿಯಲ್ಲೂ ಗೆಲುವಿಗೆ ಯತ್ನಿಸಿದ್ದೇವೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ಸೇರಿದಂತೆ ಅನೇಕ ನಾಯಕರು ಚಿಕ್ಕೋಡಿಗೆ ಬಂದು ಪ್ರಚಾರ ಮಾಡಿದ್ದಾರೆ. ಆದರೆ, ಸೋಲಿಗೆ ಕಾರಣ ಕಂಡುಕೊಳ್ಳುತ್ತೇವೆ. ತಪ್ಪುಗಳನ್ನು ಸರಿಪಡಿಸಿಕೊಂಡು ಮುನ್ನಡೆಯುತ್ತೇವೆ ಎಂದರು. ಬೆಳಗಾವಿ ಕ್ಷೇತ್ರದಲ್ಲಿ ಜಗದೀಶ ಶೆಟ್ಟರ್ ಗೆಲುವಿಗಾಗಿ ಅನೇಕ ನಾಯಕರು ಮತ್ತು ಕಾರ್ಯಕರ್ತರು ಸಂಘ ಟಿತರಾಗಿ ಕೆಲಸ ಮಾಡಿದ್ದಾರೆ. ಭಾಷೆಗಿಂತ ರಾಷ್ಟ್ರ ಮೊದಲು ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ಶಾಸಕ ಅಭಯ ಪಾಟೀಲ ನೇತೃತ್ವದಲ್ಲಿ ಬೆಳಗಾವಿ ದಕ್ಷಿಣ ಕ್ಷೇತ್ರವೊಂದರಲ್ಲೇ ಬಿಜೆಪಿಗೆ 73 ಸಾವಿರ ಮತಗಳ ಮುನ್ನಡೆ ಸಿಕ್ಕಿದೆ. ಈ ಗೆಲುವನ್ನು ಎಲ್ಲ ನಾಯಕರು ಮತ್ತು ಕಾರ್ಯಕರ್ತರ ಬಳಗಕ್ಕೆ ಅರ್ಪಿಸುತ್ತೇವೆ ಎಂದು ತಿಳಿಸಿದರು.

ಜಗದೀಶ ಶೆಟ್ಟರ್ ಅವರು ಬೆಳಗಾವಿ ಸಂಸದರು. ಅವರು ಬೆಳಗಾವಿ ನಗರದಲ್ಲೇ ವಾಸವಿದ್ದು, ಕ್ಷೇತ್ರದ ಜನರ ಸಂಕಷ್ಟಕ್ಕೆ ಸ್ಪಂದಿಸಲಿದ್ದಾರೆ. ಬೆಳಗಾವಿ ಕ್ಷೇತ್ರಕ್ಕೆ ಜಗದೀಶ ಶೆಟ್ಟರ್ ಅವರೇ ಅಭ್ಯರ್ಥಿ ಎಂದು ಘೋಷಿಸಲು ತಡವಾಯಿತು. ಇದರಿಂದಾಗಿ ಪ್ರಚಾರವೂ ವಿಳಂಬವಾಯಿತು. ಎರಡೂ ವಾರ ಮೊದಲೇ ಅಭ್ಯರ್ಥಿ ಘೋಷಿಸಿದ್ದರೆ, ಲೀಡ್ ಪ್ರಮಾಣ ಮತ್ತಷ್ಟು ಹೆಚ್ಚುತ್ತಿತ್ತು.

-ಮಹಾಂತೇಶ ಕವಟಗಿಮಠ, ವಿಧಾನ ಪರಿಷತ್ ಮಾಜಿ ಸದಸ್ಯ

ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಹೇಳಿಕೆ

ಮತಗಳನ್ನು ಗೆಲುವಾಗಿಸಲು ಸಾಧ್ಯವಾಗಿಲ್ಲ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಮತಗಳು ಬಂದಿದ್ದರೂ ಸಹ ನಾನಾ ಕಾರಣಗಳಿಂದಾಗಿ ಅದನ್ನು ಗೆಲುವಾಗಿ ಪರಿವರ್ತನೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಹೇಳಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲಾ ಪತ್ರಕರ್ತರ ಭವನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಸಿ. ಸುಧಾಕರ್, ಮಾಜಿ ಸಚಿವರು ಮತ್ತು ವಿಧಾನ ಪರಿಷತ್ ಸದಸ್ಯರಾದ ಡಾ. ಎಂ.ಆರ್. ಸೀತಾರಾಂ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಕಾಂಗ್ರೆಸ್ ಗೆ ಶೇ.3 ರಷ್ಟು ಮತಗಳು ಹೆಚ್ಚಿನ ಪ್ರಮಾಣದಲ್ಲಿ ಬಂದಿತ್ತು. ಆದರೆ ಅದನ್ನು ಗೆಲುವಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ. ತಮಗೆ 6.60 ಲಕ್ಷ ಮತಗಳು ದೊರೆತಿದ್ದು, 1.60 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿರುವ ತಮ್ಮ ಪ್ರತಿಸ್ಪರ್ಧಿ ಸುಧಾಕರ್ ಅವರಿಗೆ ಶುಭ ಕೋರುತ್ತೇನೆ. ಜನರ ನಿರೀಕ್ಷೆಯಂತೆ ಅವರು ಕೆಲಸ ಮಾಡುತ್ತಾರೆ. ಕ್ಷೇತ್ರದ ಜನರ ಧ್ವನಿಯಾಗುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಕರ್ನಾಟಕದಲ್ಲಿ 11 ಕ್ಷೇತ್ರದಲ್ಲಿ 40ಕ್ಕಿಂತ ಕಡಿಮೆ ವಯಸ್ಸಿನವರಿಗೆ ಸ್ಪರ್ಧಿಸಲು ಅವಕಾಶ ದೊರೆತ್ತಿತ್ತು. ನಾಲ್ವರು ಯುವಕರು ಗೆಲುವು ಸಾಧಿಸಿರುವುದು ಉತ್ತಮ ಬೆಳವಣಿಗೆ. ಜನಪರ ಕಾರ್ಯಕ್ರಮಗಳ ಮೂಲಕ ಚುನಾವಣೆ ಎದುರಿಸಿದೆವು. ಮನೆ ಮನೆಗಳಿಗೆ ನಮ್ಮ ಕಾರ್ಯಕ್ರಮಗಳು ತಲುಪಿವೆ. ಈ ಚುನಾ ವಣೆಯಲ್ಲಿ ಸ್ಪರ್ಧಿಸಲು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿ ಅವರು ಯುವ ಜನಾಂಗಕ್ಕೆ ಆದ್ಯತೆ ಕಲ್ಪಿಸಿದ್ದರು. ಅವರಿಗೆ ನಾನು ಆಭಾರಿಯಾಗಿದ್ದೇನೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಕೇಶವರೆಡ್ಡಿ, ಮಾಜಿ ಶಾಸಕರಾದ ಕೆ.ಪಿ. ಬಚ್ಚೇಗೌಡರು, ಅನುಸೂಯಮ್ಮ ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಮಾತನಾಡಿದರು.

ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಜನರಿಗೆ ಧನ್ಯವಾದಗಳು. ಚಿಕ್ಕಬಳ್ಳಾಪುರದಲ್ಲಿ ಕಳೆದ ಐದಾರು ವರ್ಷಗಳಿಂದ ಯುವ ಕಾಂಗ್ರೆಸ್ ಜತೆಗೂಡಿ ಕೆಲಸ ಮಾಡುತ್ತಿದ್ದೆ. ಅತಿ ಹೆಚ್ಚು ಮತಗಳನ್ನು ಪಡೆಯಲು ಪ್ರಯತ್ನಿಸಿದ್ದೇವೆ. ಮುಂಬರುವ ದಿನಗಳಲ್ಲಿ ಚಿಕ್ಕಬಳ್ಳಾಪುರದಲ್ಲಿ ಹೂವಿನ ಮಾರುಕಟ್ಟೆ ಸ್ಥಾಪಿಸುವುದು ಸೇರಿದಂತೆ ರೈತರು, ಮಹಿಳೆಯರ ಪರವಾಗಿ ಕೆಲಸ ಮಾಡುತ್ತೇವೆ.

- ರಕ್ಷಾ ರಾಮಯ್ಯ, ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಯಾವುದೇ ತನಿಖೆಗೂ ಸಿದ್ಧ: ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್

ಸಾಕ್ಷ್ಯ ನಾಶ ಆರೋಪ ನಿರಾಧಾರ : ಸಿಸಿಟಿವಿ ಪರಿಶೀಲನೆಗೆ ಆಗ್ರಹ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ನನ್ನ ಪಾತ್ರವೇನು ಇಲ್ಲ. ನನ್ನ ಕಚೇರಿಯಲ್ಲಿನ ಸಾಕ್ಷ್ಯ ನಾಶ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ತನಿಖೆ ನಡೆಸಿದರೂ ಎದುರಿಸಲು ಸಿದ್ಧ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ವಿಕಾಸಸೌಧದ ತಮ್ಮ ಕಚೇರಿಯಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮ ಮಂಡಳಿಯ ಅಧ್ಯಕ್ಷ ಬಸವರಾಜ್ ದದ್ದಲ್ ಸೇರಿದಂತೆ ಕೆಲವರೊಂದಿಗೆ ಸಭೆ ನಡೆಸಿರುವ ಸಾಕ್ಷ್ಯನಾಶ ಮಾಡಿಲ್ಲ. ಮೇ 24ರಂದು ಲೋಕಸಭಾ ಕ್ಷೇತ್ರದ ಚುನಾವಣೆ ಹಿನ್ನೆಲೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಕಚೇರಿಗೆ ಭೇಟಿ ನೀಡಿರಲಿಲ್ಲ. ಆದರೂ ತಾವು ಕಚೇರಿಯಲ್ಲಿರುವುದಾಗಿ ಆರೋಪ ಕೇಳಿಬಂದಿದೆ. ಇದಕ್ಕೂ ನನಗೂ ಸಂಬಂಧವಿಲ್ಲ. ಈ ಸಂಬಂಧ ಯಾವುದೇ ಯಾವುದೇ ತನಿಖೆ ನಡೆಸಿದರೂ ಕಾನೂನುಬದ್ಧವಾಗಿ ಎದುರಿಸಲು ಸಿದ್ಧ ಎಂದು ಹೇಳಿದರು.

ಪ್ರಾಮಾಣಿಕವಾಗಿ ಕೆಲಸ ಮಾಡಿರುವ ತೃಪ್ತಿಯಿದ್ದು, ಸುಳ್ಳು ಆರೋಪಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಷ್ಟಕ್ಕೂ ವಿಕಾಸಸೌಧದ ಕೊಠಡಿ ಸರಕಾರ ನೀಡಿರುವ ಕಚೇರಿ, ಅದು ಸ್ವಂತ ಮನೆಯಲ್ಲ. ತಾವು ಸಚಿವನಾಗಿರುವುದರಿಂದ ನೋಡಲು ರಾಜ್ಯದ ನಾನಾ ಭಾಗಗಳಿಂದ ನೂರಾರು ಜನ ಬಂದು ಹೋಗುತ್ತಾರೆ. ಬಂದುಹೋಗುವವರ ಪೂರ್ಣ ವಿವರಗಳನ್ನು ಕಲೆ ಹಾಕಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ಬಂಧಿತರನ್ನು ನೋಡಿಲ್ಲ: ಎಸ್‌ಐಟಿ ವಶದಲ್ಲಿರುವ ವ್ಯಕ್ತಿಯನ್ನು ನೋಡಿಲ್ಲ. ಅವರಿಗೂ ತಮಗೂ ಯಾವುದೇ ಸಂಬಂಧವಿಲ್ಲ. ಎಸ್‌ಐಟಿ ಅಧಿಕಾರಿಗಳ ಮುಂದೆ ಆತ ಏನು ಹೇಳಿದ್ದಾನೆ ಎಂಬುದು ಗೊತ್ತಿಲ್ಲ. ವೈದ್ಯಕೀಯ ಶಿಕ್ಷಣ ಸಚಿವರು ಎಂದು ಎಲ್ಲಾದರೂ ಹೇಳಿರುವ ಬಗ್ಗೆ ವರದಿಯಾಗಿದೆಯೇ? ಊಹಾಪೋಹಗಳಿಗೆ ತಾವೇಕೆ ಉತ್ತರ ಕೊಡಬೇಕು? ಎಸ್‌ಐಟಿ ತನಿಖೆ ನಡೆಯುತ್ತಿದ್ದು, ಬಂಧಿತ ಆರೋಪಿಗಳು ಏನು ಹೇಳಿಕೆ ಕೊಟ್ಟಿದ್ದಾರೆ ಎಂಬುದು ಗೊತ್ತಿಲ್ಲ. ಸರಕಾರಕ್ಕೂ ತಿಳಿದಿಲ್ಲ. ಅಂತೆ ಕಂತೆಗಳಿಗೆ ಉತ್ತರ ಕೊಡುವ ಅಗತ್ಯವಿಲ್ಲ ಎಂದರು.



ಪ್ರತಿಪಕ್ಷ ಬಿಜೆಪಿಯವರು ಯಾವ ಆಧಾರದಲ್ಲಿ ರಾಜೀನಾಮೆಗೆ ಆಗ್ರಹಿಸುತ್ತಿದ್ದಾರೆ ಎನ್ನುವುದು ಗೊತ್ತಿಲ್ಲ. ಪ್ರಕರಣಕ್ಕೂ ತಮಗೂ ಸಂಬಂಧವಿಲ್ಲ ಎಂದ ಮೇಲೆ ರಾಜೀನಾಮೆ ನೀಡುವ ಔಚಿತ್ಯವಾದರೂ ಏನು?

- ಡಾ. ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಅಸಾಧ್ಯಗಳ ನಡುವೆ ಸಾಧ್ಯವಾಗುವುದೇ ಬದುಕು!



ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಕೆಲ ವರ್ಷಗಳ ಹಿಂದೆ ನಾನು ದಿಲ್ಲಿಗೆ ಹೋಗುವಾಗ ವಿಮಾನ ಹಿಡಿಯುವುದು ಸಾಧ್ಯವೇ ಇರಲಿಲ್ಲ. ವಿಮಾನ ತಪ್ಪಿ ಹೋಗುವುದು ನೂರಕ್ಕೆ ನೂರು ನಿಜವಾಗಿತ್ತು. ಕಾರಣ ನಾನು ಮನೆಯಿಂದ ಹೊರಡುವುದೇ ತಡವಾಗಿತ್ತು. ಕಾರಣ ನಾನು ಎದ್ದಿದ್ದೇ ತಡವಾಗಿತ್ತು. ಕಾರಣ ನಾನು ಅಲಾರಂ ಇಟ್ಟುಕೊಂಡಿದ್ದರೂ ಮೊಬೈಲ್ ಸೈಲೆಂಟ್ ಮೋಡ್‌ನಲ್ಲಿ ಇದ್ದುದರಿಂದ ಅದು ಕೂಗಿಕೊಳ್ಳಲೇ ಇಲ್ಲ.

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಬೆಳಗ್ಗೆ ಆರು ಗಂಟೆ ಹತ್ತು ನಿಮಿಷಕ್ಕೆ ದಿಲ್ಲಿಗೆ ವಿಮಾನ ನಿಗದಿಯಾಗಿತ್ತು. ನಾನು ಐದು ಗಂಟೆ ಹತ್ತು ನಿಮಿಷಕ್ಕೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಇರಬೇಕಿತ್ತು. ಆದರೆ ನಾನು ಮನೆಯಿಂದ ಹೊರಟಿದ್ದೇ ಬೆಳಗ್ಗೆ ನಾಲ್ಕೂವರೆಗೆ. ನಲವತ್ತು ನಿಮಿಷದಲ್ಲಿ ಏರ್‌ಪೋರ್ಟ್ ತಲುಪುವುದು ಸಾಧ್ಯವೇ ಇರಲಿಲ್ಲ. ನನ್ನ ಮನೆಯಿಂದ ಅಲ್ಲಿಗೆ ಹೋಗಲು ಬೆಳಗಿನ ಜಾವದ ಸಮಯದಲ್ಲೂ ಕನಿಷ್ಠ ಒಂದೂಕಾಲು ಗಂಟೆ ಬೇಕು.

ಏನೇ ತಿಪ್ಪರಲಾಗ ಹಾಕಿದರೂ ಐದು ಮುಕ್ಕಾಲಕ್ಕಿಂತ ಮುಂಚೆ ಏರ್‌ಪೋರ್ಟ್ ತಲುಪಲು ಸಾಧ್ಯವಿರಲಿಲ್ಲ. ಅಲ್ಲದೇ ಹನುಮಂತನ ಬಾಲದಂಥ ಕ್ಯೂನಲ್ಲಿ ನಿಂತು, ಬೋರ್ಡಿಂಗ್ ಪಾಸ್ ಪಡೆಯುವ ಹೊತ್ತಿಗೆ, ಗೇಟ್ ಕ್ಲೋಸ್ ಆಗಿರುತ್ತದೆ. ಅನಂತರ ಯಾರೇ ಬಂದರೂ ಬಿಡುವುದಿಲ್ಲ. ಈ ಮಧ್ಯೆ, ತಕ್ಷಣ ಏರ್‌ಲೈನ್ಸ್ ಸಂಸ್ಥೆಗೆ ಫೋನ್ ಮಾಡಿ ಕೇಳಿದೆ. ವಿಮಾನ ಟೈಮ್‌ಗೆ ಸರಿಯಾಗಿ ಹೊರಡುವುದೆಂದು ಹೇಳಿದರು. ಕೆಲಸ ಕೆಟ್ಟಿತು, ಫ್ಲೈಟ್ ಮಿಸ್ ಆಗೋದು ಗ್ಯಾರಂಟಿ ಎಂಬುದು ನಿಚ್ಚಿತವಾಯಿತು.

ಇನ್ನು ವಿಮಾನ ನಿಲ್ದಾಣದ ತನಕ ಹೋಗಿ ಪ್ರಯೋಜನವಿಲ್ಲ ಎಂದು ನಿರ್ಧರಿಸಿದೆ. ನನ್ನ ಪತ್ನಿಯೂ 'ಸುಮ್ಮನೆ ಯಾಕೆ ಅಲ್ಲಿ ತನಕ ಹೋಗಿ ಹಿಂದೆ ಬರ್ತೀರಾ? ಫ್ಲೈಟ್ ಮಿಸ್ ಆಗೋದರಲ್ಲಿ ಅನುಮಾನವೇ ಇಲ್ಲ, ಯಾಕೆ ತೊಂದರೆ ತೆಗೆದುಕೊಳ್ತೀರಾ?' ಎಂದಳು. ಆದರೂ ಅದೃಷ್ಟ ಪರೀಕ್ಷೆ ಮಾಡೋಣ ಎಂದು ಹೊರಟೆ. ಆಶ್ಚರ್ಯ ಅಂದ್ರೆ, ನಾನು ವಿಮಾನ ಹೊರಡಲು ಇನ್ನೂ ಇಪ್ಪತ್ತು ನಿಮಿಷಗಳಿರುವಾಗಲೇ ವಿಮಾನದೊಳಗೆ ಬಂದು ಕುಳಿತು, ಪತ್ನಿಗೆ ಫೋನ್ ಮಾಡಿದರೆ ಅವಳು ನಂಬಲಿಲ್ಲ, ನಂತರ ಗಗನಸಖಿಯ ಪ್ರಕಟಣೆಯ ದನಿ ಕೇಳಿದಾಗಲೇ ಆಕೆಗೂ ಆಶ್ಚರ್ಯ.

ನಮ್ಮ ದೇಶದಲ್ಲಿ ಇರುವಂಥ ಅವ್ಯವಸ್ಥೆ, ಅಸ್ತವ್ಯಸ್ತತೆ (chaos) ಬೇರೆಲ್ಲೂ ಇರಲಿಕ್ಕಿಲ್ಲ. ಆದರೂ ಎಲ್ಲವೂ ಸುಸೂತ್ರವಾಗುತ್ತದೆ ಎಂಬುದು ನನಗೆ ನೂರಾರು ಸಲ ಅನುಭವಕ್ಕೆ ಬಂದಿದೆ. ಈ ಘಟನೆಯಲ್ಲಿ ವ್ಯವಸ್ಥೆಯದೇನೂ ತಪ್ಪಿಲ್ಲ, ಪ್ರಮಾದವಾಗಿದ್ದು ನನ್ನಿಂದ. ನಾನು ಸಮಯಕ್ಕೆ ಸರಿಯಾಗಿ ಅಥವಾ ಮುಂಚಿತವಾಗಿ ಹೋಗಿದ್ದಿದ್ದರೆ ಇಷ್ಟೆಲ್ಲಾ ಗಂಡಾಗುಂಡಿ ಮಾಡಬೇಕಾದ ಅಗತ್ಯವಿರಲಿಲ್ಲ. ಈ ರೀತಿಯ ಅನುಭವ ನಿಮಗೂ ಆಗಿರಬಹುದು. ಕೊನೆ ಕ್ಷಣದಲ್ಲಿ ಪವಾಡ ಸದೃಶ ಎಂಬಂತೆ ಕಾರ್ಯಸಿದ್ಧಿಯಾಗಿರಬಹುದು.

ಆದರೂ ಈ ರಸ್ತೆ, ಗುಂಡಿ, ಮಳೆ, ಟ್ರಾಫಿಕ್ ಜಾಮ್, ಜನಜಂಗುಳಿ ಮಧ್ಯದಲ್ಲಿಯೂ ನಮ್ಮ ಬದುಕು ಹೇಗೆ ನಡೆಯಬೇಕೋ ಹಾಗೆ ನಡೆಯುತ್ತಿರುತ್ತದೆ. ಇದನ್ನು perfect anarchy ಅಂತ ಕರೆಯುತ್ತಾರೆ. ಮುಂಬೈನ ಧಾರಾವಿಯ ಕೊಳೆಗೇರಿಯನ್ನು ನೋಡಿದ ವಿದೇಶಿ ವರದಿಗಾರನೊಬ್ಬ ಇಲ್ಲಿ ಲಕ್ಷಾಂತರ ಜನ ಜೀವಿಸುತ್ತಿರುವುದೇ ಒಂದು ಸೋಜಿಗ ಎಂದು ಹೇಳಿದ. ಆದರೆ ಅಲ್ಲಿ ವಾಸಿಸುವ ಜನರಿಗೆ ಅದು ಸಹಜ. ಅವರು ಹುಟ್ಟಿ, ಬೆಳೆದಿದ್ದೇ ಅಲ್ಲಿ. ಅವರಿಗೆ ಅದು ಸಮಸ್ಯೆಯೇ ಅಲ್ಲ. ಭಾರತದ ಜನಸಂಖ್ಯೆ, ಇಲ್ಲಿನ ಟ್ರಾಫಿಕ್, ಜನಜೀವನ ನೋಡಿದ ಅಮೆರಿಕನ್ನರಿಗೆ ಈ ಜನ ಹೇಗೆ ಜೀವಿಸುತ್ತಿರಬಹುದು ಎಂದು ಸೋಜಿಗವಾಗಬಹುದು. ಆದರೆ ನಮಗೆ ಅದು ಸೋಜಿಗವಲ್ಲ, ಸಹಜ. ಎಲ್ಲಾ ಅಸಾಧ್ಯಗಳ ನಡುವೆಯೂ ಬದುಕು ಸಾಧ್ಯವಾಗುತ್ತಾ ಹೋಗುತ್ತದೆ.

ಹತ್ತಿ ಚೀಲ ಪೂರ್ತಿ ತುಂಬಿದರೂ, ಇನ್ನೂ ಸ್ವಲ್ಪ ಹತ್ತಿಯನ್ನು ತುರುಕಲು ಜಾಗವಿರುತ್ತದೆ. ಹಾಗೆಯೇ ಎಷ್ಟೇ ಟ್ರಾಫಿಕ್ ಜಾಮ್ ಆದರೂ ನಮ್ಮ ನಮ್ಮ ವಾಹನ ಹೋಗಲು ಸ್ವಲ್ಪ ಜಾಗ ಇದ್ದೇ ಇರುತ್ತದೆ. ಮುಂಬೈ ಲೋಕಲ್ ಟ್ರೈನ್ ಜನರಿಂದ ತುಂಬಿ ತುಳುಕುತ್ತಿದ್ದರೂ ಒಬ್ಬನಿಗೆ ಮೊಳಕೈ ಆಡಿಸಲು ಜಾಗ ಸಿಕ್ಕರೆ ನಾಲ್ಕು ಜನ ಹತ್ತಿಕೊಳ್ಳುವಂತೆ, ನಮ್ಮ ವ್ಯವಸ್ಥೆ ಎಲ್ಲ ಪರಿಧಿಯನ್ನು ದಾಟಿಯೂ ಪುನಃ ಸಹಜ ಸ್ಥಿತಿಗೆ ಬಂದಿರುತ್ತದೆ.

ಈ ವ್ಯವಸ್ಥೆಗೆ ಎಲ್ಲ ಅವ್ಯವಸ್ಥೆಗಳನ್ನು ಹೊಟ್ಟೆಯೊಳಗೆ ತುಂಬಿಕೊಳ್ಳುವ, ಹೀರಿಕೊಳ್ಳುವ, ಎಲ್ಲವನ್ನೂ ಮಟ್ಟಸವಾಗಿಸುವ ಒಂದು ಅಗಾಧ ಶಕ್ತಿಯಿರುವುದು ಮಾತ್ರ ಸುಳ್ಳಲ್ಲ. ಆ ಶಕ್ತಿಯೇ ಈ ವ್ಯವಸ್ಥೆಯನ್ನು ನಡೆಸುತ್ತಿರುವುದು. ಇಲ್ಲದಿದ್ದರೆ ನನಗೆ ಅಂದು ಫ್ಲೈಟ್ ಮಿಸ್ ಆಗುತ್ತಿತ್ತು. ಈ ಎಲ್ಲ ಅಪಸವ್ಯಗಳ ನಡುವೆಯೇ ನಮ್ಮ ಬದುಕು ಹಸನುಗೊಳ್ಳುತ್ತಿದೆ, ಬದುಕು ಸಾಗುತ್ತಿದೆ. ಅದೇ ಅದ್ಭುತ. ಇಷ್ಟೊಂದು ಜಾತಿ, ಪಂಗಡ, ಕೋಮು, ಧರ್ಮ, ಭಾಷೆ, ವೈರುಧ್ಯ, ಜನಸಂಖ್ಯೆ ಸಮಸ್ಯೆ.. ಇವೆಲ್ಲವುಗಳ ಮಧ್ಯೆಯೇ ಭಾರತ ಇಂದು ವಿಶ್ವದ ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತಿರುವುದು ಸಣ್ಣ ಮಾತಲ್ಲ. ನೂರಾ ಮೂವತ್ತು ಕೋಟಿ ಜನ ಒಂದೆಡೆ ಶಾಂತಿ, ಸಹಬಾಳ್ವೆಯಿಂದ ಜೀವಿಸುತ್ತಿರುವುದೇ ಒಂದು ಅಚ್ಚರಿ ಅಲ್ಲವೇ?



ಮೊದಲ ಚುನಾವಣೆಯಲ್ಲಿ ಅಟಲ್ ಖರ್ಚು ಮಾಡಿದ್ದು 8500 ರು.!

ಅನೇಕರಿಗೆ ಗೊತ್ತಿಲ್ಲ, ವಾಜಪೇಯಿ ಅವರು ದಿಲ್ಲಿಗೆ ಹೋಗಿದ್ದು ರಾಜಕಾರಣಿಯಾಗಿ ಅಲ್ಲ, ಜನಸಂಘದ ಕಾರ್ಯಕರ್ತರಾಗಿಯೂ ಅಲ್ಲ. ಅವರು ಅಲ್ಲಿಗೆ ಹೋಗಿದ್ದು ಪತ್ರಕರ್ತರಾಗಿ. ಆದರೆ ದೇಶದ ಪ್ರಧಾನಿಯಾಗುವ ಹಂತವನ್ನು ತಲುಪಿದ್ದು ಅವರ ಧೀಮಂತಿಕೆಗೆ ಹಿಡಿದ ಕೈಗನ್ನಡಿ. 1951ರಲ್ಲಿ ವಾಜಪೇಯಿ ಅವರು 'ವೀರ ಅರ್ಜುನ' ಪತ್ರಿಕೆ ಸಂಪಾದಕರಾಗಿ ನಿಯುಕ್ತಗೊಂಡರು. ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಮೊದಲ ಬಾರಿಗೆ ಭೇಟಿಯಾದ ಅಟಲ್‌ಜೀ ಅವರಲ್ಲಿ ಅದೇನೋ ವೈಶಿಷ್ಟ್ಯ ಗುರುತಿಸಿದರು. ಪತ್ರಿಕೆಗಿಂತ ರಾಜಕಾರಣಕ್ಕೆ ಸೂಕ್ತ ವ್ಯಕ್ತಿಯೆಂದು ಅವರನ್ನು ಜನಸಂಘದ ಕೆಲಸಕ್ಕೆ ಹಚ್ಚಿದರು. ಎರಡು ವರ್ಷಗಳ ಕಾಲ ಸಂಪಾದಕರಾಗಿ ಕೆಲಸ ಮಾಡಿದ ಅಟಲ್‌ಜೀ, ಆರಂಭದಲ್ಲಿ ಡಾ.ಮುಖರ್ಜಿ ಅವರ ಸಹಾಯಕರಾದರು. ನಂತರ ಅವರಿಗೆ ಕಾರ್ಯದರ್ಶಿ ಜವಾಬ್ದಾರಿ ನೀಡಲಾಯಿತು.

ಡಾ.ಮುಖರ್ಜಿ ನಿಧನದ ನಂತರ, ಅಟಲ್‌ಜೀ ಜನಸಂಘದ ಸಕ್ರಿಯ ನಾಯಕರಾಗಿ ಕೆಲಸ ಮಾಡಲಾರಂಭಿಸಿದರು. ನಂತರ 1957ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಲಖನೌ, ಮಥುರಾ ಹಾಗೂ ಬಲರಾಮಪುರದಿಂದ ಸ್ಪರ್ಧಿಸಿದರು. ಮೊದಲ ಎರಡು ಕ್ಷೇತ್ರಗಳಲ್ಲಿ ಸೋತು ಮೂರನೇ ಕ್ಷೇತ್ರದಲ್ಲಿ ಜಯ ಗಳಿಸಿದರು. ಬಲರಾಮಪುರದಿಂದ ಸ್ಪರ್ಧಿಸಬೇಕೆಂದು ನಿರ್ಧರಿಸಿ, ನಾಮಪತ್ರ ಸಲ್ಲಿಸಲು ಹೋದಾಗ, ಆ ಊರನ್ನು ಅವರು ಅದಕ್ಕಿಂತ ಮೊದಲು ನೋಡಿರಲಿಲ್ಲ. ಇಡೀ ಕ್ಷೇತ್ರದ ಒಂದು ಊರಿನ ಪರಿಚಯವೂ ಇರಲಿಲ್ಲ. ಜನಸಂಘ ಹಾಗೂ ಆರೆಸ್ಸೆಸ್‌ನ ಮೂರ್‍ನಾಲ್ಕು ಕಾರ್ಯಕರ್ತರ ಹೊರತಾಗಿ ಬೇರೆಯವರ ಸಂಪರ್ಕವೂ ಇರಲಿಲ್ಲ. ಅಟಲ್‌ಜೀ ಹತ್ತಿರ ಹಣವೂ ಇರಲಿಲ್ಲ. ಜನಸಂಘ ಎಂಬ ಪಕ್ಷವಿದೆ, ಅದರ ಸಿದ್ಧಾಂತ ಇವು.. ಎಂಬುದನ್ನು ಜನರಿಗೆ ಪ್ರಚುರಪಡಿಸುವುದಕ್ಕಾಗಿ ಮಾತ್ರ ಅವರು ಚುನಾವಣೆಗೆ ಸ್ಪರ್ಧಿಸಿದ್ದರು. ಎಲ್ಲ ಮೂರು ಕ್ಷೇತ್ರಗಳಲ್ಲಿ ಠೇವಣಿ ಉಳಿಸಿಕೊಳ್ಳುವುದು ಕಷ್ಟ ಎಂಬುದು ಅವರಿಗೆ ಗೊತ್ತಿತ್ತು. ಗೆಲ್ಲುವ ಯಾವ ಲಕ್ಷಣವೂ ಇರಲಿಲ್ಲ.

ಬಲರಾಮಪುರಕ್ಕೆ ಮೊದಲ ಬಾರಿಗೆ ಆಗಮಿಸಿದಾಗ, ಅವರನ್ನು ಸ್ವಾಗತಿಸಲು ಐವತ್ತು ಜನರೂ ಇರಲಿಲ್ಲ. ಆದರೂ ಅವರು ಬೇಸರಿಸಿಕೊಳ್ಳಲಿಲ್ಲ. ಬಲರಾಮಪುರದ ಜತೆಗೆ ಇನ್ನಿತರ ಎರಡು (ಲಖನೌ ಹಾಗೂ ಮಥುರಾ) ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರಿಂದ, ವಾಜಪೇಯಿ ಅಲ್ಲಿಗೂ ಹೋಗಬೇಕಾಗುತ್ತಿತ್ತು. ಹೀಗಾಗಿ ಹೆಚ್ಚಿನ ಸಮಯವನ್ನು ಬಲರಾಮಪುರಕ್ಕೆಂದು ಕೊಡಲು ಆಗುತ್ತಿರಲಿಲ್ಲ.

ನಾಮಪತ್ರ ಸಲ್ಲಿಸಿದ ದಿನ ವಾಜಪೇಯಿ ಎರಡು ಭಾಷಣ ಮಾಡಿದರು. ಅವರ ಮಾತುಗಳನ್ನು ಕೇಳಿದ ಅಲ್ಲಿನ ಮತದಾರರು ಮಂತ್ರಮುಗ್ಧರಾದರು. ಈ ಭಾಷಣಗಳು ಕಾಳ್ಗಿಚ್ಚಿನಂತೆ ಕ್ಷೇತ್ರದಲ್ಲಿ ಪ್ರಚಾರವಾದವು. ಅದಾದ ಬಳಿಕ ಬಲರಾಮಪುರದಲ್ಲಿ ಅವರು ಭಾಷಣ ಮಾಡಿದ್ದು ಐದಾರು ಬಾರಿ ಅಷ್ಟೆ. ಆದರೆ ಅಷ್ಟೊತ್ತಿಗೆ ವಾಜಪೇಯಿ ಅವರು ಅದ್ಭುತ ಮಾತುಗಾರರೆಂಬ ಸುದ್ದಿ ಕ್ಷೇತ್ರದಲ್ಲಿ ವ್ಯಾಪಕ ಪ್ರಚಾರ ಪಡೆದಿತು.

ವಾಜಪೇಯಿ ಅವರು ಬಲರಾಮಪುರದಲ್ಲಿ ಖರ್ಚು ಮಾಡಿದ್ದು ಹನ್ನೊಂದು ಸಾವಿರ ರುಪಾಯಿ ಮಾತ್ರ! ಅದೂ ಅವರ ಸ್ವಂತ ಹಣವಲ್ಲ. ಎಲ್ಲವನ್ನೂ ಜನಸಂಘದ ಕಾರ್ಯಕರ್ತರು ಸಂಗ್ರಹಿಸಿದ್ದು. ಚುನಾವಣೆ ಮುಗಿದ ನಂತರ ಸಂಗ್ರಹಿಸಿದ್ದರಲ್ಲಿ ಎರಡೂವರೆ ಸಾವಿರ ರುಪಾಯಿ ಉಳಿದಿತ್ತಂತೆ. ವಾಜಪೇಯಿ ಲಖನೌ ಹಾಗೂ ಮಥುರಾದಲ್ಲಿ ದಯನೀಯವಾಗಿ ಪರಾಭವಗೊಂಡರು. ಆದರೆ ಆಶ್ಚರ್ಯಕರ ರೀತಿಯಲ್ಲಿ ಬಲರಾಮಪುರದಲ್ಲಿ ಗೆದ್ದರು. ಆ ಚುನಾವಣೆಯಲ್ಲಿ ಜನಸಂಘದ ನಾಲ್ವರು ಗೆದ್ದಿದ್ದರು. ಗುರುತು, ಪರಿಚಯ, ಸಂಪರ್ಕ ಏನೂ ಇಲ್ಲದ ಕ್ಷೇತ್ರದಿಂದ ಅಟಲ್‌ಜೀ ಮೊದಲ ಬಾರಿಗೆ ಸ್ಪರ್ಧಿಸಿ ಗೆದ್ದಿದ್ದರು.

ವಿಚಿತ್ರ ಅಂದರೆ 1962ರಲ್ಲಿ ನಡೆದ ಚುನಾವಣೆಯಲ್ಲಿ ಅಟಲ್‌ಜೀ ಬಲರಾಮಪುರದಿಂದ ಸೋತುಹೋದರು. ಆದರೆ 1967ರಲ್ಲಿ ಪುನಃ ಅಟಲ್‌ಜೀ ಆರಿಸಿ ಬಂದರು. ಈ ಕ್ಷೇತ್ರದಲ್ಲಿ ನಾನಾಜೀ ದೇಶಮುಖ್ ಸಹ (1977ರಲ್ಲಿ) ಜನತಾಪಕ್ಷದಿಂದ ಸ್ಪರ್ಧಿಸಿ ಗೆದ್ದಿದ್ದರು. ಆಗ ವಾಜಪೇಯಿ ಅವರೇ ಪ್ರಮುಖ ಪ್ರಚಾರ ರೂವಾರಿ!

ನಿಮ್ಮನ್ನು ಗಮನಿಸುವವರು ಇದ್ದಾರೆ!

ಅದೊಂದು ರಾತ್ರಿ ಅಮೆರಿಕದ ಫಿಲಿಡೆಲ್ಫಿಯಾ ನಗರದಲ್ಲಿ ನಡೆದ ಪುಟ್ಟ ಘಟನೆಯಿದು. ಸುಮಾರು ಅರವತ್ತೈದು-ಎಪ್ಪತ್ತು ವರ್ಷದ ವೃದ್ಧ ತನ್ನ ಹೆಂಡತಿಯೊಂದಿಗೆ ಹೋಟೆಲ್‌ಗೆ ಬಂದ. 'ನಾನು ಈ ರಾತ್ರಿ ಈ ಹೋಟೆಲ್‌ನಲ್ಲಿ ತಂಗಬೇಕೆಂದಿದ್ದೇನೆ, ರೂಮ್ ಇದೆಯಾ?' ಎಂದು ಕೇಳಿದ. ರಿಸೆಪ್ಷನ್‌ನಲ್ಲಿ ಇದ್ದವ, 'ಇಲ್ಲ, ಎಲ್ಲ ರೂಮುಗಳು ಭರ್ತಿಯಾಗಿವೆ. ನಗರದಲ್ಲಿ ಮೂರು ಸಮಾವೇಶಗಳು ನಡೆಯುತ್ತಿವೆ. ಯಾವ ಹೋಟೆಲ್‌ಗಳಲ್ಲೂ ರೂಮುಗಳಿರುವ ಸಾಧ್ಯತೆಯಿಲ್ಲ' ಎಂದ.

ಅಷ್ಟೊತ್ತಿಗೆ ಮಧ್ಯರಾತ್ರಿ ಹನ್ನೆರಡೂವರೆ. ಆ ವೃದ್ಧ ದಂಪತಿಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಅಲ್ಲಿಗೆ ಬರುವ ಮುನ್ನ ಏಳೆಂಟು ಹೋಟೆಲ್‌ಗಳಿಗೆ ಹೋಗಿಬಂದಿದ್ದರು. ಕೊನೆ ಪ್ರಯತ್ನವಾಗಿ ಆ ಹೋಟೆಲ್‌ಗೆ ಬಂದಿದ್ದರು. ಬೇರೆ ದಾರಿ ಕಾಣದೇ ಆ ದಂಪತಿ ಆ ಹೋಟೆಲ್‌ನಿಂದ ಖಿನ್ನಮನಸ್ಕರಾಗಿ ಹೊರಡುವ ಮುನ್ನ, ರಿಸೆಪ್ಷನ್‌ನಲ್ಲಿ ಇದ್ದವ, 'ಸರ್, ನೀವು ತಪ್ಪು ಭಾವಿಸುವುದಿಲ್ಲ ಅಂದ್ರೆ ಒಂದು ಮಾತನ್ನು ಹೇಳ್ತೇನೆ. ಈ ನಡುರಾತ್ರಿಯಲ್ಲಿ ನೀವು ಎಲ್ಲಿಗೆ ಹೋಗುತ್ತೀರಾ? ದಯವಿಟ್ಟು ಹೋಟೆಲ್ ಬೇಸ್‌ಮೆಂಟ್‌ನಲ್ಲಿ ನನ್ನ ಪುಟ್ಟ ರೂಮಿದೆ. ಅಲ್ಲಿ ನೀವಿಬ್ಬರೂ ಮಲಗಬಹುದು' ಎಂದ. ಬೇರೆ ದಾರಿಯಿರಲಿಲ್ಲ. ಆ ದಂಪತಿ ಅವನ ಕೋಣೆಯಲ್ಲೇ ಮಲಗಿದರು.

ಮರುದಿನ ಆ ಹೋಟೆಲ್‌ನಿಂದ ಹೊರಡುವ ಮುನ್ನ, ಆ ವೃದ್ಧ ಹೇಳಿದ- 'ನನ್ನ ಜೀವನದಲ್ಲಿ ನಾನು ಅವೆಷ್ಟೋ ಹೋಟೆಲ್‌ಗಳಿಗೆ ಹೋಗಿದ್ದೇನೆ. ಆದರೆ ಯಾರೂ ನಿನ್ನ ಹಾಗೆ ಅತಿಥಿ ಸತ್ಕಾರ ಮಾಡಿದ್ದನ್ನು ನೋಡಿಲ್ಲ. ನನ್ನ ಹೋಟೆಲ್‌ಗೆ ನಿನ್ನಂಥ ಮ್ಯಾನೇಜರ್‌ನೇ ಬೇಕು. ನೋಡೋಣ, ಮುಂದೊಂದು ದಿನ ನಾನೇನಾದರೂ ಪಂಚತಾರಾ ಹೋಟೆಲ್ ಅನ್ನು ಕಟ್ಟಿದರೆ, ನಿನ್ನನ್ನೇ ಮ್ಯಾನೇಜರ್ ನನ್ನಾಗಿ ನೇಮಿಸುತ್ತೇನೆ'.

ರಿಸೆಪ್ಷನ್‌ನಲ್ಲಿದ್ದ ವ್ಯಕ್ತಿ ವೃದ್ಧ ದಂಪತಿಯನ್ನು ಪಾದದಿಂದ ನೆತ್ತಿಯವರೆಗೊಮ್ಮೆ ನೋಡಿ ಸುಮ್ಮನೆ ನಕ್ಕ. ಈ ಘಟನೆ ನಡೆದು ಎರಡು-ಮೂರು ವರ್ಷಗಳಾಗಿರಬಹುದು. ರಿಸೆಪ್ಷನ್‌ನಲ್ಲಿದ್ದ ವ್ಯಕ್ತಿ ಇದನ್ನು ಸಂಪೂರ್ಣ ಮರೆತುಬಿಟ್ಟಿದ್ದ. ಒಂದು ದಿನ ಅವನಿಗೊಂದು ಪತ್ರ ಬಂತು. ಅದು ಆ ವೃದ್ಧ ಬರೆದುದಾಗಿತ್ತು. ನಡುರಾತ್ರಿ ನಡೆದ ಘಟನೆಯನ್ನು ಪ್ರಸ್ತಾಪಿಸಿದ್ದ. ಜತೆಯಲ್ಲಿ ನ್ಯೂಯಾರ್ಕ್‌ಗೆ ರೌಂಡ್‌ಟ್ರಿಪ್ ವಿಮಾನ ಟಿಕೆಟ್ ಅನ್ನು ಇರಿಸಿದ್ದ. ನ್ಯೂಯಾರ್ಕಿಗೊಮ್ಮೆ ಬರುವಂತೆ ವಿನಂತಿಸಿಕೊಂಡಿದ್ದ.

ವೃದ್ಧನ ಕೋರಿಕೆಯಂತೆ ಈತ ನ್ಯೂಯಾರ್ಕ್‌ಗೆ ಹೋದ. ಅಲ್ಲಿನ 34ನೇ ಸ್ಟ್ರೀಟ್‌ನಲ್ಲಿರುವ ಫಿಫ್ತ್ ಅವೆನ್ಯೂನ ಒಂದು ಮೂಲೆಯಲ್ಲಿ ವಿಸ್ತರಿಸಿಕೊಂಡ ಹೊಸ, ಭವ್ಯ ಪಂಚತಾರಾ ಹೋಟೆಲ್‌ನತ್ತ ಅವನನ್ನು ವೃದ್ಧ ಕರೆದುಕೊಂಡ ಹೋದ. 'ಇದು ನಾನು ಕಟ್ಟಿಸಿರುವ ಹೋಟೆಲ್. ಈ ಹೋಟೆಲ್‌ನ ಮ್ಯಾನೇಜರ್ ನೀನೇ ಆಗಬೇಕೆಂಬ ಕಾರಣಕ್ಕೆ ಇದನ್ನು ನಿರ್ಮಿಸಿದ್ದೇನೆ' ಎಂದ ಆ ವೃದ್ಧ. ಈತನಿಗೆ ನಂಬಲು ಸಾಧ್ಯವಾಗಲೇ ಇಲ್ಲ. ಅದು ನಿಜವೆಂದು ಅರಿವಾಗುವ ಹೊತ್ತಿಗೆ ಬಹಳ ಸಮಯ ಹಿಡಿದಿತ್ತು. ಆ ಹೋಟೆಲ್ ಅನ್ನು ನಿರ್ಮಿಸಿದ ಆ ವೃದ್ಧನ ಹೆಸರು ವಿಲಿಯಮ್ ವಾಲ್ಡಾರ್ಫ್ ಎಸ್ಟೋರ್. ಹೋಟೆಲ್ ಹೆಸರು ವಾಲ್ಡಾರ್ಫ್ ಎಸ್ಟೋರಿಯ ಹಾಗೂ ಆ ಹೋಟೆಲ್‌ನ ಮ್ಯಾನೇಜರ್ ಹೆಸರು ಜಾರ್ಜ್ ಸಿ. ಬೋಲ್ಟ್. ನಮ್ಮ ನಡತೆ, ಹಾವಭಾವ, ಮಾತುಗಳನ್ನು ಒಬ್ಬರಲ್ಲ ಒಬ್ಬರು ಗಮನಿಸುತ್ತಲೇ ಇರುತ್ತಾರೆಂಬುದಕ್ಕೆ ಇದೇ ನಿದರ್ಶನ.

ಅರ್ಥವಾಗದ ಸಂಗತಿಗಳು

ಇತ್ತೀಚೆಗೆ ಸ್ಕೂಲ್‌ನಲ್ಲಿ ಟೀಚರ್ 'ನನಗೆ ಅರ್ಥವಾಗದ ಸಂಗತಿಗಳು' ಎಂಬ ವಿಷಯದ ಮೇಲೆ ಕಿರು ಪ್ರಬಂಧ ಬರೆಯಲು ಹೇಳಿದರಂತೆ. ಹತ್ತು ವರ್ಷದ ಬಾಲಕಿಯೊಬ್ಬಳು ಬರೆದ ಕಿರು ಪ್ರಬಂಧ ಹೀಗಿದೆ:

'ಟೀಚರ್, ನೀವು ನಮಗೆ ಹೇಳಿಕೊಟ್ಟಿದ್ದೀರಿ, ಬೇರೆಯವರನ್ನು ನೋಯಿಸಬಾರದೆಂದು. ಆದರೆ ಈ ಮಾತು ಪ್ರಾಣಿಗಳಿಗೇಕೆ ಅನ್ವಯಿಸುವುದಿಲ್ಲ? ಮನುಷ್ಯನೇಕೆ ಪ್ರಾಣಿಗಳಿಗೆ ಹಿಂಸೆ ಕೊಡುತ್ತಾನೆ?'. 'ಟೀಚರ್, ನೀವು ಹೇಳಿಕೊಟ್ಟಿದ್ದೀರಿ ಮರ್ಡರ್ ಮಾಡುವುದು ಪಾಪ ಎಂದು, ಆದರೆ ಆ ನಿಯಮ ಮನುಷ್ಯರಿಗೆ ಮಾತ್ರ ಅನ್ವಯಿಸುವುದಿಲ್ಲ, ಏಕೆ?'. 'ಟೀಚರ್, ನೀವು ಹೇಳಿಕೊಟ್ಟಿದ್ದೀರಿ ಸೀರಿಯಲ್ ಕಿಲ್ಲರ್ಸ್ ಇದ್ದಾರಲ್ಲ, ಅವರು ಕೆಟ್ಟವರು ಎಂದು. ಆದರೆ ಪ್ರಾಣಿಗಳನ್ನೇಕೆ ಅದೇ ರೀತಿ ಬೇಟೆಯಾಡಿ (Hunting) ಕೊಲ್ಲುತ್ತಾರೆ?'. 'ಟೀಚರ್, ನೀವು ಹೇಳಿಕೊಟ್ಟಿದ್ದೀರಿ ಮನುಷ್ಯರನ್ನು ಜೈಲಿನಲ್ಲಿ ಇಟ್ಟರೆ ಅದು ಶಿಕ್ಷೆ ಅಂತ. ಆದರೆ ಮೈಸೂರಿನ ಮೃಗಾಲಯ (zoo)ದಲ್ಲಿ ಪ್ರಾಣಿಗಳನ್ನಿಟ್ಟು ಮನುಷ್ಯನೇಕೆ ಆನಂದಿಸುವುದು?' ನನಗೆ ಅರ್ಥವಾಗದ ಸಂಗತಿಗಳೆಂದರೆ ಇವು.

ದೀರ್ಘಾವಧಿ ರಾಜ್ಯಪಾಲರು

ಟಿ-20 ಫೈನಲ್ ಪಂದ್ಯದಲ್ಲಿ ಅಂಪೈರ್ ಆಗುವುದು ಹಾಗೂ ರಾಜ್ಯಪಾಲರಾಗುವುದು ಎರಡೂ ಒಂದೇ. ಜನರಿಂದ ಬೈಯಿಸಿಕೊಳ್ಳದೇ ಡ್ಯೂಟಿ ಮಾಡಲು ಆಗುವುದಿಲ್ಲ. ಅದರಲ್ಲೂ ರಾಜ್ಯಪಾಲರ ಹುದ್ದೆಯಿದೆಯಲ್ಲ, ಅಲ್ಲಿ ಯಾರೇ ಬಂದರೂ ವಿವಾದವಿಲ್ಲದೇ ಹೋಗುವುದಿಲ್ಲ. ರಾಜ್ಯಪಾಲರು ಸಂವಿಧಾನ ಬಿಟ್ಟು ಬೇರೆ ಯಾರಿಗೂ ಉತ್ತರದಾಯಿಗಳಲ್ಲ. ರಾಜಭವನವೇ ಅವರ ಆಡುಂಬೊಲ. ವಿಶಾಲ ಅರ್ಥದಲ್ಲಿ, ಎಷ್ಟೇ ಆದರೂ ಅವರು ಕೇಂದ್ರ ಸರಕಾರದ ಏಜೆಂಟ್.

ರಾಜ್ಯಪಾಲರಾದವರು ಐದು ವರ್ಷಗಳ ಒಂದು ಅವಧಿ ಮುಗಿಸುವುದೆಂದರೆ ದೊಡ್ಡ ಮಾತೇ. ಯಾರನ್ನೂ ಎರಡನೇ ಅವಧಿಗೆ ಮುಂದುವರಿಸುವುದು ವಿರಳಾತಿವಿರಳ. ಪಂಜಾಬಿನ ಮುಖ್ಯಮಂತ್ರಿಯಾಗಿದ್ದ ಸುರ್ಜಿತ್ ಸಿಂಗ್ ಬರ್ನಾಲ ಅವರು ನಂತರ ಉತ್ತರಖಂಡ, ಆಂಧ್ರಪ್ರದೇಶ, ತಮಿಳುನಾಡಿನ ರಾಜ್ಯಪಾಲರಾಗಿದ್ದರು. ಮೂರು ಸಲ ತಮಿಳುನಾಡಿನ ರಾಜ್ಯಪಾಲರಾಗಿದ್ದ ಅಗ್ಗಳಿಕೆ ಅವರದು. ಅಖ್ಲಕರ್ ರೆಹಮಾನ್ ಕಿದ್ವಾಯಿ 1979ರಿಂದ 2009ರವರೆಗೆ ಒಂದಿಲ್ಲೊಂದು ರಾಜ್ಯದ ರಾಜ್ಯಪಾಲರಾಗಿದ್ದರು. ರಾಜ್ಯಪಾಲರಾಗಿಲ್ಲದ ಅವಧಿಯಲ್ಲಿ ರಾಜ್ಯಸಭಾ ಸದಸ್ಯರಾಗಿದ್ದರು. ಅವರು ಬಿಹಾರ, ಪಶ್ಚಿಮ ಬಂಗಾಳ, ರಾಜಸ್ಥಾನ, ಹರಿಯಾಣ ರಾಜ್ಯಪಾಲರಾಗಿದ್ದರು.

ಶಾರ್ದೂಲವಿಕ್ರೀಡಿತ ಛಂದ-ಚಂದದ ಆಧುನಿಕ ಪದ್ಯಗಳು

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

'ಅತ್ತುಂ ವಾಂಛತಿ ವಾಹನಂ ಗಣಪತೇರಾಖುಂ ಕ್ಷುಧಾರ್ತಃ ಫಣೀ। ತಂ ಚ ಕ್ರೌಂಚಪತೇಃ ಶಿಖೀ ಚ ಗಿರಿಜಾ ಸಿಂಹೋಽಪಿ ನಾಗಾನನಮ್। ಗೌರೀ ಜಹ್ನುಸುತಾಮಸೂಯತಿ ಕಲಾನಾಥಂ ಕಪಾಲಾನಲೋ। ನಿರ್ವಿಣ್ಣಃ ಸ ಪಪೌ ಕುಟುಂಬಕಲಹಾದೀಶೋಽಪಿ ಹಾಲಾಹಲಮ್॥' ಇದೊಂದು ತಮಾಷೆಯ ಸುಭಾಷಿತ, ಅಥವಾ ಚಾಟು ಶ್ಲೋಕ. ಶಿವನು ವಿಷಪಾನ ಮಾಡಿದ್ದಕ್ಕೆ ಕಾರಣವೇನು ಎಂದು ಒಬ್ಬ ಕವಿಯ ಕಲ್ಪನೆ. ಸಂಸಾರದ ಒಳಜಗಳದಿಂದ ಬೇಸರವಾಗಿದ್ದೇ ಶಿವನ ನಿರ್ಧಾರಕ್ಕೆ ಕಾರಣವಂತೆ. ಹೇಗಿತ್ತು ಒಳಜಗಳ? ಶಿವನ ಕೊರಳಲ್ಲಿರುವ ಹಾವು ಗಣಪತಿಯ ವಾಹನವಾದ ಇಲಿಯನ್ನು ತಿನ್ನಲು ಹವಣಿಸುತ್ತಿದೆ. ಶಿವನ ಮತ್ತೊಬ್ಬ ಮಗ ಷಣ್ಮುಖನ ವಾಹನವಾದ ನವಿಲು, ಶಿವನ ಕೊರಳಲ್ಲಿರುವ ಸರ್ಪವನ್ನು ತಿನ್ನಲಿಕ್ಕೆ ಹೊಂಚುಹಾಕುತ್ತಿದೆ. ಪಾರ್ವತಿಯ ವಾಹನ ಸಿಂಹ, ಆನೆಯ ಬದ್ಧವೈರಿ. ಅದು ಗಜಮುಖನನ್ನೇ ತಿನ್ನಲು ಯತ್ನಿಸುತ್ತಿದೆ. ಶಿವನ ತೊಡೆಮೇಲೆ ಕೂತಿರುವ ಗೌರಿಯು ಶಿವನ ತಲೆಮೇಲೆ ಕುಳಿತಿರುವ ಗಂಗೆಯನ್ನು ಮತ್ಸರದಿಂದ ನೋಡುತ್ತಿರುತ್ತಾಳೆ. ಗಂಗೆಗೂ ಗೌರಿಯ ಮೇಲೆ ಸವತಿಮಾತ್ಸರ್ಯ. ಶಿವನ ಕೈಯಲ್ಲಿರುವ ಕಪಾಲದಲ್ಲಿ ಉರಿಯುತ್ತಿರುವ ಬೆಂಕಿಗೆ ಶಿವನ ಜಟೆಯಲ್ಲಿರುವ ಚಂದ್ರನನ್ನು ಕರಗಿಸಬೇಕೆಂಬ ಹುನ್ನಾರ. ಹೀಗೆ ಕುಟುಂಬದಲ್ಲಿ ಕ್ಷಣಕ್ಷಣಕ್ಕೂ ಜಗಳವೇ ನಡೆಯುತ್ತಿದ್ದರೆ ಇನ್ನೇನಾಗಬೇಕು? ರೋಸಿಹೋದ ಶಿವ ಬೇರೆ ದಾರಿಕಾಣದೆ ಕೊನೆಗೆ ಹಾಲಾಹಲವನ್ನೇ ಕುಡಿದುಬಿಟ್ಟನಂತೆ!

ಆಗಲೇ ಹೇಳಿದಂತೆ ಇದೊಂದು ತಮಾಷೆ ಪದ್ಯ ಅಷ್ಟೇ. ಆದರೆ ಎಲ್ಲ ಸಂಸಾರಗಳ ಕಥೆಯಂತೆಯೇ ಶಿವನ ಸಂಸಾರದ್ದೂ ಎಂದು ಅರ್ಥೈಸಿಕೊಳ್ಳಲಿಕ್ಕಡ್ಡಿಯಿಲ್ಲ. ಇಲ್ಲಿ ಇಂದಿನ ಅಂಕಣದ ವಿಷಯಕ್ಕೆ ಸಂಬಂಧಿಸಿದ್ದಲ್ಲವಾದರೂ ಪ್ರಚಲಿತ ವಿದ್ಯಮಾನಕ್ಕೂ ಈ ಚಾಟು ಶ್ಲೋಕವನ್ನು ಅನ್ವಯಿಸಬಹುದೆಂದು ನನಗನಿಸುತ್ತದೆ. ಏನೆಂದರೆ, ಮೊನ್ನೆ ಲೋಕಸಭಾ ಚುನಾವಣೆಯಲ್ಲಿ ಮೋದಿಯವರೇನೋ ಮತ್ತೊಮ್ಮೆ ಪ್ರಧಾನಿಯಾಗಿದ್ದಾರೆ; ಆದರೆ ಈ ಮೈತ್ರಿಕೂಟಗಳಿವೆಯಲ್ಲ, ಎನ್‌ಡಿಎ ಇರಲಿ ಐಎನ್‌ಡಿಐಎ ಇರಲಿ ಒಂದಕ್ಕಿಂತ ಒಂದು ತಕ್ಕಡಿಕಪ್ಪೆಗಳಂಥವು, ಅವುಗಳ ಮರ್ಜಿಗಳೋ ಮಸಲತ್ತುಗಳೋ ಶಿವನ ಸಂಸಾರಕ್ಕಿಂತಲೂ ಘನಘೋರ ಅಲ್ಲವೇ? ಇರಲಿ, ರಾಜಕಾರಣದ ಸುದ್ದಿ ನಮಗಿಲ್ಲಿ ಬೇಡ. ಅದಕ್ಕಿಂತ, ಛಂದದ ಚಂದದ ವಿಷಯವನ್ನೆತ್ತಿಕೊಳ್ಳೋಣ. ಶಾರ್ದೂಲವಿಕ್ರೀಡಿತ ವೃತ್ತ ಎಂಬ ಛಂದಸ್ಸಿನ ಸೊಬಗನ್ನು ಸವಿಯೋಣ. ಶಾರ್ದೂಲ ಅಂದರೆ ಹುಲಿ. ವಿಕ್ರೀಡಿತ ಅಂದರೆ ನಡಿಗೆ. ಹುಲಿಯ ನಡಿಗೆಯಂಥ ಗಾಂಭೀರ್ಯ ಮತ್ತು ಗತ್ತಿನ ಬಳುಕು ಈ ಛಂದಸ್ಸಿನ ಪದ್ಯಗಳ ವಾಚನಕ್ಕೆ ಇರುತ್ತದೆಂಬ ಕಾರಣಕ್ಕೆ ಆ ಹೆಸರು. ಮೇಲೆ ಉಲ್ಲೇಖಿಸಿದ ಶಿವಸಂಸಾರದ ಶ್ಲೋಕವನ್ನು ಕವಿ ಹೆಣೆದಿರುವುದು ಶಾರ್ದೂಲವಿಕ್ರೀಡಿತ ವೃತ್ತದಲ್ಲೇ.

ತಲಾ 19 ಅಕ್ಷರಗಳ ನಾಲ್ಕು ಸಾಲುಗಳು. ಪ್ರತಿ ಸಾಲಿನ ಮೂರು ಮೂರು ಅಕ್ಷರಗಳನ್ನು ಒಂದೊಂದು ಗಣವಾಗಿ ವಿಂಗಡಿಸಿ ಲಘು-ಗುರು ಪ್ರಸ್ತಾರ ಹಾಕಿ 'ಯಮಾತಾರಾಜಭಾನಸಲಗಂ' ಸೂತ್ರದಂತೆ ಗಣಗಳನ್ನು ಗುರುತಿಸಿದರೆ ಪ್ರತಿ ಸಾಲಿನಲ್ಲೂ ಅನುಕ್ರಮವಾಗಿ ಮ, ಸ, ಜ, ಸ, ತ, ತ ಗಣಗಳಿರುತ್ತವೆ. 19ನೆಯ ಅಕ್ಷರ ಯಾವಾಗಲೂ ಗುರು ಎಂದೇ ಪರಿಗಣನೆ. ಸಂಸ್ಕೃತದಲ್ಲಷ್ಟೇ ಅಲ್ಲ, ಕನ್ನಡದಲ್ಲೂ ಪಂಪ-ರನ್ನ ಆದಿಯಾಗಿ ಶ್ರೇಷ್ಠ ಕವಿಗಳು ಈ ಛಂದಸ್ಸಿನ ಬಳಕೆ ಮಾಡಿದ್ದಾರೆ. 'ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲವಿಕ್ರೀಡಿತಂ' ಅಂತೊಂದು ನೆನೆಗುಬ್ಬಿಯೂ ಇದೆ. ಶಾರ್ದೂಲವಿಕ್ರೀಡಿತ ವೃತ್ತದಲ್ಲಿರುವ ಪದ್ಯವನ್ನು ಓದುವಾಗ ಪ್ರತಿ ಸಾಲಿನ ಉಚ್ಚರಣೆಯಲ್ಲೂ ಮೊದಲ 12 ಅಕ್ಷರಗಳನ್ನು ಒಂದು ಗುಂಪಿನಂತೆ, ಆಮೇಲಿನ 7 ಅಕ್ಷರಗಳನ್ನು ಇನ್ನೊಂದು ಗುಂಪಿನಂತೆ- 'ನಾನಾನಾನನನಾನನಾನನನನಾ। ನಾನಾನನಾ ನಾನನಾ' ಎಂಬಂತೆ ಉಚ್ಚರಿಸುವುದು ಕ್ರಮ. ಇದರಿಂದ ಪದ್ಯಕ್ಕೆ ಒಳ್ಳೆಯ ಲಯ, ಧಾಟಿ ಸಿಗುತ್ತದೆ. ಮಾತ್ರವಲ್ಲ, ನಿಮಗೆ ಲಘು-ಗುರುಗಳ ಸ್ಪಷ್ಟ ಅರಿವಿದ್ದರೆ ಇದೇ ಜಾಡನ್ನು ಹಿಡಿದುಕೊಂಡು, ಅಂದರೆ ಇದೇ ಟ್ಯೂನ್‌ಗೆ ಹೊಂದಿಕೊಳ್ಳುವಂತೆ ಪದಗಳನ್ನು ಜೋಡಿಸುತ್ತ ಹೋದರೆ ನೀವೇ ಶಾರ್ದೂಲವಿಕ್ರೀಡಿತ ವೃತ್ತದಲ್ಲಿ ಪದ್ಯ ಹೆಣೆಯುವುದೂ ಸಾಧ್ಯವಾಗುತ್ತದೆ!

ಅದಕ್ಕೆಲ್ಲ ಸರಸ್ವತಿಯ ಅನುಗ್ರಹ ಇರಬೇಕು ಅಂತೀರಾ? 'ಯಾ ಕುಂದೇಂದು ತುಷಾರಹಾರಧವಳಾ ಯಾ ಶುಭ್ರವಸ್ತ್ರಾನ್ವಿತಾ। ಯಾ ವೀಣಾ ವರದಂಡಮಂಡಿತಕರಾ ಯಾ ಶ್ವೇತ ಪದ್ಮಾಸನಾ। ಯಾ ಬ್ರಹ್ಮಾಚ್ಯುತ ಶಂಕರಪ್ರಭೃತಿಭಿರ್ದೇವೈಃ ಸದಾ ಪೂಜಿತಾ। ಸಾ ಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷಜಾಡ್ಯಾಪಹಾ॥' ಎಂದು ಪ್ರಾರ್ಥಿಸಿ. ಶಾರದೆ ಒಲಿಯುತ್ತಾಳೆ. ಏಕೆಂದರೆ ಈ ಶಾರದಾ ಸ್ತುತಿಯೂ ಶಾ.ವಿ ವೃತ್ತದ್ದೇ! ಬೇಕಿದ್ದರೆ ಅಕ್ಷರಗಳನ್ನು ಎಣಿಸಿ ನೋಡಿ. ಇದೊಂದೇ ಅಲ್ಲ, ನಿಮಗೆ ಗೊತ್ತಿರಬಹುದಾದ ಬೇರೆ ಕೆಲವು ಶ್ಲೋಕ/ಸ್ತೋತ್ರಗಳೂ ಶಾ.ವಿ ವೃತ್ತದವೇ. ರಾಮರಕ್ಷಾ ಸ್ತೋತ್ರದ ಕೊನೆಯಲ್ಲಿ ಬರುತ್ತದಲ್ಲ ಎಂಟೂ ವಿಭಕ್ತಿಗಳಿರುವ 'ರಾಮೋ ರಾಜಮಣಿಸ್ಸದಾ ವಿಜಯತೇ ರಾಮಂ ರಮೇಶಂ ಭಜೇ...' ಅದು, ರಾಮಾಯಣಪಾರಾಯಣದ ಮಂಗಲಶ್ಲೋಕ 'ವೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಡಪೇ...', ಏಕಶ್ಲೋಕೀ ರಾಮಾಯಣ 'ಪೂರ್ವಂ ರಾಮ ತಪೋವನಾಭಿಗಮನಂ ಹತ್ವಾ ಮೃಗಂ ಕಾಂಚನಂ...', ಏಕಶ್ಲೋಕೀ ಮಹಾಭಾರತ 'ಆದೌ ಪಾಂಡವ ಧಾರ್ತರಾಷ್ಟ್ರ ಜನನಂ ಲಾಕ್ಷಾಗೃಹೇ ದಾಹನಂ...', ಏಕಶ್ಲೋಕೀ ಭಾಗವತ 'ಆದೌ ದೇವಕಿದೇವಿ ಗರ್ಭಜನನಂ ಗೋಪೀಗೃಹೇ ವರ್ಧನಂ...', ಕೃಷ್ಣನನ್ನು ಬಣ್ಣಿಸುವ 'ಕಸ್ತೂರೀತಿಲಕಂ ಲಲಾಟಪಟಲೇ ವಕ್ಷಃಸ್ಥಲೇ ಕೌಸ್ತುಭಂ...', ಶಿವಮಾನಸಪೂಜೆಯ 'ರತ್ನೈಃಕಲ್ಪಿತಮಾಸನಂ ಹಿಮಜಲೈಃ ಸ್ನಾನಂ ಚ ದಿವ್ಯಾಂಬರಂ...', ಭಗವದ್ಗೀತೆಯ ಶ್ರೇಷ್ಠತೆಯನ್ನು ಸಾರುವ 'ಪಾರ್ಥಾಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ...', ಭಗವದ್ಗೀತೆಯನ್ನು ಕಮಲದ ಹೂವಿಗೆ ಹೋಲಿಸುವ 'ಪಾರಾಶರ್ಯವಚಃ ಸರೋಜಮಮಲಂ ಗೀತಾರ್ಥಗಂಧೋತ್ಕಟಂ...', ಮಹಾಭಾರತವನ್ನು ಒಂದು ನದಿಗೆ ಹೋಲಿಸುವ 'ಭೀಷ್ಮದ್ರೋಣತಟಾ ಜಯದ್ರಥ ಜಲಾ ಗಾಂಧಾರನೀಲೋತ್ಪಲಾ...', ಪರಮಾತ್ಮನ ಸಾರ್ವಭೌಮತ್ವದ 'ಯಂ ಬ್ರಹ್ಮಾ ವರುಣೇಂದ್ರರುದ್ರಮರುತಃ ಸ್ತುನ್ವಂತಿ ದಿವ್ಯೈಃ ಸ್ತವೈಃ...', ಲೋಕಕ್ಕೆಲ್ಲ ಅವನೊಬ್ಬನೇ ಎನ್ನುವ 'ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ...' ಮುಂತಾದುವೆಲ್ಲವೂ. ಅಂತೆಯೇ ಕೆಲವು ಜನಜನಿತ ಸುಭಾಷಿತಗಳು: ಒಡವೆ-ಅಲಂಕಾರಗಳೆಲ್ಲ ವ್ಯರ್ಥ ಮತ್ತು ಮಾತೊಂದೇ ನಿಜವಾದ ಭೂಷಣ ಎಂದು ಬೋಧಿಸುವ 'ಕೇಯೂರಾ ನ ವಿಭೂಷಯಂತಿ ಪುರುಷಂ ಹಾರಾ ನ ಚಂದ್ರೋಜ್ಜ್ವಲಾ...', ಸಿಂಹದ ಸ್ವಾಭಿಮಾನವನ್ನು ಸಾರುವ 'ಕ್ಷುತ್ಕ್ಷಾಮೋಽಪಿ ಜರಾಕೃಶೋಽಪಿ ಶಿಥಿಲಪ್ರಾಯೋಽಪಿ ಕಷ್ಟಾಂ ದಶಾಂ...', ಬೊಕ್ಕ ತಲೆಯವನ ದುರದೃಷ್ಟವನ್ನು ಚಿತ್ರಿಸುವ 'ಖಲ್ವಾಟೋ ದಿವಸೇಶ್ವರಸ್ಯ ಕಿರಣೈಃ ಸಂತಾಪಿತೋ ಮಸ್ತಕೇ...', ಗುಣಗಳು ಒಡನಾಟದಿಂದ ಬರುತ್ತವೆನ್ನುವ 'ಸಂತಪ್ತಾಯಸಿ ಸಂಸ್ಥಿತಸ್ಯ ಪಯಸೋ ನಾಮಾಪಿ ನ ಶ್ರೂಯತೇ...' ಇತ್ಯಾದಿ. ಇಲ್ಲಿ ನಾನು ಪ್ರತಿಯೊಂದರ ಮೊದಲ ಸಾಲನ್ನಷ್ಟೇ ಉಲ್ಲೇಖಿಸಿದ್ದೇನೆ, ಸ್ಥಳಾಭಾವದ ಒಂದು ಕಾರಣಕ್ಕೆ ಮತ್ತು ಇವೆಲ್ಲ ಶ್ಲೋಕಗಳ ಅರ್ಥವ್ಯಾಖ್ಯಾನ ಇಲ್ಲಿಯ ಉದ್ದೇಶವಲ್ಲ ಎಂಬ ಇನ್ನೊಂದು ಕಾರಣಕ್ಕೆ.

ಅದಕ್ಕಿಂತ, ನಿಮಗೆ ಇದುವರೆಗೆ ಗೊತ್ತಿರಲಾರದ ಕೆಲವು ಶಾ.ವಿ ಪದ್ಯಗಳನ್ನು ಪೂರ್ತಿ ಪರಿಚಯಿಸಬೇಕೆಂಬುದು ನನ್ನ ಉದ್ದೇಶ. ಅದು ನಿಮಗೆ ಶಾವಿಗೆ ಖೀರು ಸವಿದಂತೆ ಖುಷಿಕೊಟ್ಟರೆ ಉದ್ದೇಶ ಸಾರ್ಥಕ. ಮುದ್ರಿತ ಪತ್ರಿಕೆಯಲ್ಲಿ ಅಂಕಣಕ್ಕೆ ಇಂತಿಷ್ಟೇ ಸ್ಥಳವೆಂದು ಮಿತಿ ಇರುವುದರಿಂದ, ಅದರ ಸಮರ್ಥ ಬಳಕೆಯಾಗಬೇಕೆಂದು ಪದ್ಯಗಳನ್ನು ಒಂದರ ಕೆಳಗೊಂದು ಸಾಲಿನಂತೆ ಬರೆಯುತ್ತಿಲ್ಲ. ಬದಲಿಗೆ ರನ್ನಿಂಗ್ ಟೆಕ್ಸ್ಟ್‌ನಂತೆ ಪ್ಯಾರಗ್ರಾಫ್‌ನಲ್ಲೇ ಅಳವಡಿಸಿಕೊಳ್ಳುತ್ತೇನೆ. ದಯವಿಟ್ಟು ಸ್ವಲ್ಪ ಅಡ್ಜಸ್ಟ್ ಮಾಡ್ಕೊಂಡು ಓದಬೇಕಾಗಿ ವಿನಂತಿ. ಮೊದಲಿಗೆ, ಭಾಸ್ಕರಾಚಾರ್ಯ ವಿರಚಿತ ಲೀಲಾವತಿ ಗ್ರಂಥದಲ್ಲಿರುವ ಒಂದು ಲೆಕ್ಕ. ಕಪಿಚೇಷ್ಟೆಯದು. ಶಾ.ವಿ ವೃತ್ತದಲ್ಲಿ: 'ವೃಕ್ಷಾತ್ ಹಸ್ತಶತೋಚ್ಛ್ರಯಾಚ್ಛತಯುಗೇ ವಾಪಿಂ ಕಪಿಃ ಕೋಽಪ್ಯಗಾತ್। ಉತ್ತೀರ್ಯಾಥ ಪರೋ ದ್ರುತಂ ಶ್ರುತಿಪಥೇನೋಡ್ಡೀಯ ಕಿಂಚಿದ್ದ್ರುಮಾತ್। ಜಾತೈವಂ ಸಮತಾ ತಯೋರ್ಯದಿ ಗತಾವುಡ್ಡೀನಮಾನಂ ಕಿಯತ್। ವಿದ್ವನ್ ಚೇತ್ಸುಪರಿಶ್ರಮೋಸ್ತಿ ಗಣಿತೇ ಕ್ಷಿಪ್ರಂ ತದಾಚಕ್ಷ್ವ ಮೇ॥' ಅಂದರೆ, 100 ಹಸ್ತಗಳಷ್ಟು ಎತ್ತರದ ಒಂದು ಮರದ ತುದಿಯಲ್ಲಿರುವ ಮಂಗ ಅಲ್ಲಿಂದಿಳಿದು ಮರದ ಬುಡದಿಂದ 200 ಹಸ್ತಗಳಷ್ಟು ದೂರವಿರುವ ಕೆರೆಯ ದಡಕ್ಕೆ ನಡೆದುಕೊಂಡು ಹೋಗುತ್ತದೆ. ಅಷ್ಟರಲ್ಲಿ ಇನ್ನೊಂದು ಮಂಗವು ಅದೇ ಮರದ ತುದಿಯಿಂದ ಇನ್ನೂ ಸ್ವಲ್ಪ ಮೇಲಕ್ಕೆ ಜಿಗಿದು, ವಿಕರ್ಣಮಾರ್ಗದಲ್ಲಿ ಬಂದು ಕೆರೆಯನ್ನು ತಲುಪುತ್ತದೆ. ಬಹುಶಃ ಅದು ಪೈಥಾಗೊರಸನ ಪೂರ್ವಜನಿರಬೇಕು. ಎರಡೂ ಮಂಗಗಳು ಕ್ರಮಿಸಿದ ಹಾದಿಯ ಅಳತೆ ಸಮಾನವಿದೆ. ಹಾಗಾದರೆ ಎರಡನೆಯ ಮಂಗವು ಮರದ ತುದಿಯಿಂದ 'ಇನ್ನೂ ಸ್ವಲ್ಪ ಮೇಲಕ್ಕೆ' ಜಿಗಿಯಿತಲ್ಲ, ಆ ಎತ್ತರ ಎಷ್ಟು?

ಆಸಕ್ತಿಯಿದ್ದವರು ಜಾಣ್ಮೆಲೆಕ್ಕವನ್ನು ಆಮೇಲೆ ಬಿಡಿಸುವಿರಂತೆ. ಈಗ ಶತಾವಧಾನಿ ಡಾ. ಆರ್.ಗಣೇಶರು ಅವಧಾನ ಕಾರ್ಯಕ್ರಮವೊಂದರಲ್ಲಿ ಹೆಣೆದ ಒಂದು ಶಾ.ವಿ ಪದ್ಯ. ಪೃಚ್ಛಕರು ಅವರನ್ನು ಕೇಳಿದ್ದು 'ಪೋಲಿ, ಲೋಫರ್, ಸ್ಟುಪಿಡ್, ಕಮಾನ್- ಈ ಪದಗಳು ಬರುವಂತೆ, ಶ್ರೀರಾಮನು ಸಮುದ್ರ ರಾಜನನ್ನು ಸ್ತುತಿಸುತ್ತಿರುವಂತೆ ಪದ್ಯ ರಚಿಸಿರಿ' ಎಂದು. ಅವಧಾನಿಗಳ ಉತ್ತರ: 'ಸ್ರೋತೋನಾಯಕ ನಿರ್ಭರಾನೃತರಿಪೋ ಲಿಪ್ಸಾವಿದೂರ ಸ್ಥಿರ। ಪ್ರೀತಿಸ್ಫೋರಕ ಸೇತುವಾಗಲಿದೆಲೋ ಪರ್ಯಂತ ಚಿಂತಾಕುಲಂ। ಸೀತಾನ್ವೇಷಣಕಾರ್ಯಕಿಷ್ಟು ಪಿಡುಗೇಂ ನಿನ್ನಿಂದೆಯಾದೋಥವ। ಸ್ಫೀತಾಂಬು ಪ್ರಸರಕ್ಕಮಾನುಷಬಲಂ ಕೊರ್ವಿರ್ಪುದಂ ಕಾಣೆಯೇಂ॥'- ಇದರಲ್ಲಿ ಪೋಲಿ, ಲೋಪ(ಫ)ರ್, ಷ್ಟು(ಸ್ಟು)ಪಿಡ್, ಮತ್ತು ಕಮಾನ್ ಎಲ್ಲಿವೆಯೆಂದು ಗುರುತಿಸುವುದು ಈಗ ನಿಮ್ಮ ಕೆಲಸ. ಪದ್ಯ ಸಂಸ್ಕೃತ ಶ್ಲೋಕದಂತೆಯೇ ಕಾಣುತ್ತಿದೆಯಲ್ಲ ಎನ್ನುವಿರಾದರೆ ಅದನ್ನಲ್ಲಿಗೇ ಬಿಟ್ಟು, ಪ್ರೊ.ಅ.ರಾ.ಮಿತ್ರ ಅವರು 'ಛಂದೋಮಿತ್ರ' ಪುಸ್ತಕದಲ್ಲಿ ಶಾ.ವಿ ವೃತ್ತಕ್ಕೆ ಉದಾಹರಣೆಯಾಗಿ ಕಟ್ಟಿದ ಪದ್ಯವನ್ನು ಓದಿ. ಇದು ಸರಳಗನ್ನಡದಲ್ಲಿ, ಸುಲಭವಾಗಿ ಅರ್ಥವಾಗುವಂತಿದೆ: 'ಚೌಕಾಶೀ ವ್ಯವಹಾರವೇ ಹೊಲಸು ಒಂದೇ ಮಾತು ಒಂದೇ ದರಂ। ಬೇಕಾಗಿದ್ದರೆ ಕೊಳ್ಳಿ ಬೇಡವನೆ ಬೇರೊಬ್ಬಂಗೆ ಜಾಗಂ ಬಿಡೀ। ಸಾಕೋ ಸಾಕಿದು ವಾದತಂತ್ರ ಬೆಲೆಯಂ ನಿರ್ಧಾರದಿಂ ಹೇಳುವೆಂ। ನಾಗಾಲೋಟದಿ ಓಡುತಿರ್ಪ ಜಗದೊಳ್ ಚಾಂಚಲ್ಯಕೇಕಾಸ್ಪದಂ?'

ಸರಿ, ಈಗಿನ್ನು ನಿಮಗೆ ಮೈನ್ ಕೋರ್ಸ್ ಸುಗ್ರಾಸ ಭೋಜನ. ಕಬ್ಬಿಣದ ಕಡಲೆಯೆಂದೆನಿಸುವ ಸಂಸ್ಕೃತ, ಹಳಗನ್ನಡಗಳನ್ನೆಲ್ಲ ಬಿಟ್ಟು ಮಾಡರ್ನ್ ಕನ್ನಡದಲ್ಲಿ ಮಾಡರ್ನ್ ಕವಿಗಳು ಹೊಸೆದ ಕೆಲವು ಶಾ.ವಿ ಪದ್ಯಗಳು. ಬಾಯಿಯಲ್ಲಿ ನೀರೂರಿಸುವಂಥವು. ನನ್ನ ಸಂಗ್ರಹದಲ್ಲಿ ಇವು ಸೇರಿದ್ದು ಛಂದೋಬದ್ಧ ಕವಿತೆ ರಚನೆ ಹವ್ಯಾಸವಿರುವ ಸ್ನೇಹಿತರು ಫೇಸ್‌ಬುಕ್‌ನಲ್ಲಿ ವಾಟ್ಸ್ಯಾಪ್‌ನಲ್ಲಿ ಹಂಚಿಕೊಂಡಿದ್ದರಿಂದ. ಇವುಗಳನ್ನು ನೀವೂ ಸವಿಯಬೇಕೆಂದು ನನ್ನ ಒತ್ತಾಸೆ. ಮೊದಲಿಗೆ, ತಾಲಿಪಟ್ಟಿನ ರುಚಿ ನೋಡಿ. ಶಾ.ವಿ ವೃತ್ತದಲ್ಲಿ ಇದನ್ನು ತಟ್ಟಿದವರು ವಸುಮತಿ ರಾಮಚಂದ್ರ. 'ತಾಲಿಪ್ಪಟ್ಟನು ಮಾಡಲೆಂದು ತುರಿದೇನ್ ಈರುಳ್ಳಿ ಮುಳ್ಸೌತೆಯಂ। ನಾರೀಕೇಳವ ಮಿಕ್ಸಿಯಲ್ಲಿ ಅರೆದೇನ್ ಕೊತ್ತೊಂಬ್ರಿ, ಕರ್ಬೇವ್ ಜೊತೆ। ಬಾಣ್ಲೇಯಲ್ಲಿಯೆ ಎಣ್ಣೆಯನ್ನು ಸವರೀ ಹಿಟ್ಟನ್ನು ತಟ್ಟಿಟ್ಟೆನೂ। ಬಂಗಾರ್ದಂತಹ ಕೆಂಪು ಬಣ್ಣ ಬರುವಾ ಹಾಗೇನೆ ಬೇಯಿಸ್ರ್ಪೆನೂ॥' ಅದೇ ರೀತಿಯಲ್ಲಿ ರಾಗಿರೊಟ್ಟಿ ಸವಿಯುತ್ತೀರಾದರೆ ಮೋಹಿನಿ ದಾಮ್ಲೆಯವರ ಕಾವ್ಯಭವನದಲ್ಲಿ ಸಿಗುತ್ತದೆ: 'ನುಗ್ಗೇಸೊಪ್ಪನು ಉಪ್ಪು ಕಾಯ್ತುರಿಯನೂ ಕುಟ್ಟಿರ್ದ ಕಾಯ್ಮೆಣ್ಸನೂ। ರಾಗೀಹಿಟ್ಟಲಿ ಸೇರಿಸುತ್ತ ಕಲಸೀ ನೀರ್ ಜೀರ್ಗೆ ಚೂರ್ ಮೊಸ್ರನೂ। ಎಣ್ಣೇ ಹಚ್ಚುತ ಬಾಳೆಸೀಳ ಮೊಗಕೇ ಹಿಟ್ಟುಂಡೆ ತಟ್ಟುತ್ತಲೀ। ಕಾದಿರ್ದಾ ತವ ಮೇಲೆ ಹಾಕಿ ಹದದೀ ಬೇಯ್ಸಾದ ಮೇಲ್ ತಿನ್ನಿರೀ॥' ಅಥವಾ, ನಿಮಗೆ ಉಪ್ಪಿಟ್ಟೇ ಪರಮಪ್ರೀತಿ ಅಂತಾದರೆ ನಂಜುಂಡ ಭಟ್ಟರ ಖಾನಾವಳಿಗೆ ಬನ್ನಿ: 'ಉಪ್ಪಿಟ್ಟುಣ್ಣುತ ಕನ್ಯೆಯಾರಿಸಿದವನ್ ಮತ್ತೇನನೂ ಕೇಳದೇ। ತಪ್ಪಂಗೈದಿಹೆನೆಂದು ತೋರ್ಗೊಡದೆಯೇ ತಾಪತ್ರಯಂ ನುಂಗುತಂ। ಅಪ್ಪುತ್ತೆಲ್ಲವ ಸುಮ್ಮನಾಗುತಿರಲೇಂ ಬಾಯ್ಮುಚ್ಚಿ ತಿನ್ನುತ್ತಲೇ। ಎಪ್ಪತ್ತೈದರ ರಾಮ ಹೇಳು ನಿನಗೂ ಉಪ್ಪಿಟ್ಟು ಅಚ್ಚಿಷ್ಟವೇ?' ಅಂದಹಾಗೆ ನಿಮಗೆ ಈ ಪದ್ಯವನ್ನೋದುವಾಗ ಶುಭವಿವಾಹದ ನೆನಪಾದರೆ ಅದು ಸಹಜವೇ. ಮದುವೆಮಂಟಪದಲ್ಲಿ ವಧೂ-ವರರ ನಡುವೆ ಅಂತರಪಟ ಹಿಡಿದ ಪುರೋಹಿತರು ಸುಮುಹೂರ್ತ ಸಾವಧಾನ ಎಂದು ಸೇರಿಸಿ ಮಂಗಲಾಷ್ಟಕ ಹೇಳುತ್ತಾರಷ್ಟೆ? ಅವೆಲ್ಲವೂ ಶಾ.ವಿ ಶ್ಲೋಕಗಳೇ!

ನಂಜುಂಡ ಭಟ್ಟರ ಪದ್ಯವನ್ನು ಸೂಕ್ಷ್ಮವಾಗಿ ಗಮನಿಸಿದಿರಾದರೆ ಅದರಲ್ಲಿ ಆದಿಪ್ರಾಸ (ಪ್ರತಿ ಸಾಲಿನ ಎರಡನೆಯ ಅಕ್ಷರವು ಒಂದೇ ವ್ಯಂಜನದಿಂದಾಗಿರುವುದು) ಅಳವಡಿಸಿರುವುದು ತಿಳಿಯುತ್ತದೆ. ಸಂಸ್ಕೃತದಲ್ಲಿ ಅಷ್ಟೇನೂ ಪಾಲನೆಯಾಗದ ಈ ಕ್ರಮವನ್ನು ಕನ್ನಡದ ಕವಿಗಳು ಹೆಮ್ಮೆಯಿಂದ ಪಾಲಿಸುತ್ತಾರೆ- ಶಾ.ವಿ ವೃತ್ತನಿಯಮದಲ್ಲಿ ಹಾಗೇನೂ ಕಡ್ಡಾಯವಿಲ್ಲದಿದ್ದರೂ. ಆದ್ದರಿಂದ ಮೆಚ್ಚುಗೆಗೋಸ್ಕರ ನಂಜುಂಡ ಭಟ್ಟರದೇ ಇನ್ನೊಂದು ಪದ್ಯ: 'ಎದ್ದಾಯ್ತಾಗಲೆ ಸದ್ದುಗದ್ದಲವಿರಲ್ ರದ್ದಾಯ್ತು ಮಧ್ಯಾಹ್ನದಾ। ಸಿದ್ಧಾರೂಢಿತ ನಿದ್ದೆಗಂಟಿದ ಸುಖಂ ಕಾಲ್ಜಾರಿ ಬಿದ್ದಂತೆಯೇ। ಹೊದ್ದಿರ್ಪಾ ಬಲುದಪ್ಪ ಚಾದರದಲೇ ನಿದ್ರಾರಿ ಹೂತಿರ್ಪನೇ?। ಸದ್ದಂಗೈಯುವರಾರು ನಮ್ಮೊಳಗಲೇ ನಿಂತಿರ್ದು ನೋವೀವರೇ?॥' ಹೀಗೆ ಆದಿಪ್ರಾಸವನ್ನೂ ಇಟ್ಟುಕೊಂಡು ಛಂದೋಬದ್ಧ ಕವಿತೆ ಹೆಣೆಯುವ ಇನ್ನೊಬ್ಬ ಮಿತ್ರ ಮೃತ್ಯುಂಜಯ ತೇಜಸ್ವಿಯವರ ಶಾ.ವಿ ಪದ್ಯಗಳು ಇಲ್ಲಿವೆ. ಮೊದಲನೆಯದು ಗೂಗಲ್ ದೇವರಿಗೆ ನಮನ: 'ಸಾಗಲ್ಕೆನ್ನಯ ದೂರ ದೇಶ ಪಯಣಂ ನೀ ದಾರಿಯಂ ತೋರುತಾ। ನೀಗುತ್ತೆನ್ನಯ ಸಂಶಯಾದಿಗಳನಂ ನೀ ನಿತ್ಯ ಕಾಪಾಡಿರಲ್। ಬಾಗುತ್ತಾ ಕರ ಜೋಡಿಸುತ್ತ ನಿಲುತಾ ಕಣ್ಮುಚ್ಚುತಾನಂದದೀ। ಗೂಗಲ್ದೇವನೆ ನಿನ್ನ ನಾನು ನಮಿಪೆಂ ಸಾಷ್ಟಾಂಗದಲ್ಲೀದಿನಂ॥' ಇನ್ನೊಂದು ಮೊನ್ನೆ ಆರ್‌ಸಿಬಿ ತಂಡ ಇನ್ನೇನು ಕಪ್ ಗೆಲ್ಲಲಿಕ್ಕೆ ಮೂರೇ ಗೇಣಿನಷ್ಟರವರೆಗೂ ಬಂದಿದ್ದ ದಿನದ ಸಂಭ್ರಮ: 'ಧಾರಾಕಾರದಿ ವರ್ಷರಾಶಿ ಸುರಿಯಲ್ ಕ್ರೀಡಾಂಗಣಕ್ ರನ್ನಿನೊಲ್। ಯಾರೂ ಯೋಚನೆ ಮಾಡದಂಥ ಪರಿಯೊಳ್ ಗೆದ್ದಿರ್ಪರೀ ಪಂದ್ಯಮಂ। ಮೂರೇ ಮೆಟ್ಟಿಲು ಬಾಕಿಯಿನ್ನು ನಮಗೀ ಸಮ್ಮಾನವಂ ಸಾಧಿಸಲ್। ಮೂರೂ ಪಂದ್ಯವ ಗೆದ್ದು ಬೀಗಿರೆನುತಾ ಹಾರೈಕೆಯಂ ಮಾಡುವಾ।' ಕೊನೆಗೂ ಆ ಹಾರೈಕೆ ಫಲಿಸಲಿಲ್ಲವೆನ್ನಿ.

ಶಾ.ವಿ ಶಾವಿಗೆ ಪಾಯಸ ನಿಮಗೆ ಇಷ್ಟವಾಯ್ತೆಂದು ನನ್ನ ಗ್ರಹಿಕೆ. ಈಗ, ತುಳು ಭಾಷೆಯ ಒಂದು ಶಾ.ವಿ ಪದ್ಯವನ್ನೂ ಸವಿಯಿರಿ. ಅಜ್ಞಾತ ಕವಿ ಬರೆದ ಇದರಲ್ಲಿ ಆದಿಪ್ರಾಸ ಇದೆ, ಆದಿವಂದಿತನ ಸ್ತುತಿಯೂ ಇದೆ. ಭೋಜನದಲ್ಲಿ ಚೂರ್ಣಿಕೆಯಂತೆ ಇದನ್ನು ಹಾಡಬಹುದಾಗಿದೆ: 'ಬೆಲ್ಲೋ ಬಾರೆದ ಫಂರ್ದು ಗುಡ್ಡೆ ಬಜಿಲೂ ಕಲ್ಲಪ್ಪೊ ನೆಯ್ ಸಕ್ಕರೇ। ಬೊಳ್ಳೀ ಬಟ್ಟಲ ಪೇರು ತಾರಾಯಿ ಗಡೀ ಎಳ್ಳುಂಡೆಲಾ ಪೊದ್ದೊಳೂ। ಜಳ್ಳೊ ಕಂರ್ಬುದ ಕೋಲು ಫತ್ತುದು ನಡತ್ ಬತ್ತಿಂಚಿ ವಿಘ್ನೇಶ್ವರೇ। ಮಲ್ಲಾ ಬಂಜಿತಾ ಗಣಪತೀ ಕುಳ್ಳುಲೇ ವಿಘ್ನೊಂಕುಳೇನ್ತಳ್ಪುಲೇ॥' ತುಳು ಬಾರದವರಿಗಾಗಿ ಭಾವಾರ್ಥ: ಬೆಲ್ಲ, ಬಾಳೆಹಣ್ಣು, ಅವಲಕ್ಕಿ, ಕಲ್ಲಪ್ಪ, ತುಪ್ಪ, ಸಕ್ಕರೆ, ಬೆಳ್ಳಿಬಟ್ಟಲಲ್ಲಿ ಹಾಲು, ತೆಂಗಿನಕಾಯಿಯ ಹೋಳು, ಎಳ್ಳುಂಡೆ, ಅರಳು, ಕಬ್ಬಿನ ಜಲ್ಲೆ- ಇವೆಲ್ಲವುಗಳೊಂದಿಗೆ ಬಂದಿರುವ, ದೊಡ್ಡ ಹೊಟ್ಟೆಯ ಗಣಪತಿ ದೇವರೇ, ಬನ್ನಿ ಕುಳಿತುಕೊಳ್ಳಿ. ನಮ್ಮೆಲ್ಲ ವಿಘ್ನಗಳನ್ನೂ ದೂರ ತಳ್ಳಿ.

ಕೊನೆಯಲ್ಲೊಂದು, ಊಹೆಗೂ ನಿಲುಕದ ಔಟ್-ಆಫ್-ದ-ಬಾಕ್ಸ್ ಸ್ವಾರಸ್ಯ. ಸುಮಾರು 35 ವರ್ಷಗಳ ಹಿಂದೆ ಬಿಡುಗಡೆಯಾಗಿ ಜಯಭೇರಿ ಬಾರಿಸಿದ್ದ, ರಾಷ್ಟ್ರಪ್ರಶಸ್ತಿ ವಿಜೇತ 'ಗೀತಾಂಜಲಿ' ತೆಲುಗು ಚಿತ್ರ ನಿಮಗೆ ನೆನಪಿರಬಹುದು. ಮಣಿರತ್ನಂ ನಿರ್ದೇಶನ, ನಾಗಾರ್ಜುನ-ಗಿರಿಜಾ ಅಭಿನಯ, ಇಳೆಯರಾಜ ಸಂಗೀತ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಮತ್ತು ಕೆ.ಎಸ್.ಚಿತ್ರಾ ಕಂಠದಲ್ಲಿ ಭೂತಪ್ರೇತಪಿಶಾಚಿಗಳ ಹಾಡು 'ನಂದಿ ಕೊಂಡ ವಾಗುಲ್ಲೋನ ನಲ್ಲ ತುಮ್ಮ ನೀಡಲ್ಲೋ... ಚಂದ್ರ ವಂಕ ಕೋನಲ್ಲೋನ ಸಂದೆ ಪೊದ್ದು ಸೀಕಟ್ಲೋ... ನೀಡಲ್ಲೇ ಉನ್ನಾ ನೀತೋ ವಸ್ತುನ್ನಾ...' ಅದರ ಹಿನ್ನೆಲೆ ಸಂಗೀತವಂತೂ ರೌದ್ರ, ಭಯಾನಕ. ಕೊನೆಯ ಚರಣದಲ್ಲಿ 'ಢಾಕಿನಿ ಢಕ್ಕಾ ಮುಕ್ಕಲ ಚೆಕ್ಕಾ... ಗುಂಟರಿ ನಕ್ಕ ಡೊಕ್ಕಲೋ ಚೊಕ್ಕಾ... ರಕ್ಕಿಸ ಮಟ್ಟ ತೊಕ್ಕಿಸ ಗುಟ್ಟ... ತೀತುವು ಪಿಟ್ಟ ಆಯುವು ಚಿಟ್ಟಾ... ಅಸ್ತ್ರಾಯ ಫಟ್ ಫಟ್ ಫಟ್ ಫಟ್... ವಸ್ತಾಯಾ ಝುಟ್ ಝುಟ್ ಝುಟ್ ಫಟ್...' ಅಂತೆಲ್ಲ ಭೂತೋಚ್ಚಾಟನೆ ಮಂತ್ರವಾದಿಯ ತೊದಲು ವಿಕೆಯಂಥ ಶಬ್ದಗಳು. ಕಟ್ಟಕಡೆಯ ಸಾಲು 'ಕೋಪಾಲಾ ಮಸಜಸತತಗಾ ಶಾರ್ದೂಲಾ!' ಎಂದು. ಅದೇನು ಗೊತ್ತೇ? ಶಾರ್ದೂಲವಿಕ್ರೀಡಿತ ವೃತ್ತದಲ್ಲಿ ಮ, ಸ, ಜ, ಸ, ತ, ತ ಗಣಗಳು ಮತ್ತೊಂದು ಗುರು ಇರುತ್ತವೆಯಷ್ಟೇ, ಅದೇ- ಮಸಜಸತತಗಾ ಶಾರ್ದೂಲಾ!

ಬಹುಮತದ ಸರಕಾರ, ನಿರೀಕ್ಷೆಗಳ ಸಾಕಾರ

ಅಯೋಧ್ಯೆಯಲ್ಲೇ ಬಿಜೆಪಿಗೆ ಸೋಲು, ಜನಪ್ರಿಯ ಪ್ರಧಾನಿಗೆ ಕಡಿಮೆ ಅಂತರದ ಗೆಲುವು, ಜೈಲಲ್ಲಿದ್ದ ಒಬ್ಬ ಭಯೋತ್ಪಾದಕನ ಗೆಲುವು, ತಮಿಳುನಾಡಿನಲ್ಲಿ ಅಣ್ಣಾಮಲೈ ಹೋರಾಟಕ್ಕೆ ಸೋಲು, ಆಂಧ್ರಪ್ರದೇಶದಲ್ಲಿ ಎನ್‌ಡಿಎ ಒಕ್ಕೂಟಕ್ಕೆ ವಿಜಯ ಇವು ಈ ಸಲದ ಲೋಕಸಭಾ ಚುನಾವಣಾ ಫಲಿತಾಂಶದ ಮುಖ್ಯಾಂಶಗಳು ಎನ್ನಬಹುದು.



ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಏಳು ಹಂತಗಳಲ್ಲಿ ಲೋಕಸಭಾ ಚುನಾವಣೆ ನಡೆದು ಜೂನ್ 4ರಂದು ಫಲಿತಾಂಶ ಹೊರಬಿದ್ದಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟ 293 ಸ್ಥಾನಗಳನ್ನು ಪಡೆದು ಸರಳ ಬಹುಮತದೊಂದಿಗೆ ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬರಲಿದ್ದರೆ, 'ಇಂಡಿಯ' ಒಕ್ಕೂಟ 234 ಸ್ಥಾನಗಳಲ್ಲಿ ನಿರೀಕ್ಷೆಗೂ ಮೀರಿದ ಗೆಲುವು ಸಾಧಿಸಿದೆ. ಇನ್ನೇನು ಅಸ್ತಿತ್ವವೇ ಇಲ್ಲದಾಯಿತು ಎನ್ನುವ ಸ್ಥಿತಿಯಲ್ಲಿದ್ದ ಕಾಂಗ್ರೆಸ್, ಶತಕದ ಹತ್ತಿರಕ್ಕೆ ಬಂದು ನಿಂತಿದೆ ಮತ್ತು ಈ ಬಾರಿ ಅಧಿಕೃತ ವಿರೋಧ ಪಕ್ಷದ ಸ್ಥಾನ ತುಂಬಲಿದೆ. ಕಳೆದ ಹತ್ತು ವರ್ಷಗಳಿಂದ ದೇಶದ ಅಧಿಕಾರ ಚುಕ್ಕಾಣಿ ಹಿಡಿದಿರುವ ಮೋದಿ ಮತ್ತೊಮ್ಮೆ ಪ್ರಧಾನಿ ಗದ್ದುಗೆ ಏರಲು ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಅಯೋಧ್ಯೆಯಲ್ಲೇ ಬಿಜೆಪಿಗೆ ಸೋಲು, ಪ್ರಧಾನಿಗೆ ಕಡಿಮೆ ಅಂತರದ ಗೆಲುವು, ಪಂಜಾಬಿನಲ್ಲಿ ಒಬ್ಬ ಭಯೋತ್ಪಾದಕನ ಗೆಲುವು, ತಮಿಳುನಾಡಿನಲ್ಲಿ ಅಣ್ಣಾಮಲೈ ಹೋರಾಟಕ್ಕೆ ಸೋಲು, ಕರ್ನಾಟಕದಲ್ಲಿ ದೇಶ ವಿಭಜನೆಯ ಮಾತಾಡುತ್ತಿದ್ದವರ ವಿರುದ್ಧ ಡಾ.ಮಂಜುನಾಥ್ ಅವರ ಅಭೂತಪೂರ್ವ ಗೆಲುವು, ಒಡಿಶಾ ಮತ್ತು ಅರುಣಾಚಲ ಪ್ರದೇಶ ರಾಜ್ಯಗಳಲ್ಲಿ ಬಿಜೆಪಿಗೆ ಐತಿಹಾಸಿಕ ಜಯ, ಆಂಧ್ರಪ್ರದೇಶದಲ್ಲಿ ಚಂದ್ರಬಾಬುನಾಯ್ಡು ನೇತೃತ್ವದಲ್ಲಿ ಎನ್‌ಡಿಎ ಒಕ್ಕೂಟಕ್ಕೆ ವಿಜಯ, ಮಧ್ಯಪ್ರದೇಶ ಮತ್ತು ದೆಹಲಿಯಂಥ ರಾಜ್ಯಗಳಲ್ಲಿ ಬಿಜೆಪಿಯ ಕ್ಲೀನ್‌ಸ್ವೀಪ್ ಇವುಗಳು ಈ ಚುನಾವಣಾ ಫಲಿತಾಂಶದ ಮುಖ್ಯಾಂಶಗಳು ಎಂದು ಹೇಳಬಹುದು. ವಿರೋಧ ಪಕ್ಷಗಳ ಉತ್ತಮ ಸಾಧನೆಯಿಂದಾಗಿ ಈ ಚುನಾವಣೆಯಲ್ಲಿ ಎವಿಎಂ ಆರೋಪಮುಕ್ತವಾಗಿರುವುದು ಇನ್ನೊಂದು ವಿಶೇಷ.

2014ರ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿಯ ಪ್ರಚಂಡ ಗೆಲುವು ಮತ್ತು 2019ರ ಚುನಾವಣೆಯ ಮತ್ತೂ ಅಧಿಕ ಅಂತರದ ಗೆಲುವುಗಳ ಮುಂದೆ 2024ರ ಚುನಾವಣೆಯ ಗೆಲುವು ಎಲ್ಲರಿಗೂ ಸ್ವಲ್ಪ ಮಂಕಾಗಿ ಕಾಣಿಸುತ್ತಿರುವುದಂತೂ ನಿಜ. ಆದರೆ, ಗೆಲುವು ಗೆಲುವೇ! ಅದು ಅಭಿನಂದನಾರ್ಹವೇ. ಇಂದಿರಾ ಮರಣದ ನಂತರ ರಾಜೀವ್ ಗಾಂಧಿಯವರಿಗೆ ದೊರೆತ 414 ಸ್ಥಾನಗಳನ್ನು ಬಿಟ್ಟರೆ ಒಂದು ಪಕ್ಷಕ್ಕೆ ಸರಳ ಬಹುಮತ ಅಂತ ದೊರೆತಿರುವುದು ನರೇಂದ್ರ ಮೋದಿಯವರ ನಾಯಕತ್ವದ 2014ರ ಹೊಸ ಪೀಳಿಗೆಯ ಬಿಜೆಪಿಗೆ ಮಾತ್ರವೇ. 2019ರಲ್ಲಿ ಅವರು ಈ ಪ್ರದರ್ಶನವನ್ನು ಇನ್ನೂ ಉತ್ತಮಪಡಿಸಿಕೊಂಡರು ಮತ್ತು ಈಗ 10 ವರ್ಷಗಳ ಆಡಳಿತದ ನಂತರ ಸ್ವಾಭಾವಿಕವಾಗಿ ಇರಬಹುದಾದ ಆಡಳಿತವಿರೋಧಿ ಮನಸ್ಥಿತಿಯ ಮಧ್ಯೆ 240 ಸ್ಥಾನವನ್ನು ಸ್ವತಂತ್ರವಾಗಿ ಗೆಲ್ಲುವುದು ಹಾಗೂ ಎನ್‌ಡಿಎ ಒಕ್ಕೂಟವು ಸರಳ ಬಹುಮತಕ್ಕೆ ಬೇಕಾಗಿರುವುದಕ್ಕಿಂತ 21 ಸ್ಥಾನ ಹೆಚ್ಚು ಗಳಿಸುವುದು ಅಂದರೆ ಸಣ್ಣ ಮಾತಲ್ಲ. ಅದು 2014 ಮತ್ತು 2019ಕ್ಕಿಂತ ದೊಡ್ಡಮಟ್ಟದ ಸಾಧನೆಯೇ ಆಗಿದೆ ಎನ್ನುವುದು ಅನೇಕ ಪ್ರಾಜ್ಞರ ಅಭಿಪ್ರಾಯವಾಗಿದೆ. ಅಷ್ಟೇ ಅಲ್ಲದೆ, ಈ ತ್ರಿವಿಕ್ರಮದ ಯಶಸ್ಸು ಮೋದಿಯವರಿಗೇ ಸಲ್ಲುತ್ತದೆ ಎನ್ನುವುದನ್ನೂ ಪ್ರಾಂಜಲ ಮನಸ್ಸಿನಿಂದ ಒಪ್ಪಬೇಕಾಗುತ್ತದೆ.

ಅಯೋಧ್ಯೆಯ ಕಾವಿಧಾರಿ ಸಂತರೊಬ್ಬರು ಕಣ್ಣಲ್ಲಿ ನೀರು ತುಂಬಿಕೊಂಡು ಮಾತಾಡುತ್ತಿದ್ದ ದೃಶ್ಯ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಅಯೋಧ್ಯೆಯಲ್ಲಿ ಬಿಜೆಪಿ ಗೆದ್ದು ಇಡೀ ರಾಷ್ಟ್ರದಲ್ಲಿ ಸೋತಿದ್ದರೂ ಬೇಸರ ಇರುತ್ತಿರಲಿಲ್ಲ, ಆದರೆ ಇಲ್ಲಿ ಸೋಲಬಾರದಾಗಿತ್ತು' ಎನ್ನುವುದು ಅವರ ಅನಿಸಿಕೆ. ಅಯೋಧ್ಯೆಯ ಪ್ರಜೆಯೊಬ್ಬನ ಅನಪೇಕ್ಷಿತ ಆರೋಪದಿಂದ ಸೀತಾಮಾತೆಯ ಚಾರಿತ್ರ್ಯವನ್ನು ಅನುಮಾನಿಸಿ ಅರಣ್ಯಕ್ಕೆ ಕಳುಹಿಸಿದ ತ್ರೇತಾಯುಗದ ಪ್ರಸಂಗದಿಂದ ಅಯೋಧ್ಯಾ ನಗರ ಮತ್ತು ಅಲ್ಲಿನ ಜನರ ಮೇಲೆ ಶಾಶ್ವತವಾದ ಕಳಂಕವಂತೂ ಈಗಾಗಲೇ ಇದೆ. ಈ ಬಾರಿ ಅಯೋಧ್ಯೆಯಲ್ಲಿ, 500 ವರ್ಷಗಳ ವಿವಾದವನ್ನು ಸುಸೂತ್ರವಾಗಿ ಬಗೆಹರಿಸಿ ಬೃಹತ್ ಮಂದಿರವನ್ನು ನಿರ್ಮಾಣ ಮಾಡಲಾಗಿತ್ತು. ಅಲ್ಲದೆ, ವಿಮಾನ ನಿಲ್ದಾಣವೂ ಸೇರಿ ಅಯೋಧ್ಯಾಪುರದ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡಿದ್ದ ಬಿಜೆಪಿಯ ಅಭ್ಯರ್ಥಿಯನ್ನು ಸೋಲಿಸಿ, ರಾಮಮಂದಿರ ನಿರ್ಮಾಣದ ಪರವಾಗಿ ಕೆಲಸ ಮಾಡುತ್ತಿದ್ದ ಕಾರ್ಯಕರ್ತರ ಮೇಲೆ ಗುಂಡುಹಾರಿಸಿ ತಡೆಯೊಡ್ಡಿದ್ದ ಪಕ್ಷದವರನ್ನು ಗೆಲ್ಲಿಸುವ ಮೂಲಕ ಅಯೋಧ್ಯಾವಾಸಿಗಳಿಗೆ 'ಕೃತಘ್ನರು' ಎನ್ನುವ ಕಳಂಕವನ್ನು ತಂದಹಾಗಾಯಿತಲ್ಲಾ ಎನ್ನುವುದು ಆ ಸಾಧುವಿನ ಸಂವೇದನೆ. ಬಿಜೆಪಿಯ ಈ ಅಪಜಯ ಇಡೀ ಜಗತ್ತಿಗೆ ಕೆಟ್ಟದೊಂದು ಸಂದೇಶವನ್ನು ರವಾನಿಸು ತ್ತದೆ ಎನ್ನುವುದು ಅವರ ಕಳಕಳಿ. ಅಯೋಧ್ಯೆಯಲ್ಲಿನ ಸೋಲು ಬಿಜೆಪಿಗೆ ಬಹುದೊಡ್ಡ ಮುಜುಗರವನ್ನು ಉಂಟು ಮಾಡಿರುವುದಂತೂ ಸತ್ಯ. ಅಲ್ಲಿನ ವಸ್ತುಸ್ಥಿತಿ ಏನಿದೆಯೋ ನನಗೆ ತಿಳಿಯದು. ಆದರೆ, ಅಭ್ಯರ್ಥಿಯ ಆಯ್ಕೆಯೂ ಸೇರಿದಂತೆ ಈ ಕ್ಷೇತ್ರದಲ್ಲಿ ಪಕ್ಷವು ಹೆಚ್ಚಿನ ಎಚ್ಚರಿಕೆ ವಹಿಸಬೇಕಾಗಿತ್ತೇನೋ ಎನ್ನುವುದು ಸಾರ್ವತ್ರಿಕವಾದ ಅಭಿಪ್ರಾಯ. ಈ ಸೋಲಿಗೆ ಬಹಳ ಕಾಲ, ಬಹಳ ಜನರಿಗೆ ಬಿಜೆಪಿ ಉತ್ತರ ನೀಡಬೇಕಾಗಿರುವುದಂತೂ ಸತ್ಯ.

ಇಂಥದ್ದೇ ಇನ್ನೊಂದು ಮುಜುಗರದ ಸಂಗತಿಯೆಂದರೆ ವಾರಾಣಸಿಯಲ್ಲಿ ನರೇಂದ್ರ ಮೋದಿಯವರ ಗೆಲುವಿನ ಅಂತರ. ಎಣಿಕೆ ಪ್ರಾರಂಭವಾದಾಗ ನರೇಂದ್ರ ಮೋದಿಯವರು ಹಿನ್ನಡೆ ಅನುಭವಿಸುತ್ತಿದ್ದಾರೆ ಎಂದು ಎಲ್ಲಾ ಮಾಧ್ಯಮಗಳಲ್ಲೂ ಬಿತ್ತರಿಸುವುದನ್ನು ನೋಡಿ ದೇಶಕ್ಕೆ ದೇಶವೇ ಅವಾಕ್ಕಾಗಿ ಹೋಯಿತು. ಕಳೆದ 10 ವರ್ಷಗಳಲ್ಲಿ ಕಾಶಿಯಲ್ಲಿ ಎಂದೂ ಕೇಳರಿಯದ ಅಭಿವೃದ್ಧಿಯನ್ನು ಮಾಡಿ ತೋರಿಸಿದ್ದ ಮೋದಿಯವರನ್ನು ಈ ಬಾರಿ 7 ಲಕ್ಷಕ್ಕಿಂತಲೂ ಅಧಿಕ ಮತಗಳಿಂದ ಗೆಲ್ಲಿಸುವುದು ಬಿಜೆಪಿಯ ಆಶಯವಾಗಿತ್ತು. ಆದರೆ, ದೇಶದ ಅತ್ಯಂತ ಜನಪ್ರಿಯ ಪ್ರಧಾನಿಯಾಗಿದ್ದವರು ಅಂತೂ ಇಂತೂ ಸುಮಾರು ಒಂದೂವರೆ ಲಕ್ಷ ಮತಗಳ ಅಂತರದಿಂದ ಪ್ರಯಾಸದ ಗೆಲುವನ್ನು ಕಾಣುವಂತಾಗಿದ್ದು ನೋಡಿದರೆ, ಕ್ಷೇತ್ರದಲ್ಲಿ ಏನೋ ಯಡವಟ್ಟಾಗಿದೆ ಎನ್ನುವುದನ್ನೂ ಮತ್ತು ಉತ್ತರ ಪ್ರದೇಶದಲ್ಲಿ ಪಕ್ಷಕ್ಕೆ ಗಂಭೀರ ಸಮಸ್ಯೆಗಳು ಎದುರಾಗಬಹುದಾದ ಮುನ್ಸೂಚನೆಯನ್ನೂ ಅದು ನೀಡುತ್ತಿದೆ ಎಂದು ಸರಳವಾಗಿ ವಿಶ್ಲೇಷಿಸಬಹುದಾಗಿದೆ. ಮೋದಿಯಂಥ ವ್ಯಕ್ತಿತ್ವಕ್ಕೆ, ಅದರಲ್ಲೂ ವಾರಾಣಸಿಯಲ್ಲಿ ಅವರಿಗೆ ಸಿಗಬೇಕಾಗಿದ್ದ ಗೌರವದ ಫಲಿತಾಂಶ ಖಂಡಿತ ಇದಾಗಿರಲಿಲ್ಲ.

ಹಾಗಾಗಿ, ಭಾರತದ ಮತದಾರನ ಇಂಗಿತವನ್ನು ಹೀಗೇ ಎಂದು ನಿರ್ಧಾರವಾಗಿ ಹೇಳುವುದು ಕಷ್ಟ ಮತ್ತು ಅವನನ್ನು ಎಂದಿಗೂ ಲಘುವಾಗಿ ಪರಿಗಣಿಸಲಾಗುವುದಿಲ್ಲ ಎನ್ನುವುದು ಈ ಸಲದ ಫಲಿತಾಂಶದಿಂದ ಮತ್ತೊಮ್ಮೆ ಸಾಬೀತಾಯಿತು. ಈ ಬಾರಿಯ ಫಲಿತಾಂಶ ಹಲವರ ಊಹೆಗಳನ್ನು ಬುಡಮೇಲು ಮಾಡಿ ಅನೇಕ ಅಚ್ಚರಿಗಳೊಂದಿಗೆ ಪ್ರಕಟವಾಗಿದೆ. ಲೋಕಸಭಾ ಚುನಾವಣಾ ಫಲಿತಾಂಶವು ಬಿಜೆಪಿ ನೇತೃತ್ವದ ಎನ್‌ಡಿಎಗೆ ಆಡಳಿತ ನಡೆಸಲು ಅವಕಾಶ ಕೊಟ್ಟರೂ, ಇದು ದುರ್ಬಲ ಜನಾದೇಶವಾಗಿದೆ ಎನ್ನುವುದು ವಿರೋಧಿಗಳ ಅಭಿಪ್ರಾಯವಾಗಿದೆ. ತನ್ನ ಭದ್ರಕೋಟೆಯಾದ ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳದಂಥ ಹಲವು ರಾಜ್ಯಗಳಲ್ಲಿ ಬಿಜೆಪಿಗೆ ನಿರೀಕ್ಷಿತ ಸಾಧನೆ ತೋರಲಾಗಲಿಲ್ಲ ಹಾಗೂ ಬೇರೆಡೆ ದೊರಕಿದ ಲಾಭಗಳು ಈ ಭದ್ರಕೋಟೆಗಳಲ್ಲಿನ ನಷ್ಟವನ್ನು ಸರಿದೂಗಿಸಲು ಬಿಜೆಪಿಗೆ ಸಾಕಾಗಲಿಲ್ಲ, ಇದು ಮೋದಿಯವರ ಪ್ರತಿಷ್ಠೆಗೆ ಹಾನಿಯುಂಟುಮಾಡಿದ ಫಲಿತಾಂಶ ಎನ್ನುವುದು ವಿರೋಧ ಪಕ್ಷಗಳ ಅದರಲ್ಲೂ ಕಾಂಗ್ರೆಸ್ಸಿನ ವಿಶ್ಲೇಷಣೆಯಾಗಿದೆ. ಪಕ್ಷದಲ್ಲಿ ಈ ಹಿಂದೆ ಗೆಲುವಿನ ಎಲ್ಲಾ ಶ್ರೇಯಸ್ಸನ್ನು ಮೋದಿಯವರಿಗೆ ನೀಡಲಾಗುತ್ತಿತ್ತು; ಈಗ ಸ್ವಂತದ ಸರಳ ಬಹುಮತವನ್ನೂ ಪಡೆಯಲು ಬಿಜೆಪಿಗೆ ಸಾಧ್ಯವಾಗದಿರುವುದು ಮೋದಿಯವರು ರಾಜಕೀಯವಾಗಿ ದುರ್ಬಲರಾಗುತ್ತಿದ್ದಾರೆ ಎನ್ನುವುದರ ಸೂಚನೆಯಾಗಿದೆ, ಹಾಗಾಗಿ ಪಕ್ಷದ ಈ ಹಿನ್ನಡೆಯ ನೈತಿಕ ಜವಾಬ್ದಾರಿ ಹೊತ್ತು ಅವರು ಪ್ರಧಾನಮಂತ್ರಿಯ ಸ್ಥಾನವನ್ನು ವಹಿಸಿಕೊಳ್ಳಬಾರದು ಎನ್ನುವುದು ಕಾಂಗ್ರೆಸ್‌ನ ವಾದ. ಈ ವಾದ ಸರಿಯೇ? ಎಂದರೆ, ಇಲ್ಲ ಅಂತಲೇ ಹೇಳಬೇಕಾಗುತ್ತದೆ. ಏಕೆಂದರೆ, 2004ರಲ್ಲಿ ಕೇವಲ 145 ಸ್ಥಾನ ಗಳಿಸಿದ್ದ ಕಾಂಗ್ರೆಸ್‌ನ ಮನಮೋಹನ್ ಸಿಂಗ್ ಅವರು ಚುನಾವಣಾಪೂರ್ವ ಮತ್ತು ಚುನಾವಣೋತ್ತರ ಮೈತ್ರಿಯ ಬಲದಿಂದ ಪ್ರಧಾನಮಂತ್ರಿಯಾಗಿ ದೇಶವನ್ನು ಮುನ್ನಡೆಸಿರಲಿಲ್ಲವೇ? 2009ರಲ್ಲೂ ಕಾಂಗ್ರೆಸ್ಸಿಗೆ ಸ್ವಂತ ಬಹುಮತ ಇರಲಿಲ್ಲ; ಅದು 206 ಸ್ಥಾನಗಳನ್ನು ಮಾತ್ರ ಗಳಿಸಿದರೂ ಸ್ಥಿರವಾಗಿ ಅಧಿಕಾರ ನಡೆಸಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬೇಕಿದೆ.



ತನ್ನದೇ ಆದ ಬಹುಮತಕ್ಕೆ ಅಲ್ಪ ಕೊರತೆಯುಂಟಾಗಿ ಈಗ ಬಿಜೆಪಿಯು ತನ್ನ ಮಿತ್ರಪಕ್ಷಗಳ ಮೇಲೆ ಹೆಚ್ಚು ಅವಲಂಬಿತವಾಗಬೇಕಾಗಿ ಬಂದಿರುವುದರಿಂದ, ತನ್ನ ನೀತಿ-ನಿಯಮಗಳನ್ನು ಈ ಮೊದಲು ಜಾರಿಗೆ ತಂದ ರೀತಿಯಲ್ಲಿ ತರಲು ಸಾಧ್ಯವಾಗಲಿಕ್ಕಿಲ್ಲ ಮತ್ತು ಮೂರನೇ ಅವಧಿಗಾಗಿ ಕಾಯ್ದಿರಿಸಿದ್ದ ತನ್ನ ಯೋಜನೆಗಳನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತರುವುದು ಬಿಜೆಪಿಗೆ ಕಷ್ಟವಾಗಬಹುದು ಎನ್ನುವ ಅನುಮಾನ ಜನರದ್ದು. ಸಮ್ಮಿಶ್ರ ಸರಕಾರದಲ್ಲಿ 'ಝುಂಡಾ' (ಪತಾಕೆ) ಮಾತ್ರ ಬಿಜೆಪಿಯದ್ದು, ಆದರೆ 'ಅಜೆಂಡಾ' ಮಾತ್ರ ಎನ್‌ಡಿಎಯದ್ದು ಎನ್ನುವಂತಾಗಿಬಿಡಬಹುದೇನೋ ಎನ್ನುವ ಆತಂಕ ಜನರಿಗಿರುವುದು ಸ್ವಾಭಾವಿಕ. 'ದೇಶದ ಸರ್ವಾಂಗೀಣ ಅಭಿವೃದ್ಧಿ ಕುರಿತಾದ ನಿಮ್ಮ ಸಂಕಲ್ಪಕ್ಕೆ ನಮ್ಮ ಸಾಥ್ ಕೊನೆಯವರೆಗೆ ಇರಲಿದೆ' ಎಂದು ಎನ್‌ಡಿಎ ಒಕ್ಕೂಟದ ಮಿತ್ರಪಕ್ಷಗಳೆಲ್ಲವೂ ಮೋದಿಯವರಿಗೆ ಹೇಳುತ್ತಿದ್ದರೂ, ಚಂದ್ರಬಾಬು ನಾಯ್ಡು ಮತ್ತು 'ಪಲ್ಟೂ ರಾಂ' ಎಂದೇ ಕುಖ್ಯಾತರಾಗಿರುವ ಬಿಹಾರದ ನಿತೀಶ್ ಕುಮಾರ್ ಅವರ ನಡೆಯ ಮೇಲೆಯೇ ಜನರಿಗೆ ಸಂದೇಹ. ಸರಳವಾದರೂ ಸ್ಪಷ್ಟ ಬಹುಮತ ಗಳಿಸಿರುವ ಎನ್‌ಡಿಎ ಒಕ್ಕೂಟಕ್ಕೆ ಸೇರಿಕೊಳ್ಳಲು ಇನ್ನೂ ಅನೇಕ ಪಕ್ಷೇತರರು ಸರತಿಯಲ್ಲಿ ನಿಂತಿರುವುದನ್ನು ನೋಡಿದಾಗ, ಸರಕಾರದ ಭದ್ರತೆಗೆ ತೊಂದರೆ ಆಗಲಿಕ್ಕಿಲ್ಲ ಎನ್ನುವುದು ವಿಶ್ಲೇಷಕರ ಅನಿಸಿಕೆಯಾಗಿದೆ.

ಆದರೂ, ಮೋದಿ-ಅಮಿತ್ ಶಾ ಜೋಡಿಯ 'ಆನೆ ನಡೆದದ್ದೇ ದಾರಿ' ಎನ್ನುವ ರಾಜಕೀಯ ಶೈಲಿಯ ಬದಲಿಗೆ ಈ ಸಲ ಬಿಜೆಪಿ ತನ್ನ ಮಿತ್ರಪಕ್ಷಗಳ ಅಭಿಪ್ರಾಯಗಳಿಗೆ ಅಗತ್ಯ ಮನ್ನಣೆ ಒದಗಿಸಿ ಸರಕಾರವನ್ನು ನಡೆಸಬೇಕಾಗುತ್ತದೆ ಎನ್ನುವ ವಾಸ್ತವವನ್ನು ಬಿಜೆಪಿಯ ಉನ್ನತ ನಾಯಕತ್ವವು ಅರಿಯಬೇಕಿದೆ. ನಿರ್ಣಾಯಕ ನಿರ್ಧಾರಗಳಲ್ಲಿ ಸಹವರ್ತಿಗಳು ತಮ್ಮ ಅಭಿಪ್ರಾಯಕ್ಕೆ ಗೌರವವನ್ನು ಅಪೇಕ್ಷೆ ಮಾಡಿಯೇ ಮಾಡುತ್ತಾರೆ. ಮಿತ್ರಪಕ್ಷಗಳಿಂದ ಬರಬಹುದಾದ ಅಸಂಗತ ಬೇಡಿಕೆಗಳನ್ನು ನಿರ್ವಹಿಸು ವುದೂ ಸವಾಲಾಗಿದ್ದು, ಮೋದಿಯವರು ಅದನ್ನು ಜಾಣ್ಮೆಯಿಂದ ನಿರ್ವಹಿಸಬೇಕಾಗುತ್ತದೆ. ಮೋದಿಯವರ ಸುದೀರ್ಘ ರಾಜಕೀಯ ಪಯಣದಲ್ಲಿನ ಅವರ ಕ್ಷಮತೆ ಯನ್ನು ಗಮನಿಸಿದರೆ ಇದು ಅವರಿಗೆ ಅಸಾಧ್ಯವಾದ ಸಂಗತಿಯೇನಲ್ಲ; ಹಾಗಾಗಿ ಸಮ್ಮಿಶ್ರ ಸ್ಥಿತಿಯ ನಡುವೆ ಯೂ ಮೋದಿಯವರು ಬಿಜೆಪಿಯ ಝುಂಡಾ ಹಾರಿ ಸುತ್ತಾ ತಮ್ಮ ಅಜೆಂಡಾವನ್ನೂ ಸಾಧಿಸಲು ಸಮರ್ಥರಿ ದ್ದಾರೆ ಎನ್ನುವ ಅಭಿಪ್ರಾಯ ಮೂಡುತ್ತದೆ. ಈ ಮೊದಲು ಭಾರತದ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಮತ್ತು ಮನಮೋಹನ್ ಸಿಂಗ್ ಅವರುಗಳು ಸಮ್ಮಿಶ್ರ ಸರಕಾರಗಳ ಯಶಸ್ವಿ ನಿರ್ವಹಣೆಗೆ ಮಾದರಿಯಾಗಿದ್ದಾರೆ. ಅವರಿಬ್ಬರೂ ತಮ್ಮ ಮಿತ್ರಪಕ್ಷಗಳ ಬಗ್ಗೆ ಹೆಚ್ಚು ಸಹನೆಯ ಮತ್ತು ಎಚ್ಚರಿಕೆಯ ವಿಧಾನ ಅನುಸರಿಸಿ, ಪೂರ್ಣಾವಧಿಯ ಸರಕಾರವನ್ನು ಯಶಸ್ವಿ ಯಾಗಿ ನಡೆಸಿ ತೋರಿಸಿದ್ದಾರೆ. ಆ ಇಬ್ಬರ ಮಾದರಿಯನ್ನು ಮೋದಿಯವರು ಈ ಬಾರಿ ಮೈಗೂಡಿಸಿಕೊಂಡು ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗಬೇಕಾಗಿದೆ. ಗೆಲುವಿನ ಸಾಧನೆಯ ಅಮಲಿನಲ್ಲಿ ತೇಲಾಡದೆ, ಪಕ್ಷದ ಭವಿಷ್ಯದ ದೃಷ್ಟಿಯಿಂದ ಮೋದಿಯವರೂ ಸೇರಿದಂತೆ ಬಿಜೆಪಿಯ ಉನ್ನತ ನಾಯಕರುಗಳು ಆತ್ಮಾವಲೋಕನ ಮಾಡಿಕೊಂಡು, ಈ ಚುನಾವಣೆಯಲ್ಲಿನ ತಪ್ಪು ನಿರ್ಧಾರಗಳಿಂದ ಪಾಠ ಕಲಿತು, ಸಂಘಟನೆಯನ್ನು ಬಲಪಡಿಸಿಕೊಳ್ಳಬೇಕಾಗಿದೆ ಎನ್ನುವುದನ್ನು ಈ ಚುನಾವಣಾ ಫಲಿತಾಂಶದಿಂದ ಮನಗಾಣಬೇಕಾಗಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಪ್ರದೀಪ್ ಈಶ್ವರ್ ಅಲ್ಲ ಮೇರೆ ನಾಮ್

ಸಿನಿಗನ್ನಡ

ತುಂಟರಗಾಳಿ

ಹರಿ ಪರಾಕ್
vveditoped@gmail.com

ಚಿತ್ರರಂಗದಲ್ಲಿ ಆಗಾಗ ಸದ್ದು ಮಾಡೋ ಕಾಯಿಲೆ ಇದು. ಇದನ್ನು ಕಾಯಿಲೆ ಅನ್ನೋದೋ ಅಥವಾ ಖಯಾಲಿ ಅನ್ನೋದೋ ಗೊತ್ತಾಗ್ತಿಲ್ಲ. ಆದ್ರೆ, ಇತ್ತೀಚಿನ ಬಾಯ್ಕಾಟ್ ಸಂಸ್ಕೃತಿಯ ಜತೆಗೆ ಈಗ ನಮ್ಮ ಭಾವನೆಗಳಿಗೆ ಧಕ್ಕೆ ಬಂದಿದೆ ಅಂತ ಸಿನಿಮಾಗಳಿಗೆ ಕೊಕ್ಕೆ ಹಾಕುವ ಮನಸ್ಥಿತಿಗಳು ಜಾಸ್ತಿ ಆಗುತ್ತಿವೆ. ಇದಕ್ಕೆ ಕಾರಣ ರಾಜಕೀಯ ಅಂದ್ರೆ ತಪ್ಪಿಲ್ಲ. ಚಿತ್ರರಂಗದಲ್ಲಿ ಪೊಲಿಟಿಕಲ್ ಸಿನಿಮಾಗಳು ಬರೋದು ಕಾಮನ್. ಆದರೆ ಸಿನಿಮಾಗಳಿಗೇ ಪೊಲಿಟಿಕಲ್ ಆಂಗಲ್ ಬರ್ತಾ ಇರೋದು ಇತ್ತೀಚಿನ ಕೆಟ್ಟ ಬೆಳವಣಿಗೆ. ಇಲ್ಲಿ ಗಮನಿಸಬೇಕಾದ ಅಂಶಗಳು ಅಂದ್ರೆ ಇವ್ಯಾವೂ ಒಳ್ಳೆಯ ಉದ್ದೇಶದಿಂದ ಅಥವಾ ನಿಜವಾದ ಭಾವನೆಗಳಿಗೆ ಧಕ್ಕೆ ತರೋ ಸಂಗತಿಗಳಲ್ಲ, ಬದಲಾಗಿ ಚಿತ್ರಕ್ಕೆ ಸಂಬಂಧಪಟ್ಟ ಯಾರಾದರೂ ಒಂದು ರಾಜಕೀಯ ಪಂಗಡದ ಪರ ಮಾತಾಡಿದರೆ ಅವರ ವಿರೋಧಿ ಪಕ್ಷಗಳು ಬೇಕೆಂತಲೇ ಮಾಡುತ್ತಿರುವ ಬೃಹನ್ನಾಟಕಗಳು ಇವು. ಮಾತೆತ್ತಿದರೆ ಅವರಿಗೆ ಅವಮಾನ ಆಗಿದೆ, ಇವರಿಗೆ ಅವಮಾನ ಆಗಿದೆ ಅಂತ ಕುಂಟುನೆಪ ಹೂಡಿ ಸಮಾಜದ ಆರೋಗ್ಯ ಕೆಡಿಸುವ ಪ್ರಯತ್ನಗಳು ಇವು. ಇದು ತೀರಾ ವೈಯಕ್ತಿಕ ಮಟ್ಟಕ್ಕೆ ಇಳಿದು ತುಂಬಾ ಕೀಳಾಗಿ ವರ್ತಿಸುತ್ತಿ ರುವ ಅನೇಕ ಉದಾಹರಣೆಗಳನ್ನು ನಾವು ಇಂದು ನೋಡಬೇಕಾಗಿರೋದು ದುರದೃಷ್ಟಕರ. ಇದರಿಂದ ಕೋಟಿ ಗಟ್ಟಲೆ ಹಣ ಹಾಕಿ ಸಿನಿಮಾ ಮಾಡುವ ಮಂದಿ ಈಗ 'ಏನಾದರೂ ಮಾಡು, ಮೊದಲು ಸಿನಿಮಾನ ಸಿನಿಮಾ ಥರ ನೋಡು' ಅಂತ ಇಂಥ ಕಿರಿಕ್ ಪಾರ್ಟಿ ಗಳಿಗೆ ಹೇಳಬೇಕಾಗಿರೋ ಪರಿಸ್ಥಿತಿ ಬಂದಿದೆ. ಇಂಥ ಬೆಳವಣಿಗೆಗಳನ್ನು ನೋಡಿದಾಗ ಒಮ್ಮೊಮ್ಮೆ, ಸರಿಯೋ ತಪ್ಪೋ, ಸಿನಿಮಾ ಅನ್ನೋದು ನಿರ್ದೇಶಕರ ಸ್ವಾತಂತ್ರ್ಯ, ಅವರಿಗೆ ಇಷ್ಟ ಆಗಿದ್ದನ್ನು ಅವರು ಮಾಡ್ತಾರೆ, ನಿಮಗೆ ಇಷ್ಟ ಇದ್ರೆ ನೋಡಿ, ಇಲ್ಲಾಂದ್ರೆ ಬಿಡಿ ಅನ್ನೋ ಕಾನೂನು ಬಂದ್ರೆ ಒಳ್ಳೆಯದು ಅನ್ನಿಸೋದು ನಿಜ.

ಲೂಸ್ ಟಾಕ್

ಪ್ರದೀಪ್ ಈಶ್ವರ್

- **ಸುಧಾಕರ್ ಗೆದ್ರೆ ರಾಜೀನಾಮೆ ಕೊಡ್ತೀನಿ ಅಂದಿದ್ರಿ. ಈಗೇನಾಯ್ತು?**

– ಏನೋ ಜೋಷ್‌ನಲ್ಲಿ 'ಸುಧಾಕರ್ ಗೆದ್ರೆ ಪ್ರದೀಪ್ ಈಶ್ವರ್ ಅಲ್ಲ ಮೇರೆ ನಾಮ್' ಅನ್ನೋ ಥರ ಮಾತಾಡಿದ್ದೆ ಬಿಡ್ರಿ.

- **ಆದ್ರೂ ಸ್ಪೀಕರ್‌ಗೆ ರಾಜೀನಾಮೆ ಕಳಿಸಿದ್ರಿ ಅಂತ ಸುದ್ದಿ ಇದೆಯಲ್ಲ?**

– ನಾನು ಸ್ಪೀಕರ್‌ಗೆ ಕಳಿಸಿದ್ದೆ. ಆದ್ರೆ ಅವರು ಸ್ಪೀಕರ್, ಲಿಸನರ್ ಅಲ್ಲ, ಹಂಗಾಗಿ ನನ್ನ ಮಾತು ಕೇಳಲಿಲ್ಲ

- **ಆದ್ರೂ ಇವೆಲ್ಲ ಬೇಕಿತ್ತಾ ನಿಮಗೆ?**

– ಏನ್ ಮಾಡೋದು ಬ್ಯಾಡ್ ಟೈಮ್. ಈಶ್ವರ್ ಅನ್ನೋ ಹೆಸರಲ್ಲೇ ಸಮಸ್ಯೆ ಇದೆ. ಈಶ್ವರಪ್ಪನವರ ಥರ ಈ ಪ್ರದೀಪ್ ಈಶ್ವರ್‌ದೂ ಮರ್ಯಾದೆ ಹೋಯ್ತು.

- **ಈ ವಿಷಯದಿಂದ ನಿಮ್ಮನ್ನು ಆಡಿಕೊಳ್ಳೋರಿಗೆ ಇನ್ನೂ ಜಾಸ್ತಿ ಚಾನ್ಸ್ ಕೊಟ್ಟ ಹಾಗಾಗಲಿಲ್ವಾ?**

– ನಿಜ. ಆದ್ರೆ, ಜನ 'ನೀಟ್' ಆಗಿ 'ಪರಿಶ್ರಮ' ಪಟ್ಟು ಬೆಳೆದಿರೋರನ್ನ ಆಡಿಕೊಳ್ಳೋದು ಕಾಮನ್ ಅಲ್ವಾ. ಹೋಗ್ಲಿ ಬಿಡಿ.

- **ಸರಿ, ಮುಂದಿನ ಸಲ ಮೋದಿ ಚುನಾವಣೆಯಲ್ಲಿ ಗೆಲ್ತಾರಾ ಇಲ್ವಾ?**

– ಸುಮ್ನೆ ಇರ್ಬೇಕೀಗ ಅಷ್ಟೇ. ನಾನು ಭವಿಷ್ಯ ಹೇಳೋದೆಲ್ಲ ಬಿಟ್ಟಿದ್ದೀನಿ ಈಗ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮುನ ಮಾವ ಫುಲ್ ಸೀರಿಯಸ್ ಆಗಿ ಆಸ್ಪತ್ರೆಗೆ ಅಡ್ಮಿಟ್ ಆಗಿದ್ರು. ಅವರನ್ನು ನೋಡಿದ ಎಲ್ಲಾ ಡಾಕ್ಟರ್‌ಗಳೂ ಅವರು ಬದುಕೋ ಯಾವ ಸಾಧ್ಯತೆಗಳೂ ಇಲ್ಲ ಅಂತ ಹೇಳಿದ್ರು. ಅಲ್ಲದೆ, ಪೇಷೆಂಟ್ ಪರಿಸ್ಥಿತಿ ಗಂಭೀರವಾಗಿದ್ದುದರಿಂದ ಯಾವ ಡಾಕ್ಟರ್ ಕೂಡ ಆಪರೇಷನ್ ಮಾಡಲು ಮುಂದೆ ಬರಲಿಲ್ಲ. ಅಳಿಯ ಖೇಮು ಕೂಡ ಸ್ವತಃ ಡಾಕ್ಟರ್ ಆಗಿದ್ದ. ಹಾಗಾಗಿ ಖೇಮು ಆಗಿದ್ದಾಗ್ಲಿ ಒಂದ್ ಕೈ ನೋಡೇಬಿಡೋಣ ಅಂತ ಆಪರೇಷನ್ ಮಾಡಲು ತಯಾರಾದ. ಆಪರೇಷನ್‌ಗೆ ಮುಂಚೆ ಮಂಚದ ಮೇಲೆ ಮಲಗಿದ್ದ ಖೇಮು ಮಾವ ಆಪರೇಷನ್ ಥೇಂಬರ್‌ಗೆ ಬಂದ ಖೇಮುವನ್ನು ನೋಡಿ ಸನ್ನೆ ಮಾಡಿ, ನಿನ್ನ ಬಳಿ ಏನೋ ಹೇಳಬೇಕು ಹತ್ತಿರ ಬಾ ಅಂತ ಕರೆದ್ರು, ಖೇಮು ಹೋದ. ಖೇಮುನ ಕಿವಿಯಲ್ಲಿ ಅವನ ಮಾವ ಏನೋ ಹೇಳಿದ್ರು. ಸರಿ ಆಪರೇಷನ್ ಶುರುವಾಯ್ತು, ಸತತ ನಾಲ್ಕು ತಾಸು ಆಪರೇಷನ್ ನಡೆಯಿತು. ಏನೇ ಆದ್ರೂ ರೋಗಿ ಬದುಕೋಲ್ಲ ಅಂದಿದ್ದ ಡಾಕ್ಟರ್‌ಗಳಿಗೆಲ್ಲಾ ಅಚ್ಚರಿ ಎಂಬಂತೆ ಆಪರೇಷನ್ ಸಕ್ಸಸ್‌ಫುಲ್! 'ಇದೊಂದು ವೈದ್ಯಲೋಕದ ವಿಸ್ಮಯ' ಎಂದರು ಅವರೆಲ್ಲ. ನಿರಾಳವಾಗಿ ಆಪರೇಷನ್ ಕೋಣೆಯಿಂದ ಹೊರಬಂದ ಖೇಮುವನ್ನು 'ಇದೆಲ್ಲಾ ಹೇಗಾಯ್ತು. ನಿಮ್ಮ ಮಾವ ಆಪರೇಷನ್‌ಗೆ ಮುಂಚೆ ನಿಮ್ಮ ಕಿವಿಯಲ್ಲಿ ಏನೋ ಹೇಳಿದ್ರಂತೆ, ಏನು ಹೇಳಿದ್ರು,' ಅಂತ ಕೇಳಿದ್ರು ಆಸ್ಪತ್ರೆಯ ಸೀನಿಯರ್ ಡಾಕ್ಟರ್ಸ್. ಅದಕ್ಕೆ ಖೇಮು ಹೇಳಿದ 'ಮಾವ ಹೇಳಿದ್ದು ಇಷ್ಟೆ, ನೋಡಪ್ಪ ಅಳೀಮಯ್ಯ, ನಾನು ನಿಮ್ಮ ಮಾವ ಅಂತ ನರ್ವಸ್ ಆಗ್‌ಬೇಡ. ಧೈರ್ಯವಾಗಿ ನಿನ್ ಕೆಲಸ ನೀನು ಮಾಡು, ಉಳಿದಿದ್ದು ದೇವರಿಗೆ ಬಿಟ್ಟಿದ್ದು. ಆದ್ರೆ, ಒಂದ್ ಮಾತ್ ನೆನಪಿಟ್ಕೋ, ನಿಮ್ಮತ್ತೆಗೆ ನನ್ನ ಬಿಟ್ರೆ ಯಾರೂ ಇಲ್ಲ; ನಾನು ಹೆಚ್ಚುಕಮ್ಮಿ ಆಗಿ ಸತ್ತುಹೋದ್ರೆ, ಅವಳು ನಿಮ್ಮ ಮನೆಯಲ್ಲೇ ಒಂದು ಇರ್ತಾಳೆ, ಅವಳನ್ನ ಚೆನ್ನಾಗಿ ನೋಡ್ಕೊಳಪ್ಪಾ'.

ಮನಸ್ಸು ಮಾಡಿದರೆ ಗೆಲ್ಲಲಿಕ್ಕೆ ಸಾಧ್ಯ

ಒತ್ತಡಮಯವಾಗಿರುವ ಇಂದಿನ ದಿನಮಾನದಲ್ಲಿ ಸಮಚಿತ್ತದಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕಿದೆ. ಸಂಕಷ್ಟಕಾಲ ಯಾವಾಗ ಬರುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಯುದ್ಧದಲ್ಲಿ ಮೆಲ್ ಗಿಬ್ಸನ್‌ನಂತೆ ಮಾಂಸದ ಮುದ್ದೆಯಾಗಿರುವ ಮಂದಿ ಅದೆಷ್ಟೋ?

ಆಶಾಕಿರಣ

ಮಿರ್ಲೆ ಚಂದ್ರಶೇಖರ
vveditoped@gmail.com

ಐವತ್ತೈದು ವರ್ಷಗಳ ಹಿಂದೆ ಅಮೆರಿಕದ ನ್ಯೂಯಾರ್ಕ್‌ನಲ್ಲಿ ಇದ್ದ ಒಂದು ಕುಟುಂಬ ಜೀವನೋಪಾಯಕ್ಕಾಗಿ ಆಸ್ಟ್ರೇಲಿಯಾದ ಸಿಡ್ನಿಗೆ ತೆರಳಿತು. ಹನ್ನೊಂದು ಮಕ್ಕಳಿದ್ದ ಆ ಕುಟುಂಬದಲ್ಲಿ ಆರನೇ ಮಗನಿಗೆ 12 ವರ್ಷ. ಸುಂದರನೂ ಸಾಹಸಿಯೂ ಆಗಿದ್ದ ಆ ಹುಡುಗ ಸಿನಿಮಾ ಅಥವಾ ಸರ್ಕಸ್ ಕಲಾವಿದನಾಗಬೇಕೆಂಬ ಬಯಕೆಯುಳ್ಳವನಾಗಿದ್ದ.

ಒಂದು ಸಂಜೆ, ನಿರ್ಜನವಾದ ಪ್ರದೇಶದ ಮೂಲಕ ಆತ ಮನೆಯ ಕಡೆಗೆ ನಡೆದು ಹೋಗುವಾಗ ಐದು ಜನ ಕಳ್ಳರು ಹಣಕ್ಕಾಗಿ ಅವನ ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿದರು. ಹುಡುಗ ಸಾಹಸಿಗನಾಗಿದ್ದುದರಿಂದ ಹಣ ಕೊಡದೆ ಹೋರಾಡಿದ. ಆದರೆ ಕಳ್ಳರು ಮುಖಮೂತಿ ನೋಡದೆ ಆ ಹುಡುಗನ ದೇಹದೆಲ್ಲೆಡೆ ಮಾರಣಾಂತಿಕವಾಗಿ ಚುಚ್ಚಿದರು, ಸತ್ತಿರಬಹುದೆಂದು ಅಲ್ಲೇ ಬಿಟ್ಟುಹೋದರು. ಕೆಲ ಹೊತ್ತಿನ ನಂತರ ಅಲ್ಲಿಗೆ ಬಂದ ಗಸ್ತು ತಿರುಗುತ್ತಿದ್ದ ಪೊಲೀಸರು, ರಸ್ತೆಯಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಆತನನ್ನು ಹೆಣವೆಂದು ಭಾವಿಸಿ ಶವಾಗಾರಕ್ಕೆ ತೆಗೆದುಕೊಂಡುಹೋದರು. ಸತ್ತಂತೆ ಇದ್ದ ದೇಹವನ್ನು ಪರೀಕ್ಷಿಸಿದ ವೈದ್ಯರು ಅದರಲ್ಲಿ ಅಲ್ಪಸ್ವಲ್ಪ ಪ್ರಾಣವಿರುವುದನ್ನು ಮನಗಂಡರು. ಆದರೆ ವಿರೂಪಗೊಂಡು ರಕ್ತಮಯವಾಗಿದ್ದ ಅವನ ಸ್ಥಿತಿಯನ್ನು ನೋಡಿ ಹೊಸ ನರ್ಸ್ ಒಬ್ಬಳು ಮೂರ್ಛೆ ಹೋದಳು.

ಜಜ್ಜಿಹೋಗಿದ್ದ ಅವನ ಮುಖವು ಮುಖವಾಗಿರಲಿಲ್ಲ, ಸೋರುತ್ತಿದ್ದ ರಕ್ತದಿಂದ ಕೂಡಿದ ಮಾಂಸದ ಮುದ್ದೆಯಾಗಿತ್ತು. ಮೂಗು ನೇತಾಡುತ್ತಿತ್ತು, ಹಲ್ಲುಗಳೆಲ್ಲ ಉದುರಿ ಹೋಗಿ ದವಡೆಯು ಬುರುಡೆಯಿಂದ ಬೇರ್ಪಟ್ಟಿತ್ತು. ಒಂದು ಕಣ್ಣು ಸಂಪೂರ್ಣವಾಗಿ ನಾಶವಾಗಿ ಗೂಡಿನಿಂದ ಹೊರಬಂದಿತ್ತು. ಕೈಕಾಲುಗಳ ಮೂಳೆ ಮುರಿದಿತ್ತು. ಆಸ್ಪತ್ರೆಯಲ್ಲಿ ನುರಿತ ವೈದ್ಯರಿಂದ ವರ್ಷಗಟ್ಟಲೆ ಚಿಕಿತ್ಸೆ ಪಡೆದ ತರುವಾಯ, ಆತನ ಸ್ಥಿತಿ ಸುಧಾರಿಸಿತು. ಆದರೆ ನೋಡಲು ಕುರೂಪಿಯಾಗಿ ಮಾರ್ಪಟ್ಟಿದ್ದ. ಅವನಿಗೆ ಒಂದು ಕಣ್ಣಿರಲಿಲ್ಲ, ಹಲ್ಲುಗಳಿರಲಿಲ್ಲ. ಅವನೊಂದು ಚಲಿಸುವ ಮಾಂಸದ ಮುದ್ದೆಯಂತಿದ್ದ.

ಕುರೂಪಿಯಾಗಿದ್ದ ಅವನನ್ನು ನೋಡಲು ಜನರು ಹೆದರುತ್ತಿದ್ದರು, ಅವನ ಭಯಂಕರ ಆಕೃತಿಯು ನೋಡುಗರಲ್ಲಿ ಮೈನಡುಕವನ್ನು ಹುಟ್ಟಿಸುತ್ತಿತ್ತು. ಈ ಕಾರಣದಿಂದಾಗಿ ಅವನಿಗೆ ಎಲ್ಲೂ ಕೆಲಸ ಸಿಗಲಿಲ್ಲ. ಕೊನೆಗೆ ಬಾಲ್ಯದಲ್ಲಿ ಆಸೆ ಪಟ್ಟಿದ್ದಂತೆ ಸರ್ಕಸ್ ಒಂದರಲ್ಲಿ ಅವನಿಗೆ ಆಶ್ರಯ ಸಿಕ್ಕಿತು; ಅಲ್ಲಿಯೇ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ದಿನದೂಡತೊಡಗಿದ. ಪ್ರೇಕ್ಷಕರಿಗೆ ಅವನನ್ನು A Man with no face ಎಂದು ಪರಿಚಯಿಸುತ್ತಿದ್ದರು, ಅಲ್ಲಿ ಮನುಷ್ಯನೆಂದು ಯಾರೂ ಗುರುತಿಸುತ್ತಿರಲಿಲ್ಲ. ತಿನ್ನಲು ಸರಿಯಾದ ಊಟವಿರಲಿಲ್ಲ, ಸಿಕ್ಕರೂ ಅದನ್ನು ತಿನ್ನಲು ಬಾಯಲ್ಲಿ ಹಲ್ಲುಗಳಿರಲಿಲ್ಲ. ಹಲ್ಲುಗಳನ್ನು ಕಟ್ಟಿಸಿಕೊಳ್ಳಲು ಅವನ ಬಳಿ ಹಣವಿರಲಿಲ್ಲ.

ಹೀಗೆ ಸಮಸ್ಯೆಗಳು ಹೇರಳವಾಗಿದ್ದರೂ ಆತ ಚಿಕ್ಕಂದಿನ ಅಭ್ಯಾಸಗಳನ್ನು ಬಿಡದೆ ಪಾಲಿಸಿಕೊಂಡು ಬರುತ್ತಿದ್ದ. ಬಿಡುವು ಸಿಕ್ಕಾಗಲೆಲ್ಲಾ ಚರ್ಚ್‌ಗೆ ಹೋಗಿ ಗಂಟೆಗಟ್ಟಲೆ ಕುಳಿತು ಧ್ಯಾನದಲ್ಲಿ ತಲ್ಲೀನನಾಗುತ್ತಿದ್ದ. ತಾನು ದುಡಿದಿದ್ದರಲ್ಲಿ ದಾನ-ಧರ್ಮಗಳನ್ನು ಮಾಡುತ್ತಿದ್ದ. ಒಂದೆರಡು ವರ್ಷ ಹೀಗೆಯೇ ಅವನ ಜೀವನ ಕಳೆಯಿತು. ನಿತ್ಯವೂ ಬರುತ್ತಿದ್ದ ಚರ್ಚ್‌ನ ಫಾದರ್‌ರವರು ಅವನ್ನು ನೋಡುತ್ತಿದ್ದರು; ಮನುಷ್ಯ ಸ್ವರೂಪವನ್ನು ಕಳೆದುಕೊಂಡರೂ ಕಷ್ಟದಿಂದ ಬದುಕು ಸಾಗಿಸುತ್ತಿದ್ದ ಅವನ ಮೇಲೆ ಅವರಿಗೆ ಅನುಕಂಪ ಹುಟ್ಟಿತು. ಅವನಿಗೆ ಏನಾದರೂ ಸಹಾಯ ಮಾಡಬೇಕೆಂಬ ಮನಸ್ಸಾಯಿತು. ಇದರನ್ವಯ ಆಸ್ಟ್ರೇಲಿಯಾದ ಪ್ರತಿಭಾವಂತ ಪ್ಲಾಸ್ಟಿಕ್ ಸರ್ಜನ್ ಹಾಗೂ ಡೆಂಟಿಸ್ಟ್‌ರಿಂದ ಅವನಿಗೆ ಚಿಕಿತ್ಸೆ ಕೊಡಿಸಿದರು.

ಆರು ತಿಂಗಳ ಕಾಲ ಎಂಟು ಆಪರೇಷನ್ ನಡೆಯಿತು. ಕಳಚಿ ಬಿದ್ದಿದ್ದ ಕಣ್ಣಿಗೆ ಬದಲಾಗಿ ವೈದ್ಯರು ಗಾಜಿನ ಕಣ್ಣನ್ನು ಅಳವಡಿಸಿದರು. ದವಡೆಯ ವಕ್ರತೆಯನ್ನು ಸರಿಪಡಿಸಿ ಮನುಷ್ಯಮುಖದ ರೂಪವನ್ನು ನೀಡಿದರು. ದಿನಗಳೆದಂತೆ ಅವನ ಒಟ್ಟಾರೆ ದೇಹಕ್ಕೆ ಮನುಷ್ಯನ ಆಕಾರ ಬಂತು. ಬದುಕಿನಲ್ಲಿ ಆಗಬೇಕಿರುವ ಮದುವೆ-ಮಕ್ಕಳೂ ಆದವು. ಚರ್ಚ್‌ನ ಫಾದರ್‌ರವರ ಹೃದಯವೈಶಾಲ್ಯದಿಂದ ಮರುರೂಪ ಪಡೆದ ಆ ಮನುಷ್ಯನನ್ನೇ ಕಥಾನಾಯಕನನ್ನಾಗಿಸಿ, ಅವನದೇ ಕಥೆಯನ್ನಾಧರಿಸಿ A Man without a face ಎಂಬ ಹೆಸರಿನ ಸಿನಿಮಾವನ್ನು ತೆಗೆಯಲಾಯಿತು. ಅದು ಆ ಕಾಲಕ್ಕೆ ಸೂಪರ್‌ಹಿಟ್ ಆಯಿತು. ನಂತರ ಒಂದರ ಹಿಂದೆ ಒಂದರಂತೆ ಸಾಲಾಗಿ ಸೂಪರ್-ಡ್ಯೂಪರ್ ಹಿಟ್ ಸಿನಿಮಾಗಳು ಬಂದವು. Summer City, Tim, The Hero, Mad Max, Brave Heart, Lethal Weapon ಹೀಗೆ ಐವತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಆತ ನಾಯಕನಾಗಿ ನಟಿಸಿದ. The Passion of Christ ಅವನೇ ನಿರ್ದೇಶಿಸಿದ ಸಿನಿಮಾ. Brave Heart ಸಿನಿಮಾದಲ್ಲಿ ನಿರ್ಮಾಪಕ, ನಿರ್ದೇಶಕ ಮತ್ತು ನಾಯಕನಟ ಎಲ್ಲವೂ ಇವನೇ.

ಈಗ ಬಹುಶಃ ಕೆಲವರಿಗೆ ಈ ನಾಯಕನಾರೆಂದು ಗೊತ್ತಾಗಿರಬೇಕು; ಹೌದು, ಇವನೇ ಹಾಲಿವುಡ್‌ನ ಪ್ರತಿಷ್ಠಿತ ನಟರುಗಳ ಸಾಲಿನಲ್ಲಿ ಹೆಸರುಗಳಿಸಿ ಮುಂಚೂಣಿಯಲ್ಲಿದ್ದ ಮೆಲ್ ಗಿಬ್ಸನ್. ಪ್ರಸ್ತುತ ಇವನ ಆಸ್ತಿಯ ಅಂದಾಜುಮೌಲ್ಯ 425 ಮಿಲಿಯನ್ ಡಾಲರ್ (3,237 ಕೋಟಿ ರುಪಾಯಿ). ಮೆಲ್ ಗಿಬ್ಸನ್‌ಗೆ ಈಗ ಅರವತ್ತೇಳು ವರ್ಷ. ಗಳಿಕೆಯಲ್ಲಿ ಕುಬೇರನಾಗಿರುವ ಇವನು ಹಿಂದಿನಂತೆ ಈಗಲೂ ಚರ್ಚ್ ಹತ್ತಿರ ದಾನ-ಧರ್ಮಗಳನ್ನು ಮಾಡುತ್ತಿರುತ್ತಾನೆ.



ಅಮೆರಿಕದ ನ್ಯೂಯಾರ್ಕ್‌ನ ಪೀಕ್‌ಸ್ಕಿಲ್‌ನಲ್ಲಿ 1956ರ ಜನವರಿ 3ರಂದು ಹುಟ್ಟನ್ ಗಿಬ್ಸನ್ ಮತ್ತು ಆ್ಯನ್ನೆ ಪ್ಯಾಟ್ರಿಷಿಯಾ ದಂಪತಿಯ ಮಗನಾಗಿ ಹುಟ್ಟಿ, ತನ್ನ 12ನೇ ವಯಸ್ಸಿಗೆ ಹೆತ್ತವರೊಂದಿಗೆ ಆಸ್ಟ್ರೇಲಿಯಾಕ್ಕೆ ಬಂದ ಇವನಿಗೆ 9 ಮಕ್ಕಳು. ಇವರಲ್ಲಿ ಮಿಲೋ ಗಿಬ್ಸನ್ ಎಂಬ ಮಗನೂ ಇದ್ದು, ಈತನೂ ತಂದೆಯಂತೆಯೇ ಸಿನಿಮಾ ನಟ. ಸಹೋದರಿಯ ಒತ್ತಾಸೆಯಿಂದ ಮೆಲ್ ಗಿಬ್ಸನ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡ್ರಾಮಾಟಿಕ್ ಆರ್ಟ್‌ನಲ್ಲಿ ಕಲಿತವನಾಗಿದ್ದರಿಂದ ನಟನೆ ಸಲೀಸಾಯಿತು. ಮೆಲ್ ಗಿಬ್ಸನ್‌ಗೆ ಗಣನೀಯ ಸಂಖ್ಯೆಯಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳು ದೊರೆತಿವೆ; ಅವನ್ನು ಪಟ್ಟಿಮಾಡುತ್ತಾ ಹೋದರೆ ಲೇಖನದ ಬದಲಾಗಿ ಪುಸ್ತಕವನ್ನೇ ಬರೆಯಬೇಕಾದೀತು. ಇಲ್ಲಿ ಹೆಸರಿಸಬಹುದಾದ ಹಾಗೂ ಯಾರೂ ಊಹಿಸಲಾಗದಿದ್ದ ಒಂದು ಪ್ರಶಸ್ತಿಯೆಂದರೆ 1985ರಲ್ಲಿ ದಕ್ಕಿದ 'Sexiest Man Alive' ಎಂಬ ಗೌರವ. ಜನರೇ ಇದನ್ನು ನೀಡಿದ್ದು. ದೇಹವೆಲ್ಲ ಛಿದ್ರಛಿದ್ರವಾಗಿ ಮಾಂಸದ ಮುದ್ದೆಯಂತಾಗಿದ್ದ ಕುರೂಪಿ ಮನುಷ್ಯನೊಬ್ಬ ಮುಂದೆ ಹಾಲಿವುಡ್ ಅನ್ನು ಪ್ರವೇಶಿಸಿ ಹೀಗೆ 'ಸೆಕ್ಸಿಯೆಸ್ಟ್ ಮ್ಯಾನ್' ಎಂದು ಜನರಿಂದ ಕರೆಸಿಕೊಳ್ಳುವುದು ಸುಲಭದ ಸಾಧನೆಯೇನಲ್ಲ, ಎಂಥದ್ದೇ ಕಷ್ಟದ ಪರಿಸ್ಥಿತಿಗಳು ಬರಲಿ, ಅವುಗಳನ್ನು ಮೆಲ್ ಗಿಬ್ಸನ್‌ನಂತೆ ಎದುರಿಸಿ ನಿಲ್ಲುವುದೇ 'ಮನೋಧೈರ್ಯ'.

ಡಿಸೆಂಬರ್ 2019-2022ರ ಅವಧಿಯಲ್ಲಿ ಕೊರೊನಾ ಪಿಡುಗಿನ ಕರ್ಕಶ ಸದ್ದು ವಿಶ್ವದ ಮೂಲೆಮೂಲೆಗಳಲ್ಲಿ ಅಬ್ಬರಿಸಿ ಬೊಬ್ಬಿರಿದಿದ್ದು ಗೊತ್ತಿರುವಂಥದ್ದೇ. ಟಿವಿ ನೋಡಲಿ, ಪತ್ರಿಕೆಗಳನ್ನು ಓದಲಿ, ಸ್ನೇಹಿತರೊಟ್ಟಿಗೆ ಮಾತನಾಡಲಿ ಎಲ್ಲರಲ್ಲೂ ಕೊರೊನಾ... ಕೊರೊನಾ ಎಂಬ ವಿಷಯವೊಂದೇ! ಇದು ಕೇಳುವುದಕ್ಕೆ ಹೊಸದಾಗಿದ್ದರೂ ಪ್ರಪಂಚದ 800 ಕೋಟಿ ಮಂದಿ ಬೆಚ್ಚಿ ಬೀಳುವ ಶಬ್ದವಾಗಿತ್ತು. ಸದ್ಯ ವಾಹಿನಿಗಳಲ್ಲಿ ಕೊರೊನಾ ಸುದ್ದಿಗಳು ಸತ್ತಿವೆ, ವೈಭವೀಕರಿಸಿ ಬಿತ್ತರಿಸಲು ಇತರೆ ವಿಷಯಗಳಿವೆ; ಒಂದೊಮ್ಮೆ ಇಲ್ಲದಿದ್ದರೆ ರೋಚಕ ವಿಷಯಗಳನ್ನು ಹುಡುಕಿ ಪ್ರಸಾರ ಮಾಡಲಾಗುತ್ತದೆ. ಅಪಘಾತಗಳು ಹಾಗೂ ಅವುಗಳಿಂದ ಆಗುವ ಸಾವು-ನೋವುಗಳ ಸುದ್ದಿಗಳು ಮಾಧ್ಯಮಗಳಲ್ಲಿ ಇಲ್ಲದ ದಿನವೇ ಇಲ್ಲ. ಜೀವನದಲ್ಲಿ ಅನಿರೀಕ್ಷಿತವಾಗಿ ಉದ್ಭವಿಸುವ ಸಮಸ್ಯೆಗಳನ್ನು ಎದುರಿ ಸಲು ಸಾಧ್ಯವಾಗದೆ ಜೀವನವನ್ನೇ ಅಂತ್ಯಗೊಳಿಸಿಕೊಳ್ಳು ವವರ ಉದಾಹರಣೆಗಳೂ ಇದರಲ್ಲಿ ಸೇರಿರುತ್ತವೆ. ಬದುಕಿನಲ್ಲಿ ನೊಂದು-ಬೆಂದ ಇಂಥವರಿಗೆ, ಮತ್ತೆ ಮೇಲೇಳಲಾಗದ ಸ್ಥಿತಿಯಲ್ಲಿ ಇರುವವರಿಗೆ ಮೆಲ್ ಗಿಬ್ಸನ್‌ನ ಬದುಕು ಪ್ರೇರೇಪಣೆ ನೀಡಬಲ್ಲದು. ಬದುಕಿ ಏನನ್ನಾದರೂ ಸಾಧಿಸಬಹುದು ಎಂಬ ಆಸೆಯನ್ನು ಚಿಗುರಿಸಬಲ್ಲದು. ಕಿಡಿಗೇಡಿಗಳಿಂದ ದಾಳಿಗೊಳಗಾಗಿ ಅಕ್ಷರಶಃ ಮಾಂಸದ ಮುದ್ದೆಯೇ ಆಗಿಬಿಟ್ಟಿದ್ದ ಮೆಲ್ ಗಿಬ್ಸನ್, ಯಾರೂ ಊಹಿಸದ ಮಟ್ಟಕ್ಕೆ ಏರಿದನೆಂದರೆ ನಾವೇಕೆ ಸಣ್ಣಪುಟ್ಟ ಸಂಗತಿಗಳಿಗೆ ಹೆದರಬೇಕು? ಬಹುತೇಕ ಸಂದರ್ಭಗಳಲ್ಲಿ, ನಮಗೆದುರಾಗುವ ಕಷ್ಟಗಳಿಗೆ ಅಥವಾ ರೋಗಗಳಿಗೆ ನಮ್ಮ ಮನೆಗಳಲ್ಲೇ, ನಮ್ಮ ಕೈಗಳಲ್ಲೇ ಔಷಧವಿರುತ್ತದೆ. ಅದನ್ನು ಹೇಗೆ ಉಪಯೋಗಿಸಬೇಕು ಎಂಬುದನ್ನು ನಾವು ಅರಿಯಬೇಕಷ್ಟೇ. ಅಂಥ ಅರಿವಿನ ಕೊರತೆಯಿದ್ದವರಿಗೆ, ತಳಮಟ್ಟದಿಂದ ಎದ್ದು ನಿಂತ ಸಾಧಕರ ಜೀವನವು ತಿಳಿವಳಿಕೆ ನೀಡುತ್ತದೆ.

ಒತ್ತಡಮಯವಾಗಿರುವ ಇಂದಿನ ದಿನಮಾನದಲ್ಲಿ ಸಮಚಿತ್ತದಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕಿದೆ. ಸಂಕಷ್ಟಕಾಲ ಯಾವಾಗ ಬರುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಯುದ್ಧದಲ್ಲಿ ಮೆಲ್ ಗಿಬ್ಸನ್‌ನಂತೆ ಮಾಂಸದ ಮುದ್ದೆಯಾಗಿರುವ ಮಂದಿ ಅದೆಷ್ಟೋ? ವಿಶ್ವದ ಜನರು ಆಯುಧಗಳು, ಮದ್ದುಗುಂಡುಗಳು, ಬಾಂಬುಗಳನ್ನು ಬಳಸದೆ ಮತ್ತು ಜಾತಿ-ಧರ್ಮದ ಭೇದವಿಲ್ಲದೆ ಶಾಂತಿಯುತವಾಗಿ ನೆಲೆಸುವ ಕಾಲ ಬರುವ ಸೂಚನೆಗಳು ಕಾಣುತ್ತಿಲ್ಲ. ಇಂದಿನ ವೇಗದ ಜೀವನದಲ್ಲಿ ಅಶಾಂತಿ ತಾಂಡವವಾಡುತ್ತಿರುವುದು ಸತ್ಯ. ಒಟ್ಟಾರೆಯಾಗಿ ನೋಡಿದರೆ, ನೆಮ್ಮದಿಯಿಂದ ಬದುಕುತ್ತಿರುವವರ ಸಂಖ್ಯೆ ಕಮ್ಮಿಯೇ. ನಮ್ಮೆಲ್ಲರ ಅನುಭವಕ್ಕೆ ಬಂದ ಸಂಗತಿಯೆಂದರೆ, ಇರುವ ದಿನಗಳೇ ಒಳ್ಳೆಯ ದಿನಗಳು, ಬರುವ ದಿನಗಳೇ ಕಷ್ಟದ ದಿನಗಳು. ಹಾಗಾಗಿ ವರ್ತಮಾನದಲ್ಲಿ ಸಂತೋಷದಿಂದ ಇರೋಣ. ಬದುಕಿನಲ್ಲಿ ಚಿಂತನೆ ಇರಲಿ; ಆದರೆ ಚಿಂತಿಸಿ ನೆಮ್ಮದಿ ಕಳೆದುಕೊಳ್ಳುವುದು ಎಷ್ಟು ಸರಿ?

(ಲೇಖಕರು ನಿವೃತ್ತ ಸಹಾಯಕ ಕಾರ್ಯಪಾಲಕ ಎಂಜಿನಿಯರ್)

ಲೈನ್ ಮ್ಯಾನ್

- **ಅಯೋಧ್ಯೆಯಲ್ಲಿ ಸೋತ ಬಿಜೆಪಿ ಹೇಳಿದ್ದು**

– ಸದ್ಯ, ರಾಮಮಂದಿರನ ಉತ್ತರಪ್ರದೇಶದಲ್ಲಿ ಮಾತ್ರ ಕಟ್ಟಿಸಿದ್ವಿ

- **'ಏನಾದ್ರೂ ಮಾಡ್ಕೊಳಿ, ಬೇಗ ಸರಕಾರ ಮಾಡಿ' ಅಂತ ನಿತೀಶ್ ಕುಮಾರ್ ಹೇಳಿದ್ದಕ್ಕೆ ಕಾರಣ ಏನು?**

– ಅವರ ಒಳಮಾತು... 'ಎಷ್ಟೇ ಕಮಿಟ್ ಆದ್ರೂ, ಒಂದೊಂದ್ಸಲ ನನ್ ಮಾತ್ ನಾನೇ ಕೇಳಲ್ಲ'

- **ಈ ಬಿಜೆಪಿ ಸರಕಾರ ಎಷ್ಟು ದಿನ ಇರುತ್ತೋ ಹೇಳೋಕಾಗಲ್ಲ**

– ಯಾಕಂದ್ರೆ ನಾಯ್ಡು, ನಿತೀಶ್ 'ಎನ್‌ಡಿಎ' ಸೇರಿರಬಹುದು. ಆದ್ರೆ, ಅವ್ರ 'ಡಿಎನ್‌ಎ' ನಂಬೋಕಾಗಲ್ಲ.

- ಈ ಬಾರಿಯ ಎಕ್ಸಿಟ್ ಪೋಲ್ ವಿಶೇಷ

– ಏನೇನೋ ಸರ್ಕಸ್ ಮಾಡಿ ಅಂಕಿ ಅಂಶ ಕೊಡ್ತೀವಿ ಅಂತ ಬಡಾಯಿ ಕೊಚ್ಚಿಕೊಳ್ಳೋ ಈ ಎಕ್ಸಿಟ್ ಪೋಲ್‌ಗಳಿಗಿಂತ ಸಾಮಾನ್ಯ ಜನರೇ ವಾಸಿ. ಮನೇಲಿ ಕೂತ್ಕೊಂಡೇ ಈ ರಿಸಲ್ಟ್ ಗೆಸ್ ಮಾಡಿದ್ರು.

- **ಧರ್ಮರಾಜಕಾರಣದ ಮೂಲಕ ಉತ್ತರ ಪ್ರದೇಶದಲ್ಲಿ ರಾಮಮಂದಿರ ಕಟ್ಟಿಸಿದ ಬಿಜೆಪಿಗೆ ಅಲ್ಲಿ ಸಿಕ್ಕಿದ್ದು**

– 'ಧರ್ಮದೋಟು'

- **ದೇವರ ಹೆಸರು ಬಳಸಿಕೊಂಡು, ದೇವಸ್ಥಾನಗಳನ್ನು ಉದ್ಯಮವನ್ನಾಗಿ ಮಾಡಿಕೊಂಡಿರೋರ ಉದ್ಯೋಗ**

– ಗುಡಿ ಕೈಗಾರಿಕೆ

- **ಪೊಲಿಟಿಕಲ್ ಡೌಟ್**

– ದೇಶದ 130 ಕೋಟಿ ಜನರ ಪರವಾಗಿ ಕೇಳ್ತಾ ಇದ್ದೀನಿ ಅಂತ ಮಾತಾಡ್ತಾರಲ್ಲ, ಇವ್ರಿಗೆಲ್ಲ ನಮ್ಮನ್ನು ಕೇಳದೇ, ನಮ್ಮ ಪರವಾಗಿ ಮಾತಾಡೋ ಅಧಿಕಾರ ಕೊಟ್ಟೋರು ಯಾರು?

- **ನಾಲ್ಕು ಭಾಷೆಗಳ ಚಿತ್ರಗಳಲ್ಲಿ ನಟಿಸೋ ನಟ**

– ಚತುರ್ಭಾಷಾ ನಟ

- **ನಾಲ್ಕು ಜನ ಮೆಚ್ಚುವಂಥ ಕನ್ನಡ ಮಾತಾಡೋ ನಟ ಸುಚೇಂದ್ರ ಪ್ರಸಾದ್**

– ಚತುರ ಭಾಷಾ ನಟ

- **ಒಂದೇ ಘಟನೆಯನ್ನು ಮತ್ತೆ ಮತ್ತೆ ತೋರಿಸಿ ಕಿರಿಕಿರಿ ಮಾಡುವ ಟಿವಿ ಚಾನೆಲ್‌ಗಳ ವರದಿ**

– ಘಟ'ನಾವಳಿ'

- **ವೆಯ್ಟ್ 'ಲಿಫ್ಟರ್' ಅಂದ್ರೇನು?**

– ತೂಕ ಹೆಚ್ಚಿಸಿಕೊಳ್ಳುವವನು

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 34

18ನೇ ಲೋಕಸಭೆ ರಚನೆಯ ಹಾದಿಯಲ್ಲಿ...

ಈಗಷ್ಟೇ ಮುಕ್ತಾಯಗೊಂಡ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಮ್ಯಾನ್ ಆಫ್ ದಿ ಮ್ಯಾಚ್ ಆಗಿ ಹೊರಹೊಮ್ಮಿದ್ದಾರೆ. ರಾಹುಲ್ ಮತ್ತು ಮಲ್ಲಿಕಾರ್ಜುನ ಖರ್ಗೆ ದೇಶಾದ್ಯಂತ ಪ್ರಚಾರ ನಡೆಸಿ ಕಾಂಗ್ರೆಸ್ ಪಕ್ಷ ಹೆಚ್ಚಿನ ಸ್ಥಾನ ಗೆಲ್ಲಲು ಕಾರಣರಾಗಿದ್ದಾರೆ. ಲೋಕಸಭೆಯಲ್ಲಿ ಎರಡನೇ ಅತಿದೊಡ್ಡ ಪಕ್ಷವಾಗಿ ಕಾಂಗ್ರೆಸ್ ಹೊರಹೊಮ್ಮಿದೆ. ರಾಜ್ಯಸಭೆಯಲ್ಲಿ ಖರ್ಗೆ ಪ್ರತಿಪಕ್ಷ ನಾಯಕರಾಗಿದ್ದಾರೆ. ಹಾಗಾಗಿ, ರಾಹುಲ್ ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕರಾಗುವುದು ಸೂಕ್ತ.

-ಶಶಿ ತರೂರ್ ಕಾಂಗ್ರೆಸ್ ಸಂಸದ

ಕಠಿಣವಾದ ಹಾದಿಯಲ್ಲಿ ಸಾಗುವವರೇ ಗೆಲುವಿನ -ಸಾಧನೆಯ ಗುರಿ ಮುಟ್ಟುವುದು. ಭಾನುವಾರ ಸಂಜೆ 7.15ಕ್ಕೆ 3ನೇ ಅವಧಿಗೆ ಆರಂಭಗೊಳ್ಳಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರಕಾರ ಬಹಳ ಸುಸ್ಥಿರವಾಗಿರಲಿದೆ. 5 ವರ್ಷ ಉತ್ತಮ ಆಡಳಿತ ನೀಡಲಿದೆ. ಅದರಲ್ಲಿ ಯಾವುದೇ ಅನುಮಾನ ಬೇಕಿಲ್ಲ. ಮಿತ್ರಪಕ್ಷಗಳೆಲ್ಲವೂ ನರೇಂದ್ರ ಮೋದಿ ಅವರನ್ನು ಪ್ರಧಾನಿಯಾಗಿ ಒಪ್ಪಿಕೊಂಡಿವೆ. ಕಾಂಗ್ರೆಸ್ ಮತ್ತು ಅದರ ಇಂಡಿ ಒಕ್ಕೂಟ ವೃಥಾ ಸುಳ್ಳು ಸುದ್ದಿಗಳನ್ನು ಹರಡುತ್ತದೆ. ದೇಶದ ಜನರನ್ನು ತಪ್ಪು ಮಾರ್ಗಕ್ಕೆ ದೂಡುತ್ತದೆ.

- ಜಿತಿನ್ ರಾಮ್ ಮಾಂಜಿ ಎನ್‌ಡಿಎ ಮಿತ್ರಪಕ್ಷ ಎಚ್‌ಎಎಂ ನಾಯಕ

ಸಮಾಚಾರ ಸಣ್ಣದಲ್ಲ

ಮರಾಠಾ ಮೀಸಲು: ಜಾರಂಗೆ ಮತ್ತೆ ನಿರಶನ

ಮುಂಬೈ: ಮಹಾರಾಷ್ಟ್ರದಲ್ಲಿ ಮತ್ತೆ ಮರಾಠಾ ಮೀಸಲು ವಿಚಾರ ಸಂಘರ್ಷಕ್ಕೆ ಕಾರಣವಾಗಿದೆ. ಈ ಮೊದಲು ಮೀಸಲಾತಿ ಬೇಡಿಕೆ ಮುಂದಿಟ್ಟು ಹಲವು ಬಾರಿ ಹಲವು ದಿನಗಳ ಕಾಲ ಉಪವಾಸ ಕೈಗೊಂಡು ಹೋರಾಟ ನಡೆಸಿದ್ದ ಮನೋಜ್ ಜಾರಂಗೆ ಈಗ ಮತ್ತೊಮ್ಮೆ ಆಮರಣಾಂತ ಉಪವಾಸ ಆರಂಭಿಸಿ ದ್ದಾರೆ. ಕುಂಬಿ ಸಮುದಾಯವನ್ನು ಮರಾಠ ಸಮುದಾಯದ ಸದಸ್ಯರ ರಕ್ತ ಸಂಬಂಧಿ ಎಂದು ಗುರುತಿಸುವ ಅಧಿಸೂಚನೆ ಹೊರಡಿಸುವಂತೆ ಆಗ್ರಹಿಸಿದ್ದಾರೆ. ಈ ಸಂಬಂಧ ಕಾನೂನು ರೂಪಿಸು ವಂತೆಯೂ ಕೋರಿದ್ದಾರೆ. ತಮ್ಮ ಬೇಡಿಕೆ ಈಡೇರಿಸದಿದ್ದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ 288 ವಿಧಾನಸಭಾ ಸ್ಥಾನಗಳಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಜಲ್ನಾ ಜಿಲ್ಲೆಯ ಅಂಬಾದ್ ತೆಹಸಿಲ್‌ನ ಸ್ಥಳೀಯ ಅಂತರವಾಲಿ ಸಾರತಿ ಗ್ರಾಮದಲ್ಲಿ ಶನಿವಾರ ಬೆಳಗ್ಗೆ ಜಾರಂಗೆ ಮತ್ತೊಂದು ಸುತ್ತಿನ ಹೋರಾಟ ಆರಂಭಿಸಿದ್ದಾರೆ.

ಥಪ್ಪಡ್ ಪೇದೆಗೆ ಪ್ರಶಂಸೆ ಸಂಸದೆ ಕಂಗನಾ ಆಕ್ರೋಶ

ದೆಹಲಿ: ಚಂಡೀಗಡ ವಿಮಾನ ನಿಲ್ದಾಣದಲ್ಲಿ ತನಗೆ 'ಥಪ್ಪಡ್' ನೀಡಿದ (ಕಪಾಳಮೋಕ್ಷ) ಸಿಐಎಸ್‌ಎಫ್ ಮಹಿಳಾ ಪೇದೆಯನ್ನು ಪ್ರಶಂಸಿಸುತ್ತಿರುವವರ ವಿರುದ್ಧ ನೂತನ ಬಿಜೆಪಿ ಸಂಸದೆ, ಬಾಲಿವುಡ್ ನಟಿ ಕಂಗನಾ ರಣಾವತ್ ಶನಿವಾರ ಕಿಡಿಕಾರಿದ್ದಾರೆ. ಸಂಸದೆ ಕೆನ್ನೆಗೆ ಬಾರಿಸಿದಾಕೆಯನ್ನು ಪ್ರಶಂಸಿಸುವವರು 'ಅತ್ಯಾಚಾರ- ಕೊಲೆ' ಮಾಡಿದವರನ್ನೂ ಸಮರ್ಥಿಸುತ್ತಾರೆಯೇ? ಎಂದು ಕಂಗನಾ ಸಿಟ್ಟಿನಿಂದ ಪ್ರಶ್ನಿಸಿದ್ದಾರೆ. ಅತ್ಯಾಚಾರಿ, ಕೊಲೆಗಾರ, ಕಳ್ಳ ಅಪರಾಧ ಮಾಡಲು ಒಂದಲ್ಲಾ ಒಂದು ಕಾರಣ ಹೊಂದಿರುತ್ತಾನೆ. ಅಪರಾಧ ಯಾವುದೇ ಆದರೂ ಅದು ಅಪರಾಧವೇ. ಅಂತಹವರನ್ನು ಅಪರಾಧಿ ಎಂದೇ ನಿರ್ಣಯಿಸಲಾ ಗುತ್ತದೆ ಮತ್ತು ಶಿಕ್ಷೆ ವಿಧಿಸಲಾಗುತ್ತದೆ. ಇದು ನಾಗರಿಕ ಸಮಾಜದ ಕ್ರಮ. ಆದರೆ, ಅಪರಾಧ ಎಸಗಿದವರನ್ನು ಸಮರ್ಥಿಸುವುದು, ಪ್ರಶಂಸಿಸುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ. ಅಪರಾಧಿಗೆ ಬೆಂಬಲವಾಗಿ ಮಾತನಾಡಿದರೆ ದೇಶದ ಕಾನೂನು ಉಲ್ಲಂಘಿಸಲುವ ಬೇರೆಯವರಿಗೂ ಪ್ರೇರಣೆ ನೀಡಿದಂತೆ, ಭಾವನಾತ್ಮಕ ಪ್ರಚೋದನೆ ನೀಡಿದಂತೆ ಎಂದಿದ್ದಾರೆ.

ಕಾಶ್ಮೀರ: ಶೇ.89ರಷ್ಟು ಸ್ಪರ್ಧಿ ಠೇವಣಿ ನಷ್ಟ

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿ ಲೋಕಸಭೆ ಚುನಾವಣೆಯಲ್ಲಿ 5 ಕ್ಷೇತ್ರಗಳಿಗೆ ಸ್ಪರ್ಧಿಸಿದ್ದ 100 ಅಭ್ಯರ್ಥಿಗಳಲ್ಲಿ ಶೇ.89ರಷ್ಟು ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ. ಗುಲಾಂ ನಬಿ ಆಜಾದ್ ಅವರ ಡಿಪಿಎಪಿ ಪಕ್ಷದ 3 ಅಭ್ಯರ್ಥಿಗಳು, ಬಿಜೆಪಿ ಬೆಂಬಲಿತ ಅಪ್ನಿ ಪಕ್ಷದ ಇಬ್ಬರು ಮತ್ತು ಪಿಡಿಪಿ ಅಭ್ಯರ್ಥಿಗಳು ಸೇರಿದ್ದಾರೆ. ಬಿಜೆಪಿಯ ಇಬ್ಬರು ವಿಜೇತರು, ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಇಬ್ಬರು ವಿಜೇತರು, ಪಕ್ಷೇತರ ಅಭ್ಯರ್ಥಿ ರಶೀದ್, ಪರಾಜಿತ ಮಾಜಿ ಸಿಎಂಗಳಾದ ಎನ್‌ಸಿ ಮುಖಂಡ ಒಮರ್ ಅಬ್ದುಲ್ಲಾ ಮತ್ತು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ, ಪಿಡಿಪಿಯ ವಹೀದ್ ಪಾರಾ, ಪೀಪಲ್ಸ್ ಕಾನ್ಫರೆನ್ಸ್ ಪಕ್ಷದ ಸಾಜದ್ ಲೋನ್ ಮತ್ತು ಕಾಂಗ್ರೆಸ್ ಪಕ್ಷದ ಇಬ್ಬರು ಪರಾಜಿತ ಅಭ್ಯರ್ಥಿಗಳು ಮಾತ್ರವೇ ಠೇವಣಿ ಉಳಿಸಿಕೊಂಡಿದ್ದಾರೆ. ಉಳಿದ 89 ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ.

ಮಾಹಿತಿದಾರನ ಕೊಂದ ನಕ್ಸಲರು

ಕೊಂಡಗಾಂವ್: ಛತ್ತೀಸ್‌ಗಡ ರಾಜ್ಯದ ಕೊಂಡಗಾಂವ್ ಜಿಲ್ಲೆಯಲ್ಲಿ ಪೊಲೀಸ್ ಮಾಹಿತಿದಾರನಾಗಿದ್ದ ವ್ಯಕ್ತಿಯನ್ನು ನಕ್ಸಲರು ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಧನೋರಾ ಪೊಲೀಸ್ ಠಾಣಾ ವ್ಯಾಪ್ತಿಯ ತಿಮ್ಡಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ದಿನೇಶ್ ಮಾಂಡವಿ ಎಂಬಾತನನ್ನು ನಕ್ಸಲರು ಗುಂಡಿಕ್ಕಿ ಕೊಂದಿದ್ದಾರೆ. ದಿನೇಶ್ ಮದುವೆಯೊಂದಕ್ಕೆ ಹೋಗಿ ಹಿಂದಿರುಗುತ್ತಿದ್ದಾಗ ನಕ್ಸಲರು ಅಡ್ಡಗಟ್ಟಿ ಗುಂಡಿಕ್ಕಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಣಿಪುರ: ಪೊ.ಠಾಣೆ, ಮನೆಗೆ ಉಗ್ರರ ಬೆಂಕಿ!

ಇಂಫಾಲ: ಕುಕಿ ಉಗ್ರರು ಶನಿವಾರ ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ಪೊಲೀಸ್ ಔಟ್‌ಪೋಸ್ಟ್‌ಗಳು ಮತ್ತು ಹಲವು ಮನೆಗಳಿಗೆ ಬೆಂಕಿ ಹಚ್ಚಿ ನಾಶಪಡಿಸಿದ್ದಾರೆ. ಬರಾಕ್ ನದಿ ದಡದ ಚೋಟೊಬೆಕ್ರಾ ಪ್ರದೇಶದಲ್ಲಿ ಶನಿವಾರ ನಸುಕಿನ 12.30ರ ವೇಳೆ ಜಿರಿ ಪೊಲೀಸ್ ಔಟ್‌ಪೋಸ್ಟ್‌ಗೆ ಉಗ್ರರು ಬೆಂಕಿ ಹಾಕಿ ಸುಟ್ಟು ಹಾಕಿದ್ದಾರೆ. ಇಂಫಾಲ್‌ನಿಂದ 220 ಕಿಮೀ ದೂರದ ಜಿಲ್ಲೆ ಲಮ್ಟ್‌ೈ, ಖುನೌ ಮತ್ತು ಮೊಧುಪುರ್ ಪ್ರದೇಶಗಳಲ್ಲಿ ಬಂದೂಕುಧಾರಿ ಉಗ್ರರು ದಾಳಿ ನಡೆಸಿದ್ದಾರೆ. ಜಿರಿಬಾಮ್ ಜಿಲ್ಲೆಯ ಹೊರವಲಯದಲ್ಲಿ ಹಲವಾರು ಮನೆಗಳು ಸುಟ್ಟುಹೋಗಿವೆ. ಎಷ್ಟು ಮನೆಗಳಿಗೆ ಹಾನಿಯಾಗಿದೆ ಎಂಬುದು ಇನ್ನಷ್ಟೇ ತಿಳಿಯಬೇಕಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಉಗ್ರರ ವಿರುದ್ಧದ ಕಾರ್ಯಾಚರಣೆಗೆ ನೆರವಾಗಲು ಮಣಿಪುರ ಪೊಲೀಸ್ ಕಮಾಂಡೋ ತುಕಡಿಯನ್ನು ಶನಿವಾರ ಬೆಳಗ್ಗೆ ಇಂಫಾಲ್‌ನಿಂದ ಜಿರಿಬಾಮ್‌ಗೆ ವಿಮಾನದಲ್ಲಿ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ನಿರ್ಣಯ | ರಾಹುಲ್ ಗಾಂಧಿ ಸಂಘಟನಾ ಶಕ್ತಿ, ಕಾರ್ಯತಂತ್ರಕ್ಕೆ ಪ್ರಶಂಸೆ

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್

ದೆಹಲಿ: ದೆಹಲಿಯಲ್ಲಿ ಶನಿವಾರ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ನಡೆದಿದ್ದು, ಸಂಸದ ರಾಹುಲ್ ಗಾಂಧಿ ಅವರನ್ನು ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ಸ್ಥಾನಕ್ಕೆ ಆಯ್ಕೆ ಮಾಡಲು ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು.

ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಕೇರಳದ ವಯನಾಡು ಹಾಗೂ ಉತ್ತರ ಪ್ರದೇಶದ ರಾಯಬರೇಲಿ ಕ್ಷೇತ್ರಗಳೆರಡರಲ್ಲೂ ಭಾರೀ ಜಯಭೇರಿ ಬಾರಿಸಿದ್ದಾರೆ. 2019ಕ್ಕೆ ಹೋಲಿಸಿದಲ್ಲಿ 2024ರ ಚುನಾವಣೆಯಲ್ಲಿ ಪಕ್ಷದ ಲೋಕಸಭಾ ಸದಸ್ಯರ ಸಂಖ್ಯೆಯೂ ಹೆಚ್ಚಳವಾಗಲು ಕಾರಣವಾಗಿದ್ದಾರೆ. ಹಾಗಾಗಿ ರಾಹುಲ್ ಗಾಂಧಿ ಅವರೇ ಪ್ರತಿಪಕ್ಷ ನಾಯಕನಾಗಲು ಸೂಕ್ತ ವ್ಯಕ್ತಿ ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಆದರೆ, ಈ ಮಹತ್ವದ ಹುದ್ದೆ ವಹಿಸಿಕೊಳ್ಳಲು ರಾಹುಲ್ ಸಮ್ಮತಿಸಿದ್ದಾರೆಯೇ ಎಂಬುದು ಇನ್ನಷ್ಟೇ ಖಚಿತವಾಗಬೇಕಿದೆ.

ಭಾರತ್ ಜೋಡೊ ಮತ್ತು ಭಾರತ್ ನ್ಯಾಯ ಯಾತ್ರೆಗಳನ್ನು ಸಂಘಟಿಸುವ ಮೂಲಕ ರಾಹುಲ್, ಚುನಾವಣಾ ಪ್ರಚಾರಕ್ಕೆ ಉತ್ತಮ ಬುನಾದಿ ಹಾಕಿದರು. ಚುನಾವಣಾ ಸಂದರ್ಭದಲ್ಲಿ ಅವರು ನಡೆಸಿದ ಪ್ರಚಾರದ ವೈಖರಿ ಜನರಲ್ಲಿ ಕಾಂಗ್ರೆಸ್ ಮೇಲಿನ ನಂಬಿಕೆಯನ್ನು ಹೆಚ್ಚಿಸಿದೆ. ಲೋಕಸಭಾ ಚುನಾವಣೆಯ ಪೂರ್ಣ ಕಾರ್ಯಸೂಚಿ ರೂಪಿಸಿ ಸಮರ್ಥ ರೀತಿ ಅನುಷ್ಠಾನಗೊಳಿಸಿದ್ದಾರೆ. ದೇಶದ ಮೂಲೆ ಮೂಲೆ ತಿರುಗಿ ಜನರನ್ನು ಭೇಟಿಯಾಗಿ ಸಮಸ್ಯೆ ಆಲಿಸಿ ವಿಶ್ವಾಸ ಗಳಿಸಿದ್ದಾರೆ. ಹಾಗಾಗಿ ಅವರೇ ಈ ಹುದ್ದೆಗೆ ಸರಿಯಾದ ವ್ಯಕ್ತಿ ಎಂದು ಕಾಂಗ್ರೆಸ್ ಕಾರ್ಯಕಾರಿಣಿ ಒಮ್ಮತದ ನಿರ್ಧಾರ ಕೈಗೊಂಡಿದೆ.

ಸಿಡಬ್ಲ್ಯುಸಿ ಸಭೆಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೊದಲಿಗೆ ಪಕ್ಷದ ಗೆಲುವಿನ ಸಾಧನೆಗೆ ನಾಯಕರು, ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿದರು. ದೇಶದ ಜನತೆ ಸರ್ವಾಧಿಕಾರಿ ಧೋರಣೆ ಮತ್ತು ಸಂವಿಧಾನ ವಿರೋಧಿ ನಡೆಯನ್ನು ಧಿಕ್ಕರಿಸಿದ್ದಾರೆ.

> ಭಾರತ ಜೋಡೊ, ನ್ಯಾಯ್ ಯಾತ್ರೆ ಕಾಂಗ್ರೆಸ್ ಪಕ್ಷದ ಮತಗಳಿಕೆ ಏರಿಕೆಗೆ ನೆರವಾಗಿವೆ. ಯಾತ್ರೆ ಸಾಗಿದಲ್ಲೆಲ್ಲಾ ಪಕ್ಷ ಹೆಚ್ಚಿನ ಮತ ಗಳಿಸಿದೆ. ಮಣಿಪುರದಲ್ಲೂ ರಾಹುಲ್ ಗಾಂಧಿ ಭೇಟಿ ಸಾಕಷ್ಟು ಪರಿಣಾಮ ಬೀರಿ, ಎರಡು ಲೋಕಸಭಾ ಸ್ಥಾನ ಗೆದ್ದುಕೊಟ್ಟಿದೆ. ಈಶಾನ್ಯ ರಾಜ್ಯಗಳಲ್ಲಿ ಕಾಂಗ್ರೆಸ್ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ರಾಹುಲ್ ನೇತೃತ್ವದ ಯಾತ್ರೆಗಳು ಜನರ ಮೇಲೆ ಪ್ರಭಾವ ಬೀರಿವೆ.
>
> -ಮಲ್ಲಿಕಾರ್ಜುನ್ ಖರ್ಗೆ

ಕಾಂಗ್ರೆಸ್ ಮೇಲೆ ವಿಶ್ವಾಸ ತೋರಿದ್ದಾರೆ. ಬಿಜೆಪಿಯ 10 ವರ್ಷಗಳ ಒಡೆದು ಆಳುವ, ದ್ವೇಷ, ಧ್ರುವೀಕರಣದ ರಾಜಕೀಯವನ್ನು ಜನ ತಿರಸ್ಕರಿಸಿದ್ದಾರೆ ಎಂದರು.

ಸಂವಿಧಾನ ರಕ್ಷಣೆ, ಆರ್ಥಿಕ ಅಸಮಾನತೆ, ನಿರುದ್ಯೋಗ, ಸಾಮಾಜಿಕ ನ್ಯಾಯ ವಿಚಾರಗಳನ್ನು ಚುನಾವಣಾ ವಿಷಯವಾಗಿಸಿ ಜನರೆದುರು ಬಲವಾಗಿ ಪ್ರಸ್ತುತಪಡಿಸಿದ ರಾಹುಲ್ ಗಾಂಧಿ ಅವರಿಗೆ ಖರ್ಗೆ ಧನ್ಯವಾದ ಹೇಳಿದರು.

ಈ ಬಾರಿಯ ಫಲಿತಾಂಶ ಕಾಂಗ್ರೆಸ್ ಎಸ್‌ಸಿ-ಎಸ್‌ಟಿ, ಒಬಿಸಿ ಹಾಗೂ ಅಲ್ಪಸಂಖ್ಯಾತ ಮತದಾರರ ಮೇಲೆ ಪ್ರಭಾವ ಹೆಚ್ಚಿಸಿದೆ. ಗ್ರಾಮೀಣ ಭಾಗದಲ್ಲೂ ಉತ್ತಮ ಸ್ಪಂದನೆ ಸಿಕ್ಕಿದೆ. ನಗರ ಪ್ರದೇಶಗಳಲ್ಲಿ ಮತ ಪ್ರಮಾಣ ಹೆಚ್ಚಿಸಲು ಶ್ರಮಿಸಬೇಕಿದೆ. ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷ ಉತ್ತಮವಾಗಿ ಕೆಲಸ ಮಾಡಿದ ಪ್ರದೇಶಗಳಲ್ಲಿಯೇ ಈ ಬಾರಿ ಹೆಚ್ಚು ಸ್ಥಾನ ಗೆಲ್ಲಲಾಗಿಲ್ಲ. ಈ ವಿಚಾರ ಗಂಭೀರವಾಗಿ ಪರಿಗಣಿಸಬೇಕು ಎಂದು ರಾಜ್ಯ ಘಟಕಗಳ ನಾಯಕರಿಗೆ ಸೂಚನೆ ನೀಡಿದರು.

ಸಂಸತ್ತಿನ ಒಳ-ಹೊರಗೆ 'ಇಂಡಿಯ' ಒಕ್ಕೂಟ ಒಗ್ಗಟ್ಟಿನಿಂದ ಕೆಲಸ ಮಾಡಿದೆ. ಎಲ್ಲಾ ಸದಸ್ಯರೂ ಲೋಕಸಭಾ ಚುನಾವಣೆ ಎದುರಿಸುವಲ್ಲಿ ಉತ್ತಮ ಕೊಡುಗೆ ನೀಡಿದ್ದಾರೆ ಎಂದು ಮೈತ್ರಿಕೂಟದ ಸಾಧನೆಯನ್ನು ಖರ್ಗೆ ಶ್ಲಾಘಿಸಿದರು.

11ರಿಂದ ಉತ್ತರ ಪ್ರದೇಶ ಧನ್ಯವಾದ ಯಾತ್ರೆ: ಖರ್ಗೆ

ದೆಹಲಿ: ಲೋಕಸಭೆ ಚುನಾವಣೆಯಲ್ಲಿ ಉತ್ತರ ಪ್ರದೇಶ ರಾಜ್ಯದ ಮತದಾರರು ಕಾಂಗ್ರೆಸ್ ನೇತೃತ್ವದ 'ಇಂಡಿಯ' ಒಕ್ಕೂಟಕ್ಕೆ ಬಿಜೆಪಿಗಿಂತಲೂ ಹೆಚ್ಚಿನ ಸ್ಥಾನಗಳನ್ನು ಗೆಲ್ಲಿಸಿಕೊಟ್ಟಿರುವುದಕ್ಕೆ ಕಾಂಗ್ರೆಸ್ ಪಕ್ಷದ ನಾಯಕರು ಜೂ.11ರಿಂದ 15ರವರೆಗೆ ಧನ್ಯವಾದ ಯಾತ್ರೆ ಹಮ್ಮಿಕೊಂಡಿದ್ದಾರೆ.

ಪಕ್ಷ ಮತ್ತು ಇಂಡಿಯ ಒಕ್ಕೂಟಕ್ಕೆ ಹೆಚ್ಚು ಮತ ನೀಡಿದ ರಾಜ್ಯದ ಜನತೆಗೆ ಕೃತಜ್ಞತೆ ಹೇಳಲು ಜೂ.11ರಿಂದ 15ರವರೆಗೆ ಧನ್ಯವಾದ ಯಾತ್ರೆ ನಡೆಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಿರ್ಧರಿಸಿದೆ. ಸಭೆ ನಂತರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಈ ವಿಷಯ ಪ್ರಕಟಿಸಿದ್ದಾರೆ. ಯಾತ್ರೆಯಲ್ಲಿ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ವಾದ್ರ ಭಾಗಿಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

80 ಲೋಕಸಭಾ ಕ್ಷೇತ್ರಗಳಿರುವ ಉತ್ತರ ಪ್ರದೇಶ ರಾಜ್ಯದಲ್ಲಿ 2019ರ ಚುನಾವಣೆಯಲ್ಲಿ ಕೇವಲ 1 ಕ್ಷೇತ್ರದಲ್ಲಷ್ಟೇ (ರಾಯ್‌ಬರೇಲಿ-ಸೋನಿಯಾ ಗಾಂಧಿ) ಗೆದ್ದಿದ್ದ ಕಾಂಗ್ರೆಸ್ ಈ ಬಾರಿ ಸಮಾಜವಾದಿ ಪಕ್ಷದ ಜತೆ ಮೈತ್ರಿ ಮಾಡಿಕೊಂಡಿದ್ದರಿಂದ ಉತ್ತಮ ಫಲಿತಾಂಶ ಪಡೆದಿದೆ.

ಕಾಂಗ್ರೆಸ್ 6 ಮತ್ತು ಸಮಾಜವಾದಿ ಪಕ್ಷ 37 ಸೇರಿದಂತೆ ಇಂಡಿ ಒಕ್ಕೂಟ ಒಟ್ಟು 43 ಸ್ಥಾನಗಳನ್ನು ಗೆದ್ದುಕೊಂಡಿದೆ. ರಾಹುಲ್ ಗಾಂಧಿ ರಾಯ್ ಬರೇಲಿಯಲ್ಲಿ 3.90 ಲಕ್ಷ ಮತಗಳ ಅಂತರದಿಂದ ಆರಿಸಿ ಬಂದಿದ್ದಾರೆ.

ಹುದ್ದೆ ವಹಿಸಿಕೊಳ್ಳುವಂತೆ ರಾಹುಲ್‌ಗೆ ಒತ್ತಾಯ

ಪ್ರತಿಪಕ್ಷ ನಾಯಕ ಆಗುವಂತೆ ಸಿಡಬ್ಲ್ಯುಸಿ ಸಭೆ ಸರ್ವಾನುಮತದಿಂದ ರಾಹುಲ್ ಗಾಂಧಿ ಅವರಲ್ಲಿ ಮನವಿ ಮಾಡಿದೆ. ಸಿಡಬ್ಲ್ಯುಸಿ ನಿರ್ಣಯ ಚುನಾವಣಾ ಪ್ರಚಾರದಲ್ಲಿ ರಾಹುಲ್ ಗಾಂಧಿ ಅವರ ಪ್ರಯತ್ನಗಳನ್ನು ಶ್ಲಾಘಿಸಿದೆ. ಪಕ್ಷದ ಬೇರಾವುದೇ ನಾಯಕರಿಗಿಂತ ಹೆಚ್ಚಾಗಿ ರಾಹುಲ್ ಗಾಂಧಿ ಚುನಾವಣಾ ಪ್ರಚಾರ ಏಕಾಗ್ರತೆಯಿಂದ ಕೂಡಿತ್ತು. ಪ್ರಚಾರ ವೈಖರಿ ಈ ಬಾರಿ ಬಲು ತೀಕ್ಷ್ಣ ಮತ್ತು ಮೊನಚಾಗಿತ್ತು. ಅವರ ಪ್ರಚಾರ ಸಂವಿಧಾನ ರಕ್ಷಣೆಯನ್ನು ಚುನಾವಣೆಯ ಪ್ರಮುಖ ವಿಷಯವಾಗಿಸಿತು ಎಂದು ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ. ಸಿಡಬ್ಲ್ಯುಸಿ ಸಭೆ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಂಸದೆ ಕುಮಾರಿ ಸೆಲ್ಜಾ, ರಾಹುಲ್ ಗಾಂಧಿ ಪ್ರತಿಪಕ್ಷದ ನಾಯಕ ಆಗಬೇಕು ಎಂಬುದು ಸಿಡಬ್ಲ್ಯುಸಿ ಇಚ್ಛೆ ಎಂದು ಹೇಳಿದ್ದಾರೆ.

ಸೋನಿಯಾ ಗಾಂಧಿ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ

ದೆಹಲಿ: ಹಳೆಯ ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಶನಿವಾರ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆ ನಡೆದಿದ್ದು, ಸೋನಿಯಾ ಗಾಂಧಿ ಅವರನ್ನು ಸಂಸದೀಯ ಪಕ್ಷದ ಅಧ್ಯಕ್ಷೆಯನ್ನಾಗಿ ಮರು ಆಯ್ಕೆ ಮಾಡಲಾಗಿದೆ. ಸಭೆಯಲ್ಲಿ ಮೊದಲಿಗೆ ಸೋನಿಯಾ ಹೆಸರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಸ್ತಾಪ ಮಾಡಿದರು. ಪಕ್ಷದ ನಾಯಕರಾದ ಗೌರವ್ ಗೊಗೊಯ್, ತಾರಿಕ್ ಅನ್ವರ್, ಕೆ.ಸುಧಾಕರನ್ ಸೇರಿ ಹಲವು ನಾಯಕರು ಅನುಮೋದಿಸಿದರು. ಸಭೆ ಬಳಿಕ ಸೋನಿಯಾ ಗಾಂಧಿ ಅವಿರೋಧ ಆಯ್ಕೆ ಕುರಿತು ಖರ್ಗೆ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಕೇಂದ್ರ ಸರಕಾರದ ಮಹತ್ವದ ಕ್ರಮ | 1,563 ವಿದ್ಯಾರ್ಥಿ ಉತ್ತರ ಪತ್ರಿಕೆ | ಮೆಡಿಕಲ್ ಪ್ರವೇಶಕ್ಕೆ ತೊಂದರೆ ಇಲ್ಲ

ನೀಟ್ ಮರು ಮೌಲ್ಯಮಾಪನಕ್ಕೆ ಸಮಿತಿ

ದೆಹಲಿ: ವೈದ್ಯಕೀಯ ಶಿಕ್ಷಣದ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾವಕಾಶ ನೀಡುವ 'ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ' (ಎನ್‌ಇಇಟಿ-ನೀಟ್) ಫಲಿತಾಂಶ ಪ್ರಕಟವಾದ ಬಳಿಕ ವಿವಾದ ಉಂಟಾಗಿದ್ದು, ಮೌಲ್ಯಮಾಪನದಲ್ಲಿ ಭಾರೀ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದಿವೆ. ಪರಿಣಾಮ ಕೇಂದ್ರ ಸರಕಾರ 'ಗ್ರೇಸ್ ಮಾರ್ಕ್ಸ್' ಪಡೆದ 1,563 ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಉನ್ನತ ಸಮಿತಿ ರಚಿಸಿದೆ.

ಸಮಿತಿ ರಚನೆಯಿಂದ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಯಾವುದೇ ತೊಂದರೆ ಇಲ್ಲ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಶನಿವಾರ ಸ್ಪಷ್ಟಪಡಿಸಿದೆ.

ನೀಟ್ ಬರೆದ ಅಭ್ಯರ್ಥಿಗಳಿಗೆ ರ್‍ಯಾಂಕ್ ನೀಡುವ ಮಾನದಂಡಕ್ಕೆ ಗ್ರೇಸ್ ಮಾರ್ಕ್ಸ್ ನೀಡಿರುವುದರಿಂದ ಯಾವುದೇ ಪರಿಣಾಮವಾಗಿಲ್ಲ. ಆದರೂ, ಗ್ರೇಸ್ ಮಾರ್ಕ್ಸ್ ಪಡೆದವರ ಉತ್ತರ ಪತ್ರಿಕೆಗಳನ್ನು ಮತ್ತೆ ಮೌಲ್ಯಮಾಪನ ಮಾಡಲಾಗುತ್ತದೆ. ಕೇಂದ್ರ ಶಿಕ್ಷಣ ಸಚಿವಾಲಯ ಸಮಿತಿ ರಚಿಸಿದೆ ಎಂದು ಎನ್‌ಟಿಎ ಮಹಾ ನಿರ್ದೇಶಕ ಸುಬೋಧ್ ಸಿಂಗ್ ಮಾಹಿತಿ ನೀಡಿದ್ದಾರೆ. ಪರೀಕ್ಷೆಯಲ್ಲಿ ಅಕ್ರಮ ನಡೆದಿಲ್ಲ, ಪ್ರಶ್ನೆಪತ್ರಿಕೆಗಳ ಸೋರಿಕೆಯೂ ಆಗಿಲ್ಲ ಎಂದೂ ಸ್ಪಷ್ಟಪಡಿಸಿದ್ದಾರೆ.

ನೀಟ್ ಮೊದಲ ರ್‍ಯಾಂಕ್ ಪಡೆದ 67 ವಿದ್ಯಾರ್ಥಿಗಳು 720 ಅಂಕಗಳಿಗೆ 720 ಅಂಕಗಳನ್ನೇ (ಶೇ.99.99) ಗಳಿಸಿದ್ದಾರೆ. ಇವರಲ್ಲಿ 44 ಮಂದಿ ಗ್ರೇಸ್ ಮಾರ್ಕ್ಸ್ ಆಧಾರ ಮೇಲೆ ಟಾಪರ್ ಆಗಿದ್ದಾರೆ. ಹರಿಯಾಣದ ಒಂದೇ ಕೇಂದ್ರದಲ್ಲಿ ಪರೀಕ್ಷೆ ಬರೆದ 6 ವಿದ್ಯಾರ್ಥಿಗಳು ಜಂಟಿಯಾಗಿ ಟಾಪರ್ ಆಗಿದ್ದಾರೆ. ಇದರಿಂದ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ, ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಕೆಲ ಪೋಷಕರು ಆರೋಪಿಸಿದ್ದಾರೆ. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ 'ನೀಟ್'ನಲ್ಲಿ ಅಕ್ರಮ ನಡೆದಿದ್ದು, ತನಿಖೆ ಅಗತ್ಯ ಎಂದು ಆಗ್ರಹಿಸಿದ್ದಾರೆ.

ಪರೀಕ್ಷಾರ್ಥಿಗಳು 24 ಲಕ್ಷ!

'ನೀಟ್' ಕನ್ನಡ, ಅಸ್ಸಾಮಿ, ಬಂಗಾಳಿ, ಇಂಗ್ಲಿಷ್, ಗುಜರಾತಿ, ಹಿಂದಿ, ಮಲಯಾಳಂ, ಮರಾಠಿ, ಒಡಿಯ, ಪಂಜಾಬಿ, ತಮಿಳು, ತೆಲುಗು, ಮತ್ತು ಉರ್ದು ಸೇರಿದಂತೆ 13 ಭಾಷೆಗಳಲ್ಲಿ ನಡೆದಿತ್ತು. ಒಟ್ಟು 24,06,079 ಅಭ್ಯರ್ಥಿಗಳ ನೋಂದಾಯಿಸಿಕೊಂಡಿದ್ದರು. ಪರೀಕ್ಷೆಯ ಫಲಿತಾಂಶ ಜೂ.4ರಂದು ಪ್ರಕಟವಾಗಿತ್ತು. ಆ ಬಳಿಕವೇ ಅಕ್ರಮದ ಆರೋಪ ಕೇಳಿಬಂದಿದೆ. 'ನೀಟ್' ಯುಜಿ ಪರೀಕ್ಷೆ ದೇಶದ 571 ನಗರಗಳು, ವಿದೇಶಗಳ 14 ನಗರಗಳಲ್ಲಿ ಸೇರಿ ಒಟ್ಟು 4750 ಕೇಂದ್ರಗಳಲ್ಲಿ ಮೇ 5ರಂದು ನಡೆದಿದ್ದು, ಜೂ.4ರಂದು ಪ್ರಕಟವಾದ ಫಲಿತಾಂಶ ಭಾರೀ ವಿವಾದ ಹುಟ್ಟುಹಾಕಿದೆ.

ಉಪ್ಪಿನ ಕಾಯಿಯಿಂದ ಫಿಲಂ ಸಿಟಿವರೆಗಿನ ಉದ್ಯಮ ಪಯಣ

ಬಣ್ಣದ ಕನಸುಗಳ ಶ್ವೇತವಸ್ತ್ರಧಾರಿ!

1936-2024

ಹೈದರಾಬಾದ್: ಈ ನಾಡು ಪತ್ರಿಕೆ, ಈ ಟಿವಿ ಬಹುಭಾಷೆ ಸುದ್ದಿವಾಹಿನಿಗಳು ಮತ್ತು ಬೃಹತ್ ರಾಮೋಜಿ ಫಿಲ್ಮ್ ಸಿಟಿ ಸಂಸ್ಥಾಪಕ, ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಧೇರುಕರಿ ರಾಮೋಜಿ ರಾವ್ (87) ಶನಿವಾರ ಬೆಳಗ್ಗೆ ವಿಧಿವಶರಾದರು.

ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ರಾಮೋಜಿ ರಾವ್ ಅವರನ್ನು ಜೂ.5ರಂದು ಹೈದರಾಬಾದ್‌ನ ಸ್ಟಾರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ರಕ್ತನಾಳಗಳು ಬ್ಲಾಕ್ ಆಗಿದ್ದರಿಂದ ವೈದ್ಯರು ಅವರಿಗೆ ಸ್ಟೆಂಟ್ ಅಳವಡಿಸಿ ಐಸಿಯುನಲ್ಲಿ ವೆಂಟಿಲೇಟರ್‌ನಲ್ಲಿ ಇರಿಸಿ ಚಿಕಿತ್ಸೆ ನೀಡುತ್ತಿದ್ದರು. ಶನಿವಾರ ನಸುಕಿನ 3.45ರಲ್ಲಿ ಅವರು ಕೊನೆಯುಸಿರೆಳೆದರು.

ರಾಮೋಜಿ ರಾವ್ ಅವರ ನಿಧನಕ್ಕೆ ನಿಯೋಜಿತ ಪ್ರಧಾನಿ ನರೇಂದ್ರ ಮೋದಿ, ಟಿಡಿಪಿ ನಾಯಕ ಚಂದ್ರಬಾಬು ನಾಯ್ಡು ಹಾಗೂ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್, ಮಾಜಿ ಸಿಎಂ ವೈಎಸ್‌ಆರ್ ಜಗನ್ ಸೇರಿದಂತೆ ಹಲವು ರಾಜಕೀಯ ನಾಯಕರು ಸಂತಾಪ ಸೂಚಿಸಿದ್ದಾರೆ.

ಟಾಲಿವುಡ್ ಸೇರಿದಂತೆ ದಕ್ಷಿಣ ಭಾರತದ ಚಲನಚಿತ್ರರಂಗ ಸಂತಾಪ ಸೂಚಿಸಿದೆ. ಮೆಗಾಸ್ಟಾರ್ ಚಿರಂಜೀವಿ, ಸೂಪರ್‌ಸ್ಟಾರ್ ರಜನಿಕಾಂತ್, ನಟರಾದ ಜ್ಯೂನಿಯರ್ ಎನ್‌ಟಿಆರ್, ಚರಣ್, ಬಾಹುಬಲಿ ನಿರ್ದೇಶಕ ರಾಜಮೌಳಿ, ಸಿನಿರಂಗದ ಪ್ರಮುಖರು ಕಂಬನಿ ಮಿಡಿದಿದ್ದಾರೆ. ತೆಲಂಗಾಣ ಮುಖ್ಯಮಂತ್ರಿಗಳ ಕಚೇರಿ ಸಕಲ ಸರಕಾರಿ ಗೌರವಗಳೊಂದಿಗೆ ರಾಮೋಜಿರಾವ್ ಅಂತ್ಯಕ್ರಿಯೆಗೆ ಆದೇಶ ಹೊರಡಿಸಿದೆ.

ನರೇಂದ್ರ ಮೋದಿ: ರಾಮೋಜಿ ರಾವ್ ಅವರ ನಿಧನ ಅತ್ಯಂತ ದುಃಖ ತಂದಿದೆ. ಅವರು ಭಾರತೀಯ ಮಾಧ್ಯಮ ಲೋಕದಲ್ಲಿ ಕ್ರಾಂತಿ ಮಾಡಿದವರು. ಪತ್ರಿಕೋದ್ಯಮ ಮತ್ತು ಚಲನಚಿತ್ರ ಜಗತ್ತಿಗೆ ಅವರ ಕೊಡುಗೆ ಅಳಿಸಲಾಗದ ಛಾಪು ಮೂಡಿಸಿದೆ. ರಾಮೋಜಿ ಅವರು ಭಾರತದ ಅಭಿವೃದ್ಧಿಯ ಬಗ್ಗೆ ಅಪಾರ ಉತುಕರಾಗಿದ್ದರು. ಅವರೊಂದಿಗೆ ಸಂವಹನ ನಡೆಸಲು ಮತ್ತು ಅವರ ಜ್ಞಾನದಿಂದ ಪ್ರಯೋಜನ ಪಡೆಯಲು ಅನೇಕ ಅವಕಾಶಗಳನ್ನು ಪಡೆದಿರುವುದು ನನ್ನ ಅದೃಷ್ಟ. ಈ ಕಷ್ಟದ ಸಮಯದಲ್ಲಿ ಅವರ ಕುಟುಂಬ, ಸ್ನೇಹಿತರು ಮತ್ತು ಅಸಂಖ್ಯಾತ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ರೇವಂತ್ ರೆಡ್ಡಿ: ಸಮರ್ಥ ಉದ್ಯಮಿ, ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ, ರಾಮೋಜಿ ರಾವ್ ನಿಧನ ಭಾರೀ ಆಘಾತ ಉಂಟು ಮಾಡಿದೆ. ತೆಲುಗು ಪತ್ರಿಕೋದ್ಯಮಕ್ಕೆ ಘನತೆ, ವಿಶ್ವಾಸಾರ್ಹತೆ, ಮೌಲ್ಯಗಳನ್ನು ತಂದುಕೊಟ್ಟವರು ರಾಮೋಜಿರಾವ್ ಅವರು. ಅವರ ನಿಧನದಿಂದ ತೆಲುಗು ಪತ್ರಿಕೋದ್ಯಮದಲ್ಲಿ ಒಂದು ಬಗೆಯ ನಿರ್ವಾತ ಸೃಷ್ಟಿಯಾಗಿದೆ. ಬೇರೆ ಯಾರಿಂದಲೂ ಆ ಖಾಲಿ ಜಾಗವನ್ನು ತುಂಬಲು ಸಾಧ್ಯವೇ ಇಲ್ಲ. ಅವರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ಒದಗಿಸಲಿ.

ಅವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವೆ ಎಂದು ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಕಂಬನಿ ಮಿಡಿದಿದ್ದಾರೆ.

ಚಂದ್ರಬಾಬು ನಾಯ್ಡು: ರಾಮೋಜಿ ರಾವ್ ಅವರೊಂದಿಗೆ ನನ್ನದು 4 ದಶಕಗಳ ನಂಟು. ಅವರು ಒಳ್ಳೆಯದನ್ನು ಒಳ್ಳೆಯದು ಎಂದೂ, ಕೆಟ್ಟದನ್ನು ಕೆಟ್ಟದು ಎಂದೂ ನೇರವಾಗಿ, ಯಾವುದೇ ಮುಲಾಜು ಇಲ್ಲದಂತೆ ಹೇಳಿಬಿಡುತ್ತಿದ್ದರು. ಅವರ ಈ ನಡೆ ನುಡಿಯೇ ನನಗೆ ಬಹಳ ಮೆಚ್ಚಿನದಾಗಿತ್ತು. ಸಮಸ್ಯೆಗಳ ಎದುರಿಸುವ ವಿಚಾರದಲ್ಲಿ ಅವರೇ ನನಗೆ ಸ್ಫೂರ್ತಿ. ಜನರಿಗೆ ಒಳ್ಳೆಯ ಸೇವೆ-ಸೌಲಭ್ಯಗಳನ್ನು ನೀಡುವುದಕ್ಕೆ ರಾಮೋಜಿರಾವ್ ಅವರು ಉತ್ತಮ ಸಲಹೆಗಳನ್ನು ನೀಡುತ್ತಿದ್ದರು. ರಾಮೋಜಿ ಅವರ ನಿಧನ ನನಗೆ ಬಹಳ ದುಃಖ ಉಂಟು ಮಾಡಿದೆ. ಅವರು ಸಾಧಾರಣ ಕುಟುಂಬ ದಲ್ಲಿ ಜನಿಸಿದರೂ ಸಾಧನೆಗಳ ಮೆಟ್ಟಿಲು ಗಳನ್ನು ಒಂದೊಂದಾಗಿ ಏರುತ್ತಾ ಶ್ರೇಷ್ಠತೆ ಯನ್ನು ಮುಟ್ಟಿದರು. ಅವರೊಬ್ಬ ಅಕ್ಷರ ಯೋಧ. ತೆಲುಗು ರಾಜ್ಯಕ್ಕೆ, ದೇಶಕ್ಕೆ ಅವರಿಂದ ಹಲವಾರು ಒಳಿತುಗಳಾಗಿವೆ. ಅವರ ನಿಧನ ತೆಲುಗು ಜನತೆಗಷ್ಟೇ ಅಲ್ಲ, ಇಡೀ ದೇಶಕ್ಕೇ ತುಂಬಲಾರದ ನಷ್ಟ ಎಂದು ಹೇಳಿದ್ದಾರೆ.

ಕೃಷಿ ಕುಟುಂಬದ ಕುಡಿ

ಅವಿಭಜಿತ ಆಂಧ್ರಪ್ರದೇಶದ ಪೆದಪಾರುಪುಡಿ ಗ್ರಾಮದಲ್ಲಿ ಸಾಧಾರಣ ಕೃಷಿ ಕುಟುಂಬದಲ್ಲಿ ಜನಿಸಿದ ರಾಮೋಜಿ ರಾವ್ ಅವರು ದೊಡ್ಡ ಉದ್ಯಮ ಸಮೂಹದ ಒಡೆಯರಾಗಿ ಬೆಳವಣಿಗೆ ಕಂಡಿದ್ದರಲ್ಲಿ ಅವರ ಅಪಾರ ಬುದ್ಧಿಮತ್ತೆ, ದೂರದೃಷ್ಟಿ ಮತ್ತು ಪರಿಶ್ರಮವಿದೆ. ರಾಮೋಜಿ ಸಮೂಹದ ಕಂಪನಿಗಳ ಅಧ್ಯಕ್ಷರಾಗಿದ್ದ ರಾಮೋಜಿ ರಾವ್, ಸಣ್ಣದಾಗಿ ಪ್ರಿಯಾ ಉಪ್ಪಿನ ಕಾಯಿ ತಯಾರಿಕೆ ಘಟಕದಿಂದ ಉದ್ಯಮ ಕ್ಷೇತ್ರ ಪ್ರವೇಶಿಸಿದ್ದರು. ನಂತರದಲ್ಲಿ ಮಾಧ್ಯಮ ಕ್ಷೇತ್ರ, ಸಿನಿಮಾ ರಂಗ, ಬಳಿಕ ಬೃಹತ್ ರಾಮೋಜಿ ಫಿಲಂ ಸಿಟಿಯವರೆಗಿನ ಉದ್ಯಮ ಕ್ಷೇತ್ರದಲ್ಲಿನ ರಾಮೋಜಿ ರಾವ್ ಪಯಣ ರೋಚಕ. ಈ ನಾಡು ಪತ್ರಿಕೆ, ತೆಲುಗಿನಲ್ಲಿ ಆರಂಭಿಸಿದ ಈ ಟಿವಿ ಸುದ್ದಿ ವಾಹಿನಿಯನ್ನು ಬಳಿಕ ಕನ್ನಡ ಸೇರಿದಂತೆ ಹಲವಾರು ಭಾಷೆಗಳಿಗೂ ವಿಸ್ತರಿಸಿದರು. ಉಷಾ ಕಿರಣ ಫಿಲಮ್ಸ್ ಸಂಸ್ಥೆ ಸ್ಥಾಪಿಸಿ ಚಲನಚಿತ್ರ ರಂಗದಲ್ಲೂ ಸಾಧನೆ ಮಾಡಿದರು. ಚಲನ ಚಿತ್ರ ವಿತರಕರಾಗಿಯೂ ಶ್ರಮಿಸಿದ ರಾಮೋಜಿ ರಾವ್, ಮಯೂರಿ ಫಿಲಂ ಡಿಸ್ಟ್ರಿಬ್ಯೂಟರ್ಸ್ ಸಂಸ್ಥೆ ಹುಟ್ಟು ಹಾಕಿದರು. ಮಾರ್ಗದರ್ಶಿ ಚಿಟ್ ಫಂಡ್ ಸ್ಥಾಪನೆ ಮೂಲಕ ಹಣಕಾಸು ಕ್ಷೇತ್ರಕ್ಕೂ ಕಾಲಿರಿಸಿದರು. ಡಾಲ್ಫಿನ್ ಸಮೂಹದ ಹೋಟೆಲ್ ಉದ್ಯಮ ಆರಂಭಿಸಿದರು. ಕಲಾಂಜಲಿ ಷಾಪಿಂಗ್ ಮಾಲ್ ಕೂಡಾ ನಿರ್ಮಿಸಿದ್ದರು.



ಪ್ರಶಸ್ತಿಗಳ ಗೌರವ

ಕಲೆ, ಸಾಹಿತ್ಯ, ಮಾಧ್ಯಮ ಕ್ಷೇತ್ರಗಳಿಗೆ ಅವರ ಕೊಡುಗೆಗಾಗಿ 2016ರಲ್ಲಿ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರಿಂದ ದೇಶದ ಎರಡನೇ ಅತ್ಯುನ್ನತ ಪ್ರಶಸ್ತಿ ಎನಿಸಿಕೊಂಡಿರುವ 'ಪದ್ಮವಿಭೂಷಣ'ದಿಂದ ಪುರಸ್ಕೃತರಾದರು. 4 ಫಿಲಂಫೇರ್ (ದಕ್ಷಿಣ) ಪ್ರಶಸ್ತಿಗಳು, 5 ನಂದಿ ಪ್ರಶಸ್ತಿಗಳು, ರಾಷ್ಟ್ರೀಯ ಫಿಲಂ ಪ್ರಶಸ್ತಿಗಳೂ ಸಂದಿದ್ದವು.

ಮಾಧ್ಯಮ ವಿರುದ್ಧ ತನಿಖೆಗೆ ಮನವಿ

ಎಕ್ಸಿಟ್ ಪೋಲ್: ಸುಪ್ರೀಂಗೆ ಅರ್ಜಿ

ದೆಹಲಿ: ದೇಶದ ಷೇರುಪೇಟೆಯ ಹೂಡಿಕೆದಾರರು ಜೂ.4ರಂದು 31 ಲಕ್ಷ ಕೋಟಿ ರು. ದಿಢೀರ್ ನಷ್ಟ ಅನುಭವಿಸಲು ಮಾಧ್ಯಮ ಸಂಸ್ಥೆಗಳ ಚುನಾವಣೋತ್ತರ ಸಮೀಕ್ಷೆಯೇ ಕಾರಣ. ಹಾಗಾಗಿ ಮಾಧ್ಯಮ ಸಂಸ್ಥೆಗಳ ವಿರುದ್ಧ ತನಿಖೆಗೆ ಆದೇಶಿಸುವಂತೆ ಕೋರಿ ವಕೀಲ ಬಿಎಲ್ ಜೈನ್ ಎಂಬವರು ಸುಪ್ರೀಂ ಕೋರ್ಟ್‌ಗೆ ಶನಿವಾರ ಅರ್ಜಿ ಸಲ್ಲಿಸಿದ್ದಾರೆ. ಜೂ.1ರ ಸಂಜೆ 7ನೇ ಹಂತದ ಮತದಾನ ಮುಗಿದ ನಂತರ ಮಾಧ್ಯಮ ಸಂಸ್ಥೆಗಳು ಪ್ರಸಾರ ಮಾಡಿದ ಎಕ್ಸಿಟ್ ಪೋಲ್ ಮತ್ತು ಆ ಕುರಿತ ಚರ್ಚೆ ಜೂ.3ರವರೆಗೆ ಷೇರುಪೇಟೆಯಲ್ಲಿ ಹೂಡಿಕೆ ಮಾಡುವಂತೆ ಜನರನ್ನು ಪ್ರೇರೇಪಿಸಿದವು. ಜೂ.4 ರಂದು ಫಲಿತಾಂಶ ಪ್ರಕಟವಾದ ನಂತರ ಷೇರುಪೇಟೆ ಕುಸಿಯಿತು. ಪರಿಣಾಮ, ಹೂಡಿಕೆದಾರರಿಗೆ 31 ಲಕ್ಷ ಕೋಟಿ ರು. ನಷ್ಟವಾಯಿತು ಎಂದು ಅರ್ಜಿದಾರರು ಹೇಳಿದ್ದಾರೆ.

ಮುಂದೊಂದು ದಿನ ಸರಕಾರ ರಚನೆ: ದೀದಿ

ಕೋಲ್ಕತ್ತ: ಪ್ರತಿಪಕ್ಷಗಳ 'ಇಂಡಿಯ' ಒಕ್ಕೂಟ ಈಗ ಕೇಂದ್ರದಲ್ಲಿ ಸರಕಾರ ರಚನೆಗೆ ಹಕ್ಕು ಮಂಡಿಸದಿರಬಹುದು. ಆದರೆ ಮುಂದೊಂದು ದಿನ ಸರಕಾರ ರಚನೆ ಮಾಡುವುದಿಲ್ಲ ಎಂದೇನೂ ಅಲ್ಲ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶನಿವಾರ ಹೇಳಿದ್ದಾರೆ. 'ನಮ್ಮ ಪಕ್ಷ ಕಾದು ನೋಡುವ ತಂತ್ರದಲ್ಲಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ದುರ್ಬಲ ಹಾಗೂ ಅಸ್ಥಿರವಾಗಿದೆ. ಅದನ್ನು ಅಧಿಕಾರದಿಂದ ದೂರವಿಟ್ಟರೆ ನನಗೆ ಸಂತೋಷವಾಗುತ್ತದೆ ಎಂದಿದ್ದಾರೆ. ಈ ಜನಾದೇಶ ನರೇಂದ್ರ ಮೋದಿ ವಿರುದ್ಧವಾಗಿದೆ. ಆದ್ದರಿಂದ ಅವರು ಈ ಬಾರಿ ಪ್ರಧಾನಿಯಾಗಬಾರದು. ಬೇರೆಯವರು ಆಗಬೇಕಿತ್ತು. ಆದರೂ ಅವರಿಗೆ ಅಧಿಕಾರ ವಹಿಸಿಕೊಳ್ಳಲು ಅವಕಾಶ ನೀಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದೇಶಕ್ಕೆ ಬದಲಾವಣೆ ಬೇಕಿದೆ. ಈ ಜನಾದೇಶ ಬದಲಾವಣೆ ಕೋರಿದ್ದೇ ಆಗಿದೆ. ಪರಿಸ್ಥಿತಿ ಮೇಲೆ ನಿಗಾ ಇಟ್ಟು ಕಾಯುತ್ತೇವೆ ಎಂದು ಟಿಎಂಸಿ ಸಂಸದರ ಸಭೆ ನಂತರ ಮಮತಾ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

3ನೇ ಬಾರಿ ಬಿಜೆಪಿ ಸರಕಾರ; ದೇವಿಗೆ ಬೆರಳು ಅರ್ಪಣೆ

ಬಲರಾಮ್‌ಪುರ: ಛತ್ತೀಸ್‌ಗಡ ರಾಜ್ಯದ ಬಲರಾಮ್‌ಪುರದಲ್ಲಿ ಬಿಜೆಪಿ ಅಭಿಮಾನಿಯೊಬ್ಬ ಪಕ್ಷ ಕೇಂದ್ರದಲ್ಲಿ 3ನೇ ಬಾರಿಗೆ ಅಧಿಕಾರಕ್ಕೆ ಬಂದಿದ್ದಕ್ಕೆ ಕಾಳಿ ಮಾತೆಗೆ ಕೈ ಬೆರಳನ್ನೇ ಕತ್ತರಿಸಿ ಅರ್ಪಿಸಿದ್ದಾನೆ!

ಬಲರಾಮ್‌ಪುರದ ದುರ್ಗೇಶ್ ಪಾಂಡೆ ಎಂಬ ಯುವಕ ಹರಕೆ ತೀರಿಸುವ ಸಲುವಾಗಿ ತನ್ನ ಕೈಬೆರಳನ್ನೇ ಕತ್ತರಿಸಿ ಕಾಳಿ ದೇವಿಗೆ ಅರ್ಪಿಸಿದ್ದಾನೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ಮತ್ತೊಮ್ಮೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ದೇವರಿಗೆ ಬೆರಳನ್ನು ಅರ್ಪಣೆ ಮಾಡುವುದಾಗಿ ಹರಕೆ ಕಟ್ಟಿಕೊಂಡಿದ್ದನಂತೆ. ಮೋದಿ ಸರಕಾರ 3ನೇ ಬಾರಿ ನನಸಾಗಿರುವುದರಿಂದ ದುರ್ಗೇಶ್ ಹರಕೆ ತೀರಿಸಿದ್ದಾನೆ. ಬೆರಳು ಕತ್ತರಿಸಿದ್ದರಿಂದ ದೇಗುಲದಲ್ಲೆಲ್ಲಾ ರಕ್ತ ಚೆಲ್ಲಾಡಿದೆ. ರಕ್ತ ಧಾರಾಕಾರ ಹರಿದುಹೋಗಿದ್ದರಿಂದ ದುರ್ಗೇಶ್ ಬಳಲಿದ್ದ. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ.

ಉದ್ಧವ್ ಬಣದ ಇಬ್ಬರು ಸಂಸದರು ಶಿಂದೆ ಕಡೆಗೆ?

ದೆಹಲಿ: ಶಿವಸೇನೆ (ಉದ್ಧವ್ ಬಣ) ಯಿಂದ ಹೊಸದಾಗಿ ಆಯ್ಕೆಯಾದ ಇಬ್ಬರು ಲೋಕಸಭಾ ಸದಸ್ಯರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂದೆ ಸಂಪರ್ಕದಲ್ಲಿದ್ದಾರೆ ಎಂದ ಶಿವಸೇನಾ ವಕ್ತಾರ ನರೇಶ್ ಮಾಸ್ಕೆ, ಪಕ್ಷಾಂತರ ನಿಷೇಧ ಕಾನೂನು ಉಲ್ಲೇಖಿಸಿ ಇಬ್ಬರು ಲೋಕಸಭಾ ಸದಸ್ಯರನ್ನು ಹೆಸರಿಸಲು ನಿರಾಕರಿಸಿದರು. ಇನ್ನೂ ನಾಲ್ವರು ಶಾಸಕರು ಸೇರಿದಂತೆ ಹಲವರು ಶೀಘ್ರವೇ ಶಿಂಧೆ ನೇತೃತ್ವದ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದರು. ಉದ್ಧವ್ ಅವರು ಬಸ್‌ಗಳಲ್ಲಿ ಬಂದ ಒಂದು ಸಮುದಾಯದವರ ಬಳಿ ಮತ ಯಾಚಿಸಿದ ರೀತಿಗೆ ಲೋಕಸಭೆಯ ಇಬ್ಬರು ನೂತನ ಸದಸ್ಯರು ಅಸಮಾಧಾನಗೊಂಡಿದ್ದಾರೆ' ಎಂದು ಥಾಣೆ ಕ್ಷೇತ್ರಮ್ಹಾಸ್ಕೆ ಹೇಳಿದರು. ಇಬ್ಬರಷ್ಟೇ ಅಲ್ಲದೇ, ಉದ್ಧವ್ ಬಣದ ಇನ್ನೂ ನಾಲ್ವರು ಶಿಂದೆ ಜತೆಗೂಡಿ ಮೋದಿ ಅವರನ್ನು ಬೆಂಬಲಿಸುತ್ತಾರೆ ಎಂದರು.

ಸರಕಾರಿ ಶಾಲೆಗಳ ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನ

ಕೊಪ್ಪಳ: ಪ್ರಸಕ್ತ ವರ್ಷಕ್ಕೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಸಮನ್ವಯ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನಕ್ಕೆ ಖಾಲಿ ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಶೇಷ ಸಂಪನ್ಮೂಲ ಶಿಕ್ಷಕರ (ಐಇಆರ್‌ಟಿ) ಹುದ್ದೆಗೆ ಅರ್ಜಿ ಆಹ್ವಾನ. ನೇರ ಗುತ್ತಿಗೆಯಡಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನ. ಪೂರ್ವ ಪ್ರಾಥಮಿಕ ಹಾಗೂ 1 ರಿಂದ 5ನೇ ತರಗತಿ, 6 ರಿಂದ 8ನೇ ತರಗತಿ ಮತ್ತು 9 ರಿಂದ 12ನೇ ತರಗತಿ ಬೋಧಿಸಲು ವಿಶೇಷ ಶಿಕ್ಷಕರು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ಆರ್‌ಸಿಐ ನಲ್ಲಿ ನೋಂದಣಿ ಹೊಂದಿದ ಹಾಗೂ ಸಿ.ಆರ್.ಆರ್ ನಂಬರ್ ಮಾನ್ಯತೆ ಹೊಂದಿರುವ ಹಾಗೂ ಚಾಲ್ತಿಯಲ್ಲಿರುವ ಸಂಸ್ಥೆಗಳಿಂದ ನಿಗದಿತ ವಿದ್ಯಾರ್ಹತೆ ಹೊಂದಿರಬೇಕು. ವಿಶೇಷ ಶಿಕ್ಷಕರ ಕಾರ್ಯಕ್ಷಮತೆ ಪ್ರಮಾಣ ಪತ್ರ ಸಲ್ಲಿಸಬೇಕು. ಒಂದೇ ವಿಷಯಕ್ಕೆ ಹೆಚ್ಚಿನ ಅರ್ಜಿ ಸ್ವೀಕೃತವಾದಲ್ಲಿ ಸೇವಾ ಜೇಷ್ಠತೆ ಪರಿಗಣಿಸಲಾಗುವುದು. ಸೇವಾ ಜೇಷ್ಠತೆ ಒಂದೇ ಆದಲ್ಲಿ ಅಂಕ ಪರಿಗಣಿಸಲಾಗುವುದು. ಎರಡು ಮಾನದಂಡಗಳು ಒಂದೇ ಆಗಿದ್ದಲ್ಲಿ ಮಹಿಳಾ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು. ಆಸಕ್ತರು ಜೂ.10 ರ ಒಳಗೆ ಅಗತ್ಯ ದಾಖಲೆಗಳೊಂದಿಗೆ ಉಪನಿರ್ದೇಶಕರು ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಕೊಪ್ಪಳ ಇಲ್ಲಿಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ಮೊಬೈಲ್ ಸಂಖ್ಯೆ 9480695414 ಕ್ಕೆ ಸಂಪರ್ಕಿಸಬಹುದು.

ಪ್ರತಿದಿನ ಪರಿಸರ ದಿನ ಆಚರಣೆ ಮಾಡಿ: ಚಂದ್ರಶೇಖರ

ಹಗರಿಬೊಮ್ಮನಹಳ್ಳಿ: ಪರಿಸರ ದಿನಾಚರಣೆಯ ದಿನ ಸಸಿ ನೆಡುವುದು, ಗಿಡಗಳಿಗೆ ನೀರುಣಿಸುವುದಷ್ಟೇ ಪರಿಸರ ಕಾಳಜಿಯಲ್ಲ, ಪ್ರತಿಯೊಬ್ಬರೂ ಪ್ರತಿದಿನ ಪರಿಸರ ಸಂರಕ್ಷಣೆಯಲ್ಲಿ ತೊಡಗುವಂತಾದಾಗ ಪರಿಸರ ಪ್ರಜ್ಞೆ ಜನಸಾಮಾನ್ಯರಲ್ಲಿ ಬೆಳೆಯುತ್ತದೆ ಎಂದು ತಹಸೀಲ್ದಾರ್ ಚಂದ್ರಶೇಖರ ಶಂಭಣ್ಣ ಗಾಳಿ ಹೇಳಿದರು.

ಪಟ್ಟಣದ ಆಡಳಿತ ಸೌಧದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿ, ಇಂದು ಮನುಷ್ಯ ಪರಿಸರದ ವಿಷಯದಲ್ಲಿ ತನ್ನ ಇತಿಮಿತಿಗಳನ್ನು ಮೀರಿ ಪರಿಸರವನ್ನು ಅವನತಿಯತ್ತ ಕೊಂಡೊಯ್ಯುತ್ತಿರುವುದು ಪರಿಸರ ವಿಕೋಪಕ್ಕೆ ಕಾರಣವಾಗುತ್ತಿದೆ. ಪರಿಸರ ನಾಶದಿಂದ ಸಕಾಲಕ್ಕೆ ಮಳೆಯಾಗದೇ ಅತಿವೃಷ್ಟಿ, ಭೂಕಂಪನಗಳು ಸಂಭವಿಸುತ್ತಿವೆ. ಕೈಗಾರಿಕೆಗಳಿಂದ ಕಲುಷಿತ ನೀರು, ವಿಷಾನಿಲಗಳ ಮಲಿನವಾಗುವುದು ಸೇರಿದಂತೆ ಪರಿಸರದ ಮೇಲೆ ವ್ಯತಿರಿಕ್ತವಾದ ಪರಿಣಾಮ ಉಂಟಾಗುತ್ತದೆ. ಪರಿಸರದ ಕಾಳಜಿ ಬಗ್ಗೆ ಅಪಸ್ವರವುಂಟಾದರೆ ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಗಾಳಿ ನೀಡಲು ಅಸಾಧ್ಯ. ಇಂದು ನೀರು ಕೊಂಡುಕೊಳ್ಳುವ ಹಾಗೆ ಉತ್ತಮ ಗಾಳಿಯನ್ನು ಹುಡುಕುವ ಪರಸ್ಥಿತಿ ಉಂಟಾದರೂ ಅಚ್ಚರಿಪಡುವಂತಿಲ್ಲ. ಪ್ರತಿಯೊಬ್ಬರೂ ತಮ್ಮ ಮನೆಯಂಗಳದಲ್ಲಿ ಗಿಡಗಳನ್ನು ನೆಟ್ಟು ಕಾಳಜಿವಹಿಸಿ ಬೆಳೆಸಬೇಕಿದೆ. ಸ್ವಚ್ಛ ಸುಂದರ ಪರಿಸರದಿಂದ ಉತ್ತಮ ಆರೋಗ್ಯವನ್ನು ಪಡೆಯಬಹುದು. ಆಚರಣೆ ನಿಮಿತ್ತ ಗಿಡಗಳಿಗೆ ನೀರು ಹಾಕದೇ ಪ್ರತಿದಿನ ಅವುಗಳ ಕಾಳಜಿವಹಿಸಿಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಚಿಮ್ಮನಹಳ್ಳಿ ಸಿದ್ದಪ್ಪ, ಆರಣ್ಯ ಇಲಾಖೆಯ ಲೀಲಾ, ತಾಲೂಕು ಕಚೇರಿಯ ಅಧಿಕಾರಿ ಹಾಗೂ ಸಿಬ್ಬಂದಿ ಇದ್ದರು.



ಹಗರಿಬೊಮ್ಮನಹಳ್ಳಿ ಪಟ್ಟಣದ ಆಡಳಿತ ಸೌಧದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ತಹಸೀಲ್ದಾರ್ ಚಂದ್ರಶೇಖರ ಶಂಭಣ್ಣ ಗಾಳಿ ಇದ್ದರು.

ವಿರುಪಾಕ್ಷಿ ಹೇಳಿಕೆಗೆ ನರಸಿಂಹಲು ತಿರುಗೇಟು

ರಾಯಚೂರು: ಯಾವ ಇಲಾಖೆ ಯಾರಿಗೆ ಬರುತ್ತದೆ ಯಾರ ಬಗ್ಗೆ ಮಾತನಾಡುತ್ತಿದ್ದೇವೆ ಎನ್ನುವ ಪರಿಜ್ಞಾನವಿಲ್ಲದೇ ಜಿಲ್ಲಾಧ್ಯಕ್ಷ ಎಂ ವಿರುಪಾಕ್ಷಿ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಮುಖಂಡರು ಹಾಗೂ ರಾಯಚೂರು ನಗರಾಭಿವೃದ್ಧಿ

ಸದಸ್ಯ ನರಸಿಂಹಲು ಮಾಡಗಿರಿ ತಿರುಗೇಟು ನೀಡಿದ್ದಾರೆ. ಜೆಡಿಎಸ್ ಪಕ್ಷದ ಕುಮಾರ ಸ್ವಾಮಿ, ಪ್ರಜ್ವಲ್ ರೇವಣ್ಣ ಅವರ ಕರ್ಮ ಕಾಂಡ ಬಗ್ಗೆ ಮಾತನಾಡುವ ಬದಲು ಬೇರೆಯವರನ್ನು ಟೀಕಿಸುತ್ತಿದ್ದಾರೆ. ವಿರುಪಾಕ್ಷಿ ಅವರು ಹೇಳಿಕೆ ನೀಡುವ ಭರಾಟೆಯಲ್ಲಿ ಯಾವ ಇಲಾಖೆ ಯಾರಿಗೆ ಸೇರಿದೆ ಎನ್ನುವ ಮಾಹಿತಿ ಇಲ್ಲದೆ ಟೀಕಿಸಿದ್ದನ್ನು ಹೇಳಿದ್ದಾರೆ. ಜಾತಿಕೆ ಮಟ್ಟದಲ್ಲಿ ಭಾರಿ ಚರ್ಚೆಗೆ ಕಾರಣವಾದ ಪ್ರಜ್ವಲ್ ರೇವಣ್ಣ ಮತ್ತು ಕುಮಾರ್ ಸ್ವಾಮಿ ಲೈಂಗಿಕ ಹಗರಣದ ಬಗ್ಗೆ ಮೊದಲು ಮಾತನಾಡಲಿ ವಾಲ್ಮೀಕಿ ನಿಗಮದ ಬಗ್ಗೆ ಆರೋಪಿಸುತ್ತಿದ್ದಾರೆ. ಈ ಆರೋಪದಲ್ಲಿ ಇಲಾಖೆಯೊಂದಿಗೆ ಯಾವುದೇ ಸಂಬಂಧವಿಲ್ಲದ ಸಣ್ಣ ನೀರಾವರಿ ಮತ್ತು ವಿಜ್ಞಾನ ಹಾಗೂ ತಂತ್ರ ಜ್ಞಾನ ಸಚಿವ ಬೋಸರಾಜು ಅವರ ಬಗ್ಗೆ ಮಾತನಾಡುತ್ತಿದ್ದಾರೆ. ಯಾರು, ಯಾವ ಇಲಾಖೆ ಸಚಿವರು ಎಂದು ತಿಳಿದು ಮಾತನಾಡಬೇಕು ಎಂದು ವಿರೂಪಾಕ್ಷ ಅವರ ನಿನ್ನೆಯ ಹೇಳಿಕೆಗೆ ಪ್ರತಿಕ್ರಿಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸೋಲಾರ್ ವಿದ್ಯುತ್ ದುರಸ್ತಿಗೆ ಒತ್ತಾಯ

ಮುದಗಲ್: ಪಟ್ಟಣ ಸಮೀಪದ ಬನ್ನಿಗೋಳ ಗ್ರಾಮದಲ್ಲಿ ಅಳವಡಿಸಿದ ಸೋಲಾರ್ ವಿದ್ಯುತ್

ದುರಸ್ಥಿ ಮಾಡಬೇಕು ಎಂದು ಗಾಮಸ್ಥರು ಒತ್ತಾಯಿಸಿದ್ದಾರೆ. 2023-24 ನೇ ಸಾಲಿನ ಜಲಾನಯನ ಅಭಿವೃದ್ಧಿ ಇಲಾಖೆಯ ರೇವಾರ್ಡ್ ಯೋಜನಯಡಿ, ಕೃಷಿ ಇಲಾಖೆ ಲಕ್ಷಾಂತರ ಖರ್ಚು ಮಾಡಿ ಬನ್ನಿಗೋಳ ಗ್ರಾಮದಲ್ಲಿ ಹತ್ತು ಸೋಲಾರ್ ವಿದ್ಯುತ್ ದೀಪ ಅಳವಡಿಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷದಿಂದ ಸಮರ್ಪಕವಾಗಿ ನಿರ್ವಹಣೆ ಇಲ್ಲದೆ ಬೆಳಗುತ್ತಿಲ್ಲ. ದುರಸ್ಥಿ ಕಂಡಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ವಿಶ್ರಾಂತಿ ಪಡೆಯುವ ಸಲುವಾಗಿ ಸಿಮೆಂಟ್ ಕುರ್ಚಿ ನಿರ್ಮಾಣ ಮಾಡಲಾಗಿದೆ. ಕಳಪೆ ಕಾಮಗಾರಿ ಮಾಡಿದ ಕುರ್ಚಿ ಮುರಿದು ಉಪಯೋಗಕ್ಕೆ ಬಾರದಂತಾಗಿದೆ. ಜಾನುವಾರುಗಳಿಗೆ ಕುಡಿಯುವ ನೀರಿನ ತೊಟ್ಟಿ ನಿರ್ಮಾಣ ಮಾಡಿದ್ದಾರೆ. ಈವರೆಗೂ ನೀರು ತುಂಬಿಸುವ ಕೆಲಸ ಮಾಡಿಲ್ಲ. ಕಾಮಗಾರಿ ಮಾಡಿದರು ಯಾವುದೆ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು.

ಜಿಲಾ ಕಾರ್ಯದರ್ಶಿ ಪ್ರವಾಸ ಜೂ.11ಕ್ಕೆ

ಹೊಸಪೇಟೆ: ವಸತಿ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಜೂನ್ ತಿಂಗಳಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಜೂ.11ರಂದು ಬೆಳಗ್ಗೆ 6 ಗಂಟೆಗೆ ಬೆಂಗಳೂರಿನಿಂದ ರಸ್ತೆಯ ಮುಖಾಂತರ ಹೊರಟು ಬೆಳಗ್ಗೆ 11 ಗಂಟೆಗೆ ವಿಜಯನಗರ ಜಿಲ್ಲೆಗೆ ಆಗಮಿಸುವರು. ಬಳಿಕ 11.30ಕ್ಕೆ ಜಿಲ್ಲಾಧಿಕಾರಿಗಳೊಂದಿಗೆ ಹಾಗೂ ಇತರೆ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಮಧ್ಯಾಹ್ನ 3 ರಿಂದ ಜಿಲ್ಲೆಯ ವಿವಿಧೆಡೆ ಸ್ಥಳ ಪರಿವೀಕ್ಷಣೆ ನಡೆಸಲಿದ್ದಾರೆ. ಬಳಿಕ ಜಿಲ್ಲೆಯಲ್ಲಿ ವಾಸ್ತವ್ಯ ಹೂಡುವರು. ಜೂ.12ರಂದು ಜಿಲ್ಲೆಯಲ್ಲಿ ಪುನಃ ಸ್ಥಳ ಪರಿಶೀಲನೆ ನಡೆಸುವರು. ಅಂದು ಮಧ್ಯಾಹ್ನ 2 ಗಂಟೆಗೆ ವಿಜಯನಗರದಿಂದ ನಿರ್ಗಮಿಸಿ ರಸ್ತೆಯ ಮುಖಾಂತರ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಸರಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೋಸರಾಜು, ದದಲ್ ರಾಜೀನಾಮೆ ಸರಿಯೆಲ್ಲ

ರಾಯಚೂರು: ರಾಜ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್ ಎಸ್ ಭೂಸರಾಜು ಮತ್ತು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ನಿಗಮದ ಅಧ್ಯಕ್ಷ ಬಸವನ ಗೌಡ ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಹಿತರಕ್ಷಣ ಸಮಿತಿ ಅಧ್ಯಕ್ಷ ಹನುಮಂತು ನಾಯಕ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 187 ಕೋಟಿ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದ ಪ್ರತಿಕ್ರಿಯಿಸಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೆ ಆರೋಪ ಸಾಬೀತಾಗುವ ಪೂರ್ವ ರಾಜ್ಯ ಸಚಿವ ನಾಗೇಂದ್ರ, ರಾಜೀನಾಮೆ ಪಡೆದಿರುವುದು ಸರಿಯಲ್ಲ. ಈ ಪ್ರಕರಣದಲ್ಲಿ ಯಾವುದೇ ರೀತಿ ಬಾಗಿಯಲ್ಲದ ರಾಜ್ಯ ಸಣ್ಣ ನೀರಾವರಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಬೋಸರಾಜು ಹಾಗೂ ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ರಾಜೀನಾಮೆ ನೀಡುವ ಅಗತ್ಯವಿಲ್ಲ. ಪ್ರಕರಣದ ಬಗ್ಗೆ ತನಿಖೆ ಪರ್ಣಗೊಂಡ ನಂತರ, ಈ ಪ್ರಕರಣದಲ್ಲಿ ಅವರು ಆರೋಪಿತರೆಂದು ಸಾಬೀತಾದರೆ, ಮಾತ್ರ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡುವುದು ಸರಿಯಾದ ಕ್ರಮವಾಗಿದೆ. ಈ ಹಿಂದೆ ಇದೆ ರೀತಿಯಲ್ಲಿ ಮಹಿಳೆಯ ಪ್ರಕರಣ ಒಂದರಲ್ಲಿ ರಮೇಶ್ ಜಾರಕಿಹೊಳಿ ಅವರಿಗೆ ಅನ್ಯಾಯ ಮಾಡಲಾಯಿತು. ಈಗ ನಾಗೇಂದ್ರಪ್ಪ ಹಾಗೂ ದದ್ದಲ್ ಬಸನಗೌಡ ಈ ರೀತಿ ಸಮುದಾಯದ ನಾಯಕರುಗಳಿಗೆ ಅನ್ಯಾಯ ಮಾಡುವುದು ಸರಿಯಲ್ಲ.

ವಿವಿಧ ಗ್ರಾಮಗಳಿಗೆ ಸಿಡಿಪಿಒ ಭೇಟಿ

ಮುದಗಲ್: ನಾಗಲಾಪೂರು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಸ್ವಚ್ಛತಾ ನೋಡಲ್ ಅಧಿಕಾರಿ ಹಾಗೂ ಲಿಂಗಸುಗೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ. ಡಿ. ಗೋಕುಲ್ ಭೇಟಿ ನೀಡಿ ಪರಿಶೀಲನೆ ಮಾಡಿದರು. ಛತ್ತರ, ನಾಗಲಾಪುರು, ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಆರೋಗ್ಯದ ಹಿತದೃಷ್ಟಿಯಿಂದ ಸಾರ್ವಜನಿಕರು ಶುದ್ಧ ಕುಡಿಯುವ ನೀರು ಬಳಕೆ ಮಾಡಬೇಕು ಮನೆಯ ಸುತ್ತ ಸ್ವಚ್ಛತೆ ಕಾಪಾಡಬೇಕು ಎಂದು ಹೇಳಿ ನಂತರ ಅಂಗನವಾಡಿ ಕೇಂದ್ರಗಳಿಗೆ ಕೂಡ ಭೇಟಿ ಪರಿಶೀಲನೆ ಮಾಡಿದರು.

ದಾಖಲೆ ಇದ್ದರೆ ಸಂಸ್ಥೆಗೆ ನೀಡಿ

ನೀತಿ ಸಂಹಿತೆ ಇರುವ ಪರಿವಿಲ್ಲದೆ ನನ್ನ ವಿರುದ್ಧ ಸುಳ್ಳು ಆರೋಪ ಖಂಡನೀಯ

ರಾಯಚೂರು: ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ 187 ಕೋಟಿ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿ ನನ್ನ ವಿರುದ್ಧ ವಿರೋಧ ಪಕ್ಷಗಳಲ್ಲಿ ಏನಾದರೂ

ಸಾಕ್ಷಿ ದಾಖಲೆಗಳಿದ್ದರೆ, ತನಿಖಾ ಸಂಸ್ಥೆಗೆ ನೀಡಲಿ. ಇದರಿಂದ ತನಿಖೆಗೆ ಮತ್ತು ಸತ್ಯಾಂಶ ಹೊರಬರಲು ಸಹ ಕಾರಿಯಾಗುತ್ತದೆ ಎಂದು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ರಾಜ್ಯ ಅಧ್ಯಕ್ಷ ಹಾಗೂ ಶಾಸಕ ಬಸವನಗೌಡ ದದ್ದಲ್ ತಿರುಗೇಟು ನೀಡಿದ್ದಾರೆ.

ರಾಜ್ಯ ಸರಕಾರ ರಚಿಸಿದ ಎಸ್‌ಐಟಿಗೆ ದೂರು ದಾಖಲಿಸಿದ ನಂತರ ಇವರನ್ನು ಈ ಪ್ರಕರಣದಲ್ಲಿ ಕೆಲವರನ್ನು ಬಂಧಿಸಲಾಗಿದೆ. ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ವಿಭಾಗೀಯ ವ್ಯವಸ್ಥಾಪಕರು ನೀಡಿದ ದೂರಿನ ಮೇರೆಗೆ ಸಿಬಿಐ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದೆ. ಈ ಪ್ರಕರಣದಲ್ಲಿ ವಿರೋಧ ಪಕ್ಷಗಳು ಅನಗತ್ಯವಾಗಿ ನನ್ನ ವಿರುದ್ಧ ಆರೋಪ ಮಾಡುತ್ತಿರುವುದು ಸತ್ಯಕ್ಕೆ ದೂರವಾಗಿದೆ. ಅಧ್ಯಕ್ಷರಾಗಿ ನಾನು ಅಧಿಕಾರ ಸ್ವೀಕರಿಸಿಕೊಂಡ ನಂತರ ಲೋಕಸಭೆ ಚುನಾವಣೆಯ ನೀತಿ ಸಂಹಿತೆ ಜಾರಿಗೊಂದಿತ್ತು. ಹಗರಣದ ಅವಧಿಯಲ್ಲಿ ನೀತಿ ಸಂಹಿತೆ ಇರುವ ಪರಿವಿಲ್ಲದೆ



ದಿನಾಂಕ:08/06/2024

ಪತ್ರಿಕಾ ಹೇಳಿಕೆ

ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿದೆ. ಎನ್ನಲಾದ ರೂ. 187.00 ಕೋಟಿಗಳ ಹಗರಣದ ತನಿಖೆಯು ರಾಜ್ಯ ಸರ್ಕಾರ ನೇಮಿಸಿದ ಎಸ್.ಐ.ಟಿ ದೂರು ದಾಖಲಿಸಿ 5 ಜನ ಆರೋಪಿಗಳನ್ನು ಬಂಧಿಸಿದೆ. ಮತ್ತು ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ನೀಡಿದ ದೂರಿನ ಮೇರೆಗೆ ಸಿ.ಬಿ.ಐ. ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದೆ. ವಾಲ್ಮೀಕಿ ನಿಗಮದ ಅನುದಾನವು ಪರಿಶಿಷ್ಟ ಪಂಗಡದ ಸಮುದಾಯದ ಅಭಿವೃದ್ಧಿ ಮೀಸಲಾಗಿದ್ದು, ಸದರಿ ಅನುದಾನವು ಆ ಸಮುದಾಯದ ಪೂರಕ ಬೆಳವಣಿಗೆಗೆ ಬಳಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷಗಳು ಅನಗತ್ಯವಾಗಿ ನನ್ನ ಮೇಲೆ ಮಾಡಿರುವ ಆರೋಪವು ಸತ್ಯಕ್ಕೆ ದೂರವಾಗಿರುತ್ತದೆ. ಅಲ್ಲದೇ ಸದರಿ ಹಗರಣ ನಡೆದ ಅವಧಿ ಮತ್ತು ನಾನು ನಿಗಮದ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ನಂತರ ಲೋಕಸಭಾ ಚುನಾವಣೆ ಅಧಿಸೂಚನೆ ಹಿನ್ನಲೆಯಲ್ಲಿ ರಾಜ್ಯದ್ಯಂತ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ.

ಈಗಾಗಲೇ ಎಸ್.ಐ.ಟಿ. ಮತ್ತು ಸಿ.ಬಿ.ಐ. ಸಂಸ್ಥೆಗಳು ತನಿಖೆ ನಡೆಸುತ್ತಿದ್ದು, ಖಂಡಿತವಾಗಿಯೂ ನಿಗಮದ ಹಣ ಯಾರೇ ಖಬಳಿಸಲು ಪ್ರಯತ್ನಿಸಿದರು ತನಿಖೆಯಲ್ಲಿ ಹೊರಬರುತ್ತದೆ. ಆರೋಪಿತರ ಮೇಲೆ ಸರ್ಕಾರ ಸೂಕ್ತ ಕಾನೂನು ಕ್ರಮ ಜರುಗಿಸುತ್ತದೆ. ಯಾರನ್ನು ರಕ್ಷಿಸುವ ಮಾತೇ ಇರುವುದಿಲ್ಲ. ವಿರೋಧ ಪಕ್ಷಗಳು ನನ್ನ ಮೇಲೆ ಮಾಡುತ್ತಿರುವ ಆರೋಪಕ್ಕೆ ಯಾವುದಾರರೂ ಸಾಕ್ಷಿ ಅವರ ಬಳಿ ಇದ್ದಲ್ಲಿ ತನಿಖಾ ಸಂಸ್ಥೆಗಳೇ ನೀಡಿದ್ದಲ್ಲಿ ತನಿಖೆಗೆ ಅನುಕೂಲಕವಾಗುತ್ತದೆ. ಮತ್ತು ಸತ್ಯಂಶ ಹೊರ ಬರಲು ಸಾಧ್ಯವಾಗುತ್ತದೆ. ಅಲ್ಲಿವರೆಗೂ ವಿರೋಧ ಪಕ್ಷಗಳು ವ್ಯತ ಆರೋಪವನ್ನು ಮಾಡುವುದನ್ನು ಕೈಬಿಡಬೇಕು.

ನಾನು ಪರಿಶಿಷ್ಟ ಪಂಗಡಗಳ ಸಮುದಾಯಕ್ಕೆ ಮೀಸಲಿದ್ದ ವಿಧಾನಸಭಾ ಕ್ಷೇತ್ರದಿಂದ ಚುನಾಯಿತನಾಗಿದ್ದು, ಯಾವುದೇ ಕಾರಣಕ್ಕೂ ಆ ಸಮುದಾಯದ ಹಿತ ಕಾಪಾಡುವುದು ನನ್ನ ಕರ್ತವ್ಯವಾಗಿದ್ದು, ಸರ್ಕಾರ ಸದರಿ ನಿಗಮಕ್ಕೆ ನನ್ನನ್ನು ಅಧ್ಯಕ್ಷನಾಗಿ ನೇಮಿಸಿರುವುದು ರಾಜ್ಯಾದ್ಯಂತ ವಾಸಿಸುತ್ತಿರುವ ನನ್ನ ಸಮುದಾಯಕ್ಕೆ ಸೇವೆ ಮಾಡಲು ಅವಕಾಶ ನೀಡಿದೆ ಎಂದೇ ಭಾವಿಸಿ ಕೆಲಸ ಮಾಡಲು ಉದ್ದೇಶಿಸಿರುತ್ತೇನೆ. ಆದರೆ ದುರಾದೃಷ್ಟ ಪಟಬದ್ಧ ಹಿತಾಸಕ್ತ ವ್ಯಕ್ತಿಗಳಿಂದ ನಿಗಮದ ಅನುದಾನ ದುರ್ಬಳಕೆಯಾಗಿರುವುದು ನನಗೆ ನೋವುಂಟು ಮಾಡಿರುತ್ತದೆ. ಸರ್ಕಾರವು ಸದರಿ ಪ್ರಕರಣವನ್ನು ಕುಲಂಕುಶವಾಗಿ ತನಿಖೆಗೆ ಒಳಪಡಿಸುತ್ತಿದ್ದು, ಯಾರೇ ಆರೋಪಿಗಳಾಗಿದ್ದರು ಕಾನೂನು ವ್ಯಾಪ್ತಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುತ್ತದೆ ಎಂದು ನಂಬಿರುತ್ತೇನೆ.

ಸದರಿ ಪ್ರಕರಣದಲ್ಲಿ ನಿಗಮದ ಅಧ್ಯಕ್ಷನಾಗಿ ನನ್ನ ಪಾತ್ರ ಏನು ಇಲ್ಲ ಎಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲು ಬಯಸುತ್ತೇನೆ. ಯಾರೇ ಏನೇ ಆರೋಪ ಮಾಡಿದ್ದರು ಸತ್ಯಕ್ಕೆ ದೂರವಾಗಿರುತ್ತದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಬಸವನಗೌಡ ದದ್ದಲ್)
ಅಧ್ಯಕ್ಷರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

ನನ್ನ ವಿರುದ್ಧ ಸುಳ್ಳು ಆರೋಪ ಮಾಡಲಾಗುತ್ತಿದೆ.

ಈಗಾಗಲೇ ಎಸ್.ಐ.ಟಿ ಮತ್ತು ಸಿಬಿಐ ಸಂಸ್ಥೆಗಳು ತನಿಖೆ ನಡೆಸುತ್ತಿವೆ. ನಿಗಮದ 187 ಕೋಟಿ ಯಾರೇ ಅಕ್ರಮ ಮಾಡಿದ್ದರು ತನಿಕೆಯಿಂದ ಹೊರ ಬರಲು ಸಾಧ್ಯವಾಗುತ್ತದೆ. ಅಲ್ಲಿಯವರೆಗೆ ವಿರೋಧ ಪಕ್ಷಗಳು ಸುಳ್ಳು ಆರೋಪ ಮಾಡುವದನ್ನು ಕೈಬಿಡಲಿ ಎಂದು ಸೂಚಿಸಿದ್ದಾರೆ.

ಈ ಪ್ರಕರಣದಲ್ಲಿ ಯಾರೆ ಆರೋಪಿಗಳಾಗಿದ್ದರೂ, ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ನಾನು ನಂಬಿರುತ್ತೇನೆ. ಸದರಿ ಪ್ರಕರಣದಲ್ಲಿ ನಿಗಮದ ಅಧ್ಯಕ್ಷನಾಗಿ ನನ್ನ ಪಾತ್ರ ಏನು ಇಲ್ಲ ಎಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲು ಬಯಸುತ್ತೇನೆ. ಯಾರೇ ಏನೆ ಆರೋಪ ಮಾಡಿದರು ಸತ್ಯಕ್ಕೆ ದೂರವಾಗಿದ್ದು, ತನಿಖೆಯ ನಂತರ ಎಲ್ಲಾ ಸತ್ಯ ಬಹಿರಂಗಗೊಳ್ಳಲಿದೆ ಎಂದು ತಮ್ಮ ಶಾಸಕ ಪತ್ರದ ಮೂಲಕ ಮನವಿ ಮಾಡಿದ್ದಾರೆ.

ಹಿತಾಸಕ್ತ ವ್ಯಕ್ತಿಗಳಿಂದ ನನ್ನ ಹೆಸರು ದುರ್ಬಳಕೆ

ನಾನು ಪರಿಶಿಷ್ಟ ಪಂಗಡಗಳ ಸಮುದಾಯ ಮೀಸಲು ವಿಧಾನ ಸಭೆ ಕ್ಷೇತ್ರದಿಂದ ಚುನಾಯಿತನಾಗಿದ್ದೇನೆ. ಯಾವುದೇ ಕಾರಣಕ್ಕೂ ನಮ್ಮ ಸಮುದಾಯದ ಹಿತ ಕಾಪಾಡುವದು ನನ್ನ ಕರ್ತವ್ಯವಾಗಿದೆ. ಸರಕಾರವು ಸದರಿ ನಿಗಮಕ್ಕೆ ನನ್ನನ್ನು ಅಧ್ಯಕ್ಷರನ್ನಾಗಿ ನೇಮಿಸಿರುವದು ರಾಜ್ಯಾದ್ಯಂತ ವಾಸಿಸುವ ನನ್ನ ಸಮುದಾಯಕ್ಕೆ ಸೇವೆ ಮಾಡಲು ಅವಕಾಶ ನೀಡಿದೆ ಎಂದೇ ಭಾವಿಸಿ ಕೆಲಸ ಮಾಡಲು ಉದ್ದೇಶ ನನ್ನದು. ಆದರೆ, ದುರಾದೃಷ್ಟ ಕೆಲವು ಪಟ್ಟಭದ್ರ ಹಿತಾಸಕ್ತ ವ್ಯಕ್ತಿಗಳಿಂದ ನಿಗಮದ ಅನುದಾನ ದುರ್ಬಳಕೆಯಾಗಿರುವದು ನನಗೆ ತೀವ್ರ ನೋವುಂಟು ಮಾಡಿದೆ.

ಆಕರ್ಷಕ ಗ್ರಂಥಾಲಯ ಒದಗಿಸಿ

ಕೊಪ್ಪಳ: ಜಿಲ್ಲೆಯ ಗ್ರಾಪಂ ಕೇಂದ್ರ ಸ್ಥಾನದಲ್ಲಿನ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ವಿದ್ಯಾರ್ಥಿಗಳನ್ನು ಆಕರ್ಷಣೆ ಮಾಡುವಂತ ಸೌಲಭ್ಯ ಒದಗಿಸಬೇಕು ಎಂದು ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿನ ಜಿಪಂ ಸಭಾಂಗಣದಲ್ಲಿ ಆಯೋಜಿಸಿದ್ದ ಗ್ರಾಪಂ ಗ್ರಂಥಾಲಯ ಮೇಲ್ವಿಚಾರಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಪಂ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರಿಗೆ ಬಾಕಿ ಇರುವ ವೇತನವನ್ನು ಕರವಸೂಲಿ ಹಣದಲ್ಲಿ ಪಾವತಿ ಮಾಡಬೇಕು. ಬಾಕಿ ಇರುವ 9 ತಿಂಗಳ ವೇತನವನ್ನು ಗ್ರಾಪಂನಿಂದ ಭರಿಸಬೇಕು. ಎಲ್ಲ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾಲ ಕಾಲಕ್ಕೆ ಗ್ರಂಥಾಲಯ ಮೇಲ್ವಿಚಾರಕರ ವೇತನವನ್ನು ಶಾಸನಬದ್ಧ ಖಾತೆಗೆ ಜಮಾ ಆದ ತಕ್ಷಣವೇ ಪಾವತಿಸಬೇಕು. ಗ್ರಂಥಾಲಯಕ್ಕೆ ಸುಸಜ್ಜಿತವಾದ ಕಟ್ಟಡ ವ್ಯವಸ್ಥೆ ಮಾಡಬೇಕು. ಎಲ್ಲ ಗ್ರಂಥಾಲಯ ಮೇಲ್ವಿಚಾರಕರೂ ಮೊಬೈಲ್ ಆ್ಯಪ್ ಆಧಾರಿತ ಹಾಜರಾತಿ ಅಳವಡಿಸಿಕೊಳ್ಳಬೇಕು. ಡಿಜಿ ವಿಕಾಸನ್ ಶಿಕ್ಷಣ ಫೌಂಡೇಶನ್ ಹಾಗೂ ಟಾಟಾ ಟ್ರಸ್ಟ್ ವತಿಯಿಂದ ನಡೆಯುವ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸಲು ಎಲ್ಲ ಶಾಲೆಯ ಮುಖ್ಯ ಶಿಕ್ಷಕರಿಗೆ ಗ್ರಂಥಾಲಯಕ್ಕೆ ಮಕ್ಕಳನ್ನು ಕಳುಹಿಸಲು ನಿರ್ದೇಶನ ನೀಡುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಜಿಪಂ ಉಪ ಕಾರ್ಯದರ್ಶಿವಮಲ್ಲಿಕಾರ್ಜುನ ತೊದಲಬಾಗಿ, ಜಿಪಂ ಆಡಳಿತ ವಿಭಾಗದ ಸಹಾಯಕ ನಿರ್ದೇಶಕ ಶರಣು ಪೂಜಾರ, ಜಿಲ್ಲಾ ಗ್ರಂಥಾಲಯ ಮುಖ್ಯ ಗ್ರಂಥಪಾಲಕ ಯಮನೂರ, ವ್ಯವಸ್ಥಾಪಕಿ ನಿವೇದಿತಾ ಭಂಡಾರಿ ಸೇರಿ ಎಲ್ಲ ಗ್ರಂಥಾಲಯ ಮೇಲ್ವಿಚಾರಕರು ಹಾಗೂ ಸಿಬ್ಬಂದಿ ಇದ್ದರು.

ಆರೋಗ್ಯವಂತರು ತಪ್ಪದೇ ರಕ್ತದಾನ ಮಾಡಿ

ಸಂಡೂರು: 18 ವರ್ಷ ಮೇಲ್ಪಟ್ಟ ಆರೋಗ್ಯವಂತ ಪುರುಷ ಮತ್ತು ಮಹಿಳೆಯರು ತಪ್ಪದೇ ರಕ್ತದಾನ ಮಾಡಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ವೈ.ರಮೇಶ್ ಬಾಬು ತಿಳಿಸಿದರು.

ತಾಲೂಕಿನ ತೋರಣಗಲ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರಕ್ತ ಸುರಕ್ಷತಾ ಟಾಸ್ಕ್ ಫೋರ್ಸ್ ಸಮಿತಿ ಹಾಗೂ ಏಡ್ಸ್ ನಿಯಂತ್ರಣ ಘಟಕದ ಅಡಿಯಲ್ಲಿ ಜಿಲ್ಲೆಯಲ್ಲಿಯೇ ಸಮುದಾಯ ಆರೋಗ್ಯ ಕೇಂದ್ರ ಮಟ್ಟದಲ್ಲಿ ಆರಂಭವಾದ ಮೊಟ್ಟ ಮೊದಲ ರಕ್ತ ಸಂಗ್ರಹಣ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು. ದಾನಿಗಳಿಂದ ಪಡೆದ ರಕ್ತವನ್ನು ವಿಮ್ಸ್ ಬ್ಲಡ್ ಬ್ಯಾಂಕ್ ಮೂಲಕ ಪಡೆದುಕೊಂಡು ಆದ್ಯತೆ ಮೇರೆಯ ರಕ್ತದ ಗುಂಪುಗಳ ಅನ್ವಯ ಸಂಗ್ರಹಿಸಿ ಇಡಲಾಗುವುದು. ಸಾರ್ವಜನಿಕರು ಇದರ ಸದುಪಯೋಗ ಪಡೆಯುವ ಮೂಲಕ ರಕ್ತದ ಕೊರತೆ ಯಾಗದಂತೆ ತಾವು ಸಹಿತ ಮುಂದೆ ಬಂದು ರಕ್ತದಾನ ಮಾಡುವ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ವಿನಂತಿಸಿದರು. ಸಂಡೂರು ತಾಲೂಕು ಆರೋಗ್ಯಾ ಧಿಕಾರಿ ಡಾ. ಭರತ್, ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ. ಗೋಪಾಲ್ ರಾವ್, ಪ್ರಸೂತಿ ತಜ್ಞೆ ಡಾ. ರಜಿಯಾ, ಮಕ್ಕಳ ತಜ್ಞ ಡಾ. ಮಣಿಕುಮಾರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಎಚ್. ದಾಸಪ್ಪ ನವರ, ಸಿಬ್ಬಂದಿ ಶಿವರಾಮು, ಬಸವರಾಜ್, ಮಂಜುನಾಥ್, ವೆಂಕಟೇಶ್ ನಾಯ್ಕ್, ಪ್ರಶಾಂತ್, ಸೈಯದ್ ಅನ್ಸಾರಿ, ಮಾಲಾ, ಲಕ್ಷ್ಮೀ, ರೂಪಾ, ಹುಲಿಗೆಮ್ಮ ಇದ್ದರು.

ಜಿಲ್ಲೆಯಲ್ಲಿ ಆರಂಭವಾದ ಮೊಟ್ಟ ಮೊದಲ ರಕ್ತ ಸಂಗ್ರಹಣ ಕೇಂದ್ರಕ್ಕೆ ಡಿಎಚ್‌ಒ ಡಾ. ವೈ ರಮೇಶ ಬಾಬು ಚಾಲನೆ ನೀಡಿದರು.

> ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ, ರಕ್ತವೇ ದೇಹದ ಜೀವನಾಡಿಯಾಗಿದ್ದು, ರಕ್ತಕ್ಕೆ ಪರ್ಯಾಯವಾದ ವಸ್ತು ಇಲ್ಲದೆ ಇರುವುದರಿಂದ ಇನ್ನೊಬ್ಬರಿಂದ ರಕ್ತದಾನದ ಮೂಲಕ ಮಾತ್ರ ರಕ್ತವನ್ನು ಪಡೆಯಬಹುದಾಗಿದೆ. ಎಂದು ಹೇಳಿದರು.
> - ಡಾ. ಆರ್.ಅಬ್ದುಲ್ಲಾ ನೋಡೆಲ್ ಅಧಿಕಾರಿ

ಪದವೀಧರ ಚುನಾವಣೆ ಫಲಿತಾಂಶ | ಕಾಂಗ್ರೆಸ್ ಅಭ್ಯರ್ಥಿ ಚಂದ್ರಶೇಖರ ಗೆಲುವು

4651 ಮತಗಳ ಅಂತರದಿಂದ ವಿಜಯ

ಹೊಸಪೇಟೆ: ಕರ್ನಾಟಕ ವಿಧಾನ ಪರಿಷತ್ ಆಯ್ಕೆಗೆ ಈಶಾನ್ಯ ಕರ್ನಾಟಕ ಪದವೀಧರ ಚುನಾವಣೆಯ ಮತ ಎಣಿಕೆ ಫಲಿತಾಂಶ ಹೊರಬಿದ್ದಿದೆ. ಎರಡನೇ ಪ್ರಾಶಸ್ತ್ಯ ಮತ ಎಣಿಕೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ಡಾ. ಚಂದ್ರಶೇಖರ ಪಾಟೀಲ 4,651 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ನಗರದ ಗುಲಬರ್ಗಾ ವಿವಿ ಸಾಧ್ವಿ ಶಿರೋಮಣಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅಧ್ಯಯನ ಪೀಠ ಮತ್ತು ಸಂಶೋಧನಾ ಕೇಂದ್ರದಲ್ಲಿ ಜೂ. 6ರಂದು ಆರಂಭವಾದ ಮತ ಎಣಿಕೆ ಕಾರ್ಯ ಜೂ. 7 ರಂದು ನಡೆಯಿತು. ಎರಡನೇ ಪ್ರಾಶಸ್ತ್ಯ ಮತ ಎಣಿಕೆ ನಂತರ ವಿನ್ನಿಂಗ್ ಕೋಟಾ ತಲುಪದಿದ್ದರೂ ಕಾಂಗ್ರೆಸ್ ಅಭ್ಯರ್ಥಿ ಹೆಚ್ಚಿನ ಮತ ಪಡೆದ ಕಾರಣ ಚುನಾವಣಾಧಿಕಾರಿ ಕೃಷ್ಣ ಭಾಜಪೇಯಿ ಡಾ. ಚಂದ್ರಶೇಖರ ಪಾಟೀಲ ಅವರಿಗೆ ಗೆಲುವಿನ ಪ್ರಮಾಣ ಪತ್ರ ವಿತರಿಸುವ ಮೂಲಕ ಅಧಿಕೃತವಾಗಿ ಫಲಿತಾಂಶ ಘೋಷಿಸಿದರು. ಪ್ರಥಮ ಪ್ರಾಶಸ್ತ್ಯ ಮತ ಎಣಿಕೆ ನಂತರ ಚಲಾವಣೆಯಾದ 1,09,031 ಮತಗಳ ಪೈಕಿ 96,518 ಮತ ಪುರಸ್ಕೃತಗೊಂಡ ಹಿನ್ನೆಲೆ ಪುರಸ್ಕೃತ ಮತದಲ್ಲಿ 48,260 ಮತ ವಿನ್ನಿಂಗ್ ಕೋಟಾ ನಿಗದಿ ಮಾಡಿ ಚುನಾ ವಣಾಧಿಕಾರಿ ಕೃಷ್ಣ ಭಾಜಪೇಯಿ ಘೋಷಿಸಿದರು. ಅಂತಿಮವಾಗಿ ಎರ ಡನೇ ಪ್ರಾಶಸ್ತ್ಯ ಮತ ಎಣಿಕೆ ನಂತರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ಡಾ. ಚಂದ್ರಶೇಖರ ಪಾಟೀಲ 43,484 ಮತಗಳನ್ನು ಪಡೆದು, 4,651 ಮತಗಳಿಂದ ಗೆಲುವಿನ ನಗೆ ಬೀರಿದರು. ಕಲಬುರಗಿ, ಬೀದರ, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲಾ ವ್ಯಾಪ್ತಿ ಹೊಂದಿರುವ ಈ ಕ್ಷೇತ್ರದಲ್ಲಿ 99,121 ಪುರುಷರು, 57,483 ಮಹಿಳೆಯರು, ಇತರೆ 19 ಸೇರಿ ಒಟ್ಟು 1,56,623 ಜನ ಮತದಾರರು ಮತದಾನಕ್ಕೆ ಅರ್ಹತೆ ಪಡೆದಿದ್ದರು. ಇದರಲ್ಲಿ ಶೇ.69.61 ರಷ್ಟು ಅಂದರೆ 1,09,031ಜನ ಮತದಾರರು ಜೂ. 3 ರಂದು ನಡೆದ ಮತದಾನದಲ್ಲಿ ಹಕ್ಕು ಚಲಾಯಿಸಿದ್ದರು.

ಅಭ್ಯರ್ಥಿಗಳ ಮತ ಎಣಿಕೆ ವಿವರ

ಪ್ರಥಮ ಪ್ರಾಶಸ್ತ್ಯ ಮತ ಎಣಿಕೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ಡಾ. ಚಂದ್ರಶೇಖರ ಪಾಟೀಲ 39,496, ಬಿಜೆಪಿ ಅಭ್ಯರ್ಥಿ ಅಮರನಾಥ ಪಾಟೀಲ 35,050, ಸ್ವತಂತ್ರ ಅಭ್ಯರ್ಥಿ ಎನ್.ಪ್ರತಾಪ ರೆಡ್ಡಿ 17,421, ಅನಿಮೇಶ್ ಮಹಾರುದ್ರಪ್ಪ ಅಂದವಾಡೆ 111, ಅಬ್ದುಲ್ ಜಬ್ಬಾರ ಗೋಳಾ 201, ಕಾಶಿನಾಥ ಎಂ. ಗಿಲೇರಿ 276, ಬಸವರಾಜ ಮ್ಯಾಗಲಮನಿ 59, ಮಹೆಬೂಬ್ ಮೊಹಮ್ಮದ್ ಖಾಜಾ ಹುಸೇನ್ ವಂಟೇಲಿ 57, ಎಂ.ಜಾವಿದ್ ಹುಸೇನ್ 194, ರಿಯಾಜ್ ಅಹ್ಮದ 74, ವಿಲಾಸ ಎಂ. ಕಣಮಸ್ಕರ್ 817, ಶರಣಬಸಪ್ಪ ಪಿ. ಸುಗೂರ 1,392, ಎ.ಶರಣ ಐ.ಟಿ 73, ಎ.ಎಸ್.ನಾಗನಹಳ್ಳಿ 17, ಶಿವಕುಮಾರ ಹಿರೇಮಠ 167, ಸತೀಣಕುಮಾರ ಕೋಬಾಳಕರ್ 792, ಸಾಯಿನಾಥ ನಾಗೇಶ್ವರ ಮೇದಾ 72, ಡಾ. ಸುನೀಲಕುಮಾರ ಎಚ್. ವಂಟಿ 116 ಹಾಗೂ ಸುರೇಶ ದವಿದಪ್ಪ 133 ಮತಗಳು ಪಡೆದರು. ಇದರಲ್ಲಿ ಚಲಾವಣೆಯಾದ 1,09,031 ಮತಗಳ ಪೈಕಿ 96,518 ಮತ ಪುರಸ್ಕೃತವಾದರೆ 12,513 ಮತಗಳು ತಿರಸ್ಕೃತವಾದವು.

ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆ

ಹೊಸಪೇಟೆ: ಮಲೇರಿಯಾ, ಡೆಂಘೀ, ಚಿಕೂನ್‌ಗುನ್ಯ, ಮೆದುಳು ಜ್ವರ ಮತ್ತು ಆನೆಕಾಲು ರೋಗ ಸೇರಿದಂತೆ ನಾನಾ ರೋಗಗಳ ತಡೆ ಕಾರ್ಯಕ್ರಮಗಳು ಅನುಷ್ಠಾನಗೊಳ್ಳಲು ವಿವಿಧ ಇಲಾಖೆಗಳ ಸಮನ್ವಯ ಅಗತ್ಯ ಎಂದು ಜಿಪಂ ಸಿಇಒ ಸದಾಶಿವ ಪ್ರಭು ಹೇಳಿದರು.

ನಗರದ ಜಿಪಂ. ಕಚೇರಿಯ ಕೆಸ್ವಾನ್ ಹಾಲನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಡೆದ ಜಿಲ್ಲಾ ರೋಗವಾಹಕ ಅಶ್ರೀತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಅಂತರ್ ಇಲಾಖೆ ಸಮನ್ವಯ ಸಮಿತಿ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮಳೆಗಾಲ ಆರಂಭವಾಗಿದ್ದರಿಂದಾಗಿ ಈಗಾಗಲೇ ಸೊಳ್ಳೆಗಳು ಹೆಚ್ಚಾಗಿ ಅನೇಕ ರೋಗಗಳು ಬಾಧಿಸಲಾರಂಭಿಸುತ್ತವೆ. ಈ ಹಿನ್ನೆಲೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಅಚ್ಚುಕಟ್ಟಾಗಿ ಕಾರ್ಯಕ್ರಮಗಳನ್ನು ರೂಪಿಸಿ ವಿವಿಧ ಇಲಾಖೆಗಳ ಸಹಕಾರ ಪಡೆದು ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ಅಂಗನವಾಡಿ ಕೇಂದ್ರಗಳ ಕಿಟಕಿಗಳಿಗೆ ಸೊಳ್ಳೆ ನಿರೋಧಕ ಜಾಲರಿಗಳನ್ನು ಅಳವಡಿಸಬೇಕು ಹಾಗೂ ಅಂಗನವಾಡಿ ಒಳಗೆ ಮತ್ತು ಸುತ್ತಲು ಸರಿಯಾದ ರೀತಿಯಲ್ಲಿ ಸ್ವಚ್ಛತೆ ಕಾಪಾಡಬೇಕು. ಸೊಳ್ಳೆ ಮುಕ್ತ ಪರಿಸರ ನಿರ್ವಹಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಬಾವಿ ಮತ್ತು ಕೃಷಿ ಹೊಂಡಗಳಲ್ಲಿ ಲಾರ್ವಹಾರಿ ಮೀನುಗಳನ್ನು ಬಿಡುವಂತೆ ಸೂಕ್ತ ಕ್ರಮವಹಿಸಲು ಮತ್ತು ಬೇವು ಮಿಶ್ರೀತ ಜೈವಿಕ ರಸಗೊಬ್ಬರಗಳನ್ನು ಬಳಕೆ ಮಾಡುವುದರಿಂದ ಗದ್ದೆಗಳಲ್ಲಿ ಸೊಳ್ಳೆ ಉತ್ಪತ್ತಿಯನ್ನು ತಡೆಯಲು ರೈತರಲ್ಲಿ ಮನವರಿಕೆ ಮಾಡಬೇಕು ಎಂದು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶಂಕರ್ ನಾಯಕ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಯುವರಾಜ ನಾಯ್ಕ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅಧಿಕಾರಿ ಡಾ.ಷಣ್ಮುಖ ನಾಯ್ಕ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ. ದೊಡ್ಡಮನಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ವ್ಯವಸ್ಥಾಪಕ ಹನುಮಂತಪ್ಪ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ವಿನಯ್, ಜಿಲ್ಲಾ ಕ್ಷಯರೋಗ ನಿರ್ಮೂಲಣಾಧಿಕಾರಿ ಡಾ.ಜಗದೀಶ್ ಪಾಟ್ನೆ, ಜಿಲ್ಲಾ ಕುಷ್ಠರೋಗ ನಿರ್ಮೂಲಾಣಾಧಿಕಾರಿ ಡಾ. ರಾಧಿಕಾ, ತಾಲೂಕು ಆರೋಗ್ಯಾಧಿಕಾರಿ ಡಾ.ಭಾಸ್ಕರ್ ಇದ್ದರು.

ಸರಕು ದಾಸ್ತಾನುವಿಗೆ ಸಿಇಒ ಸೂಚನೆ

ಜಿಲ್ಲೆಯ ನಗರಸಭೆ, ವಿವಿಧ ಪುರಸಭೆ ಮತ್ತು ಪಪಂ ಅಧಿಕಾರಿಗಳು ಮತ್ತು ಸಿಬ್ಬಂದಿಯಿಂದ ಲಾರ್ವ ನಾಶಕಗಳಾದ ಬಿಟಿಐ ಸಿಂಪಡಣೆ, ಟೆಮಿಫಾಸ್ ಸಿಂಪಡಣೆ ಕಾರ್ಯವಾಗಬೇಕು. ಮತ್ತು ಸೊಳ್ಳೆನಾಶಕ ಧೂಮೀಕರಣ ಕ್ರಮಗಳಿಗೆ ಸಂಬಂಧಿಸಿದ ಸರಕು ಸರಂಜಾ ಮುಗಳ ದಾಸ್ತಾನು ಇಟ್ಟುಕೊಳ್ಳಬೇಕು ಸರಿಯಾದ ರೀತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡಬೇಕು. ಚರಂಡಿಗಳಲ್ಲಿ ನೀರು ನಿಲ್ಲದಂತೆ ಸೂಕ್ತ ವ್ಯವಸ್ಥೆ ಕೈಗೊಳ್ಳಿ ಜಿಪಂ ಸಿಇಒ ತಿಳಿಸಿದರು.

ಅಸ್ತಮಾ ರೋಗಿಗಳಿಗೆ ಉಚಿತ ನಾಟಿ ಔಷಧಿ ವಿತರಣೆ

54 ವರ್ಷದಿಂದ ಲಕ್ಷಾಂತರ ಜನರಿಗೆ ಸೇವೆ | ನಾಟಿ ಔಷಧಿಗೆ ನೆರೆ ರಾಜ್ಯದಿಂದಲೂ ಬಂದಿದ್ದ ಜನ

ಕೊಪ್ಪಳ: ಸರಕಾರಿ ಬಸ್ ಕೂಡ ಇಲ್ಲದ ಆ ಗ್ರಾಮದಲ್ಲಿ ಇಂದು ಜನಸಾಗರವೇ ಸೇರಿತ್ತು. ಕಣ್ಣಾಯಿಸಿದ ಕಡೆ ಎಲ್ಲ ಜನವೋ ಜನ. ಸೇರಿದ್ದ ಅಷ್ಟೂ ಜನರಿಗೆ ಅಚ್ಚುಕಟ್ಟಾಗಿ ನಾಟಿ ಔಷಧಿ ವಿತರಿಸಿದ ಸ್ವಯಂ ಸೇವಕರು. ಗಂಟೆ ಬಾರಿಸುತ್ತಿದ್ದಂತೆಯೇ ನಾಟಿ ಔಷಧಿ ಸೇವಿಸಿದ ರೋಗಿಗಳು.

ತಾಲೂಕಿನ ಕುಟಗನಹಳ್ಳಿ ಗ್ರಾಮದಲ್ಲಿ ಶನಿವಾರ ಬೆಳಗ್ಗೆ ಕಂಡುಬಂದ ದೃಶ್ಯಗಳಿವು. ಹೌದು, ಪ್ರತಿ ವರ್ಷದಂತೆ ಈ ಬಾರಿಯೂ ಕೊಪ್ಪಳ ನಗರದಿಂದ ಕೇವಲ 5 ಕಿ.ಮೀ ದೂರದಲ್ಲಿನ ಈ ಗ್ರಾಮದಲ್ಲಿ ಅಸ್ತಮಾ ರೋಗಿಗಳಿಗೆ ನಾಟಿ ಔಷಧಿ ಉಚಿತ ವಿತರಿಸಲಾಯಿತು. ಮೃಗಶಿರ ಮಳೆ ಕೂಡುವ ಶನಿವಾರ ಬೆಳಗ್ಗೆ 7.47ಕ್ಕೆ ಸರಿಯಾಗಿ ರೋಗಿಗಳು ಸಾಮೂಹಿಕವಾಗಿ ಔಷಧಿ ಸೇವಿಸಿದರು. ಸಾವಿರಾರು ಜನರು ಶುಕ್ರವಾರ ರಾತ್ರಿಯೇ ಕುಟುಗನಹಳ್ಳಿ ಗ್ರಾಮಕ್ಕೆ ಆಗಮಿಸಿ, ವಾಸ್ತವ್ಯ ಮಾಡಿದ್ದರೆ, ಸಾವಿರಾರು ರೋಗಿಗಳು ಬೆಳಗ್ಗೆ ಬಂದು ಔಷಧಿ ಪಡೆದರು. ಸಾವಿರಾರು ಜನರು ಜಾಗದ ಕೊರತೆಯಿಂದ ನಿಂತುಕೊಂಡು ನಾಟಿ ಔಷಧಿ ಪಡೆದು, ನಿಗದಿತ ಸಮಯಕ್ಕೆ ಸೇವಿಸಿದರು. ಎಲ್ಲ ಧರ್ಮ, ಜಾತಿಯ ಜನರು ಆಗಮಿಸಿ ಔಷಧಿ ಪಡೆದರು.

ಕೊಪ್ಪಳ ತಾಲೂಕು ಕುಟಗನಹಳ್ಳಿ ಗ್ರಾಮದಲ್ಲಿ ಔಷಧಿ ಸೇವಿಸಲು ಸೇರಿರುವ ಜನ.

ಏನಿದು ಔಷಧಿ?: ಕುಟುಗನಹಳ್ಳಿ ಗ್ರಾಮದ ಅಶೋಕರಾವ್ ಕುಲಕರ್ಣಿ ಕುಟುಂಬ 54 ವರ್ಷದಿಂದ ಔಷಧಿ ನೀಡುತ್ತಿದೆ. ವರ್ಷಕ್ಕೆ ಒಂದು ಬಾರಿ ಮಾತ್ರ ಈ ನಾಟಿ ಔಷಧಿ ನೀಡುತ್ತಾರೆ. ಈ ನಾಟಿ ಔಷಧಿಯಿಂದ ಅಸ್ತಮಾ, ಕೆಮ್ಮು, ದಮ್ಮು ಹಾಗೂ ಅಲರ್ಜಿ ಕಾಯಿಲೆ ಸಂಪೂರ್ಣವಾಗಿ ವಾಸಿ ಆಗುತ್ತದೆ. ಕೆಲ ದೇಶಿ ಗಿಡ ಮೂಲಿಕೆ, ಇಂಗು ಮತ್ತು ಬೆಲ್ಲ ಸೇರಿಸಿ ಈ ನಾಟಿ ಔಷಧಿ ತಯಾರಿ ಮಾಡಲಾಗುತ್ತದೆ. ಈ ಔಷಧಿಯಿಂದ ಅಸ್ತಮಾ ಸಂಪೂರ್ಣ ದೂರವಾಗುತ್ತದೆ ಎಂಬ ನಂಬಿಕೆ ರೋಗಿಗಳಲ್ಲಿ ಇದೆ. ಈ ವರ್ಷ ಕೂಡಾ ಸಾವಿರಾರು ಜನರು ಬಂದಿದ್ದರು. ರಾತ್ರಿಯೇ ಗ್ರಾಮಕ್ಕೆ ಬಂದು ಬಿಡಾರ್ ಹೂಡಿದ್ದ ಜನರಿಗೆ, ನಿಗದಿತ ಸಮಯಕ್ಕಿಂತ ಮೊದಲೇ ಔಷಧಿ ವಿತರಿಸಲಾಗಿತ್ತು. ಮೃಗಶಿರ ಮಳೆ ಕೂಡುವ ಕಾಲಕ್ಕೆ ಅಶೋಕರಾವ್ ಅವರು ತಮ್ಮ ಮನೆಯ ಮೇಲೆ ನಿಂತು ಗಂಟೆ ಬಾರಿಸುತ್ತಾರೆ.. ಗಂಟೆ ಬಾರಿಸುತ್ತಿದ್ದಂತೆ, ಕೈಯಲ್ಲಿ ಹಿಡಿದಿದ್ದ ಚೂರ್ಣವನ್ನು ರೋಗಿಗಳು ಸೇವಿಸಿದರು.

ಔಷಧಿ ಉಚಿತ: ಅಸ್ತಮಾ ರೋಗಕ್ಕೆ ರಾಮಬಾಣ ಎಂದು ಹೇಳಲಾಗುವ ಈ ಔಷಧಿ ಸೇವಿಸಲು ಬೀದರ, ಕಲಬುರಗಿ, ಹಾಸನ, ಬೆಂಗಳೂರು, ಮೈಸೂರು, ರಾಮನಗರ, ಕೋಲಾರ, ಬೆಳಗಾವಿ ಸೇರಿ ರಾಜ್ಯದ ವಿವಿಧ ಜಿಲ್ಲೆಯಿಂದ ಹಾಗೂ ನೆರೆಯ ರಾಜ್ಯಗಳಾದ ಆಂಧ್ರ, ಮಹಾರಾಷ್ಟ್ರದಿಂದಲೂ ಸಾವಿರಾರು ರೋಗಿಗಳು ಬಂದಿದ್ದರು. ಮಕ್ಕಳು, ಮಹಿಳೆಯರು, ವೃದ್ದರು ಸೇರಿ ಸಾವಿರಾರು ಜನರು ಗ್ರಾಮಕ್ಕೆ ಬಂದು ಬಿಡಾರ ಹೂಡಿ, ಔಷಧಿ ಸೇವಿಸಿದರು. ಲಕ್ಷಂತರ ರೂ. ಖರ್ಚು ಮಾಡಿದರೂ ಗುಣಮುಖವಾಗದ ಅಸ್ತಮಾ, ಈ ಔಷಧಿಯನ್ನು ಸತತ ಮೂರು ವರ್ಷ ಪಡೆದರೆ ಸಂಪೂರ್ಣ ವಾಸಿಯಾದ ಉದಾಹರಣೆ ಇದೆ. ಈ ಹಿನ್ನೆಲೆ ಸಾವಿರಾರು ಜನರು ಬಂದು ಗಂಟೆಗಟ್ಟಲೆ ಕಾದು ಔಷಧಿ ಸೇವಿಸುತ್ತಾರೆ.

> ನನಗೆ ಅನುವಂಶಿಕವಾಗಿ ಬಂದಿದ್ದ ಅಸ್ತಮಾ ಕಾಯಿಲೆ ಇತ್ತು. ಒಂದಷ್ಟು ನಡೆದಾಡಿದರೂ ಆಯಾಸ ಆಗುತ್ತಿತ್ತು. ಇದು ಸಾಕಷ್ಟು ಹಿಂಸೆ ಕೊಡುವ ಲಾಯಿಲೆ. ಕಳೆದ 5 ವರ್ಷದಿಂದ ಇಲ್ಲಿಗೆ ಬಂದು ಔಷಧಿ ಸೇವಿಸಿದ್ದೇನೆ. ಈಗ ಸಂಪೂರ್ಣ ವಾಸಿ ಆಗಿದೆ. ಊಟದ ಪತ್ತೆ ಮಾಡುವುದು ಮುಖ್ಯ.
> - ವೈಷ್ಣವಿ, ಔಷಧಿ ಸೇವಿಸಿದವರು

ಊಟದ ಪತ್ತೆ ಮುಖ್ಯ

ಈ ನಾಟಿ ಔಷಧಿ ಪಡೆಯಲು ಬರುವ ರೋಗಿಗಳು ತಮ್ಮ ಊಟದಲ್ಲಿ ಒಂದಷ್ಟು ಪತ್ತೆ ಮಾಡಬೇಕು. ಈ ಬಗ್ಗೆ ಸ್ವಯಂ ಸೇವರು ಮತ್ತು ಅಶೋಕ ರಾವ್ ಅವರು ರೋಗಿಗಳಿಗೆ ಮಾಹಿತಿ ನೀಡುತ್ತಾರೆ. ಅವರು ಹೇಳಿದ ಒಂದಷ್ಟು ಆಹಾರ ತ್ಯಜಿಸಿದರೆ, ಕಾಯಿಗೆ ವಾಸಿ ಆಗುವುದು ಪಕ್ಕಾ ಎಂಬುದು ಇಲ್ಲಿಗೆ ಬಂದು ಔಷಧಿ ಪಡೆದು ಗುಣಮುಖರಾದ ರೋಗಿಗಳ ಮಾತು.

ದ.ಆಫ್ರಿಕಾಗೆ ಸಾಧಾರಣ ಗುರಿ

ನ್ಯೂಯಾರ್ಕ್: ಬಾರ್ಟ್‌ಮನ್ ಅವರ ಭರ್ಜರಿ ಬೌಲಿಂಗ್‌ನಿಂದಾಗಿ ನೆದರ್ಲೆಂಡ್ಸ್ ತತ್ತರಿಸಿದ್ದು, ಹರಿಣರ ವಿರುದ್ಧ 103 ಕ್ಕೆ ಸುಸ್ತಾಗಿದೆ. ನ್ಯೂಯಾರ್ಕ್‌ನ ನಸೌ ಕ್ರೀಡಾಂಗಣದಲ್ಲಿ ನಡೆದ ದ. ಆಫ್ರಿಕಾ ಹಾಗೂ ನೆದರ್ಲೆಂಡ್ಸ್ ನಡುವಿನ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವು ಕನಿಷ್ಠ ಸ್ಕೋರ್ ಕಲೆಹಾಕಿದ್ದು, ದ. ಆಫ್ರಿಕಾಗೆ 103 ರನ್‌ಗಳ ಗುರಿ ಒಡ್ಡಿದೆ. ಆರಂಭದಿಂದಲೂ ಕುಸಿದ ನೆದರ್ಲೆಂಡ್ಸ್‌ಗೆ ಎಂಗಲ್‌ಬ್ರೆಚ್ ಆಸರೆಯಾದರು. ಅವರು 45 ಎಸೆತದಲ್ಲಿ 40 ರನ್ ಗಳಿಸಿ 100 ರ ಗಡಿ ದಾಟಲು ಕೊಡುಗೆ ನೀಡಿದ್ದಾರೆ. ಇನ್ನುಳಿದಂತೆ ವ್ಯಾನ್ ಬೀಕ್ 23, ವಿಕ್ರಂಜಿತ್ ಹೊರತುಪಡಿಸಿ ಯಾವುದೇ ಆಟಗಾರರ ಎರಡಂಕಿ ದಾಟಲಿಲ್ಲ. ಹೀಗಾಗಿ ನೆದರ್ಲೆಂಡ್ಸ್ ಕೇವಲ 103 ರನ್‌ಗಳನ್ನು ಬಾರಿಸಿ 104 ರನ್ ಗುರಿ ನೀಡಿದೆ. ಇನ್ನು ಬೌಲಿಂಗ್ ವಿಭಾಗದಲ್ಲಿ ಬಾರ್ಟ್‌ಮನ್ 11 ಕ್ಕೆ 4 ವಿಕೆಟ್ ಪಡೆದರೆ, ಜಾನ್ಸನ್ ಹಾಗೂ ನೊಕಿಯಾ ತಲಾ 2 ವಿಕೆಟ್ ಪಡೆದುಕೊಂಡರು.



ರಶೀದ್, ಫಾರೂಕಿ ಮಾರಕ ದಾಳಿ | ಗುರ್ಬಾಜ್ ಬ್ಯಾಟಿಂಗ್ ಅಬ್ಬರ

ನ್ಯೂಜಿಲೆಂಡ್‌ಗೆ ಆಫ್ಘನ್ ಶಾಕ್!

ಗಯಾನ: ಆರಂಭಿಕ ಬ್ಯಾಟರ್ ರಹಮಾನುಲ್ಲಾ ಗುರ್ಬಾಜ್ ಅವರ ಅಮೋಘ ಅರ್ಧಶತಕ, ರಶೀದ್ ಖಾನ್ ಮತ್ತು ಫಜಲ್ಹಕ್ ಫಾರೂಕಿ ಅವರ ನಾಲ್ಕು ವಿಕೆಟ್‌ಗಳ ನೆರವಿನಿಂದ ಅಫ್ಘಾನಿಸ್ತಾನ ತಂಡವು ನ್ಯೂಜಿಲೆಂಡ್ ವಿರುದ್ಧ 84 ರನ್‌ಗಳ ಐತಿಹಾಸಿಕ ಗೆಲುವು ಸಾಧಿಸಿದೆ. ಇತ್ತೀಚೆಗೆ ನಡೆದ ಅಮೆರಿಕ ಪಾಕಿಸ್ತಾನದ ಪಂದ್ಯದ ನಂತರ ಮತ್ತೊಂದು ಅಚ್ಚರಿದಾಯಕ ಪಂದ್ಯವಾಗಿದ್ದು, ಅದರಲ್ಲಿ ಆಫ್ಘನ್ ತಂಡವು ಇತಿಹಾಸ ಸೃಷ್ಟಿಸಿದೆ. ಆ ಮೂಲಕ ಅಫ್ಘಾನಿಸ್ತಾನ್ ಸತತ ಎರಡನೇ ಗೆಲುವು ಸಾಧಿಸಿದ್ದು, ಸೂಪರ್ 8ಗೆ ಟಿಕೆಟ್ ಬಹುತೇಕ ಖಾತ್ರಿ ಪಡಿಸಿಕೊಂಡಿದೆ. ಗಯಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ್ ತಂಡವು 6 ವಿಕೆಟ್ ಕಳೆದುಕೊಂಡು 159 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ನ್ಯೂಜಿಲೆಂಡ್ ತಂಡವುರಶೀದ್ ಖಾನ್ ಅವರ ಮಾರಕ ದಾಳಿಗೆ ಸಿಲುಕಿ 74 ರನ್‌ಗಳಿಗೆ ಸರ್ವಪತನ ಕಂಡಿತು.

ಗುರ್ಬಾಜ್ ಸ್ಫೋಟಕದಾಟ: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ್ದ ಅಫ್ಘಾನಿಸ್ತಾನ ತಂಡದ ಬ್ಯಾಟಿಂಗ್ ಆರಂಭಿಸಿದ ರಹಮಾನುಲ್ಲಾ ಗುರ್ಬಾಜ್ ಮತ್ತು ಇಬ್ರಾಹಿಂ ಝುದ್ರಾನ್ ಉತ್ತಮ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 14.3 ಓವರ್‌ಗಳಲ್ಲಿ 103 ರನ್‌ಗಳ ಜತೆಯಾಟ ನಿರ್ಮಿಸಿದರು. ರಹಮಾ ನುಲ್ಲಾ ಗುರ್ಬಾಜ್ 56 ಎಸೆತಗಳಲ್ಲಿ 80 ರನ್ ಬಾರಿಸಿ ಶತಕವಂಚಿತರಾದರು. ಇಬ್ರಾಹಿಂ ಝುದ್ರಾನ್ 41 ಎಸೆತಗಳಲ್ಲಿ 44 ರನ್ ಗಳಿಸಿದರು. ಅಜ್ಮತುಲ್ಲಾ ಉಮರ್‌ಜಾಯ್ 22 ರನ್ ಗಳಿಸಿ ತಂಡದ ಮೊತ ಏರಿಸಿದರು. ಇನ್ನುಳಿದಂತೆ ನಬಿ ಶೂನ್ಯ ಸುತ್ತಿದರೆ,ರಶೀದ್ ಖಾನ್ 6 ರನ್ ಗಳಿಸಿ ಆಟ ನಿಲ್ಲಿಸಿದರು. ಆ ಮೂಲಕ ತಂಡವು 6 ವಿಕೆಟ್‌ಗೆ 159 ಗಳಿಸಿತು. ಇನ್ನು ಬೌಲಿಂಗ್‌ನಲ್ಲಿ ನ್ಯೂಜಿಲೆಂಡ್ ಪರ ಟ್ರೆಂಟ್ ಬೌಲ್ಟ್ 22 ರನ್ ನೀಡಿ 2 ವಿಕೆಟ್ ಪಡೆದರೆ, ಮ್ಯಾಟ್ ಹೆನ್ರಿ 37 ರನ್ ನೀಡಿ 2 ವಿಕೆಟ್ ಕಬಳಿಸಿದರು.

18 ಕಿವೀಸ್ ಬ್ಯಾಟರ್‌ನ ಗರಿಷ್ಠ ಸ್ಕೋರ್

ಅಫ್ಘಾನಿಸ್ತಾನ ನೀಡಿದ್ದ 160 ರನ್‌ಗಳ ಗುರಿಯನ್ನು ಬೆನ್ನಟ್ಟಿದ ನ್ಯೂಜಿಲೆಂಡ್ ಆರಂಭದಿಂದಲೂ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತಲೇ ಹೋಯಿತು. ಆರಂಭಿಕ ಫಿನ್ ಆಲೆನ್ ಡಕ್‌ಗೆ ವಿಕೆಟ್ ಒಪ್ಪಿಸಿದರು. ಅವರ ಹಿಂದಯೇ ಕಾನ್ವೆ 8, ವಿಲಿಯಮ್ಸನ್ 9 ಗಳಿಸಿ ವಿಕೆಟ್ ನೀಡಿದರು. ಆ ಬಳಿಕ ಬಂದ ಮಿಚೆಲ್ 5, ಚಾಪ್‌ಮನ್ 4 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆ ಬಳಿಕ ನ್ಯೂಜಿಲೆಂಡ್ ತಂಡದ ಪರ ಗ್ಲೆನ್ ಫಿಲಿಪ್ಸ್ 18 ರನ್ ಮತ್ತು ಮ್ಯಾಟ್ ಹೆನ್ರಿ 12 ರನ್ ಗಳಿಸಿದ್ದು ಬಿಟ್ಟರೆ, ಉಳಿದ ಯಾವ ಬ್ಯಾಟರ್‌ಗಳೂ ಎರಡಂಕಿ ಮೊತ್ತ ದಾಟಲಿಲ್ಲ. ಇದು ಕೇನ್ ವಿಲಿಯಮ್ಸನ್ ನಾಯಕತ್ವದ ಕಿವೀಸ್ ಸೋಲಿಗೆ ಕಾರಣವಾಯಿತು. ಬೌಲಿಂಗ್‌ನಲ್ಲಿ ಅಫ್ಘಾನಿಸ್ತಾನ ತಂಡದ ಪರ ರಶೀದ್ ಖಾನ್ 4 ಓವರ್‌ಗಳಲ್ಲಿ 17 ರನ್ ನೀಡಿ 4 ವಿಕೆಟ್ ಕಬಳಿಸಿದರೆ, ಫಜಲ್ಹಕ್ ಫಾರೂಕಿ 3.2 ಓವರ್‌ಗಳಲ್ಲಿ 17 ರನ್ ನೀಡಿ 4 ವಿಕೆಟ್ ಪಡೆದರು. ಅಲ್ಲದೆ ಆಲ್ರೌಂಡರ್ ಮೊಹಮ್ಮದ್ ನಬಿ ಕೂಡ ಎರಡು ವಿಕೆಟ್ ಪಡೆದು ಮಿಂಚಿದರು.

ಮಿಂಚಿದ ರೆಹಮಾನ್, ರಿಶದ್ | ನಿಸ್ಸಂಕಾ, ತುಷಾರ್ ಹೋರಾಟ ವ್ಯರ್ಥ

ಬಾಂಗ್ಲಾದೇಶಕ್ಕೆ ಭಾರೀ ಗೆಲುವು

ಡಲ್ಲಾಸ್: ಮುಸ್ತಫಿಜೂರ್ ರೆಹಮಾನ್, ರಿಶದ್ ಹಸನ್ ಅವರ ಮಾರಕ ಬೌಲಿಂಗ್ ಹಾಗೂ ತೋಹಿದ್ ಹೃದಯ್ ಅವರ ಸ್ಫೋಟಕ ಬ್ಯಾಟಿಂಗ್‌ಗೆ ಶ್ರೀಲಂಕಾ ತತ್ತರಿಸಿದ್ದು, ವಿಶ್ವಕಪ್‌ನಲ್ಲಿ ಸತತ ಎರಡನೇ ಸೋಲು ಕಂಡಿದೆ. ಆ ಮೂಲಕ ಲಂಕಾ ಬಹುತೇಕ ಟೂರ್ನಿಯಿಂದ ಹೊರಬಿದ್ದಿದೆ. ಇನ್ನು ಮೊದಲು ಪಂದ್ಯವಾಡಿದ ಬಾಂಗ್ಲಾದೇಶವು ಟೂರ್ನಿಯಲ್ಲಿ ಶುಭಾರಂಭ ಕಂಡಿದೆ. ಡಲ್ಲಾಸ್‌ನಲ್ಲಿ ನಡೆದ ಶ್ರೀಲಂಕಾ ಹಾಗೂ ಬಾಂಗ್ಲಾದೇಶ ನಡುವಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 8 ವಿಕೆಟ್ ಕಳೆದುಕೊಂಡು 125 ರನ್ ಗಳಸಿತು. ಅದನ್ನು ಬೆನ್ನುಹತ್ತಿದ ಬಾಂಗ್ಲಾ, ಮೊದಲಿಗೆ ಕುಸಿದು ನಂತರ ರನ್ ಪೇರಿಸಿ 8 ವಿಕೆಟ್ ಕಳೆದುಕೊಂಡು 125 ರನ್ ಗಳಿಸಿ ಕೇವಲ ಎರಡು ವಿಕೆಟ್ ಗೆಲುವು ಸಾಧಿಸಿತು.

ನಿಸ್ಸಂಕಾ ಏಕಾಂಗಿ ಹೋರಾಟ: ಟಾಸ್ ಸೋತು ಬ್ಯಾಟಿಂಗ್ ಆಹ್ವಾನ ಪಡೆದ ಶ್ರೀಲಂಕಾ ತಂಡದ ಆರಂಭ ಉತ್ತಮವಾಗಿಯೇ ಇತ್ತು. ಆರಂಭಿಕ ನಿಸ್ಸಂಕಾ ಆರಂಭದಿಂದಲೇ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆದರೆ ಇನ್ನೊಂದೆಡೆ ಕುಶಾಲ್ ಮೆಂಡಿಸ್ 10 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅವರ ಹಿಂದಯೇ ಕಮಿಂದು ಮೆಂಡಿಸ್ ಸಹ 4 ರನ್ ಗಳಿಸಿ ವಿಕೆಟ್ ನೀಡಿದರು. ಬಳಿಕ ಬಂದ ಧನಂಜಯ್ 21 ರನ್ ಗಳಿಸಿ ಅಲ್ಪ ಹೊತ್ತು ನಿಂತು ಅಮೇಲೆ ವಿಕೆಟ್ ಒಪ್ಪಿಸಿದರೆ, ಅಸಲಂಕಾ 19 ರನ್ ಗಳಿಸಿ ಔಟಾದರು. ನಾಯಕ ಹಸರಂಗಾ ಶೂನ್ಯ ಸುತ್ತಿದರೆ, ಮ್ಯಾಥ್ಯೂಸ್ 16 ರನ್ ಗಳಿಸಿದರು. ಆರಂಭಿಕ ನಿಸ್ಸಂಕಾ 47 ರನ್ ಗಳಿಸಿ ವಿಕೆಟ್ ನೀಡಿದರು. ಉಳಿದಂತೆ ಕೊನೆಯ ಮೂವರು ಟಗಾರರು ಶೂನ್ಯಕ್ಕೆ ಆಟ ನಿಲ್ಲಿಸಿದರು. ಇನ್ನು ಬೌಲಿಂಗ್‌ನಲ್ಲಿ ಮುಸ್ತಫಿಜೂರ್ ರೆಹಮಾನ್ 17ಕ್ಕೆ 3 ವಿಕೆಟ್ ಪಡೆದರೆ, ರಿಶದ್ 22ಕ್ಕೆ 3 ವಿಕೆಟ್ ಪಡೆದುಕೊಂಡರು.

ದಾಸ್, ತೋಹಿದ್ ಸ್ಫೋಟಕ ಬ್ಯಾಟಿಂಗ್

ಅದನ್ನು ಬೆನ್ನುಹತ್ತಿದ ಬಾಂಗ್ಲಾ ತಂಡಕ್ಕೂ ಆರಂಭಿಕ ಆಘಾತ ಉಂಟಾಯಿತು. ಆರಂಭಿಕ ಹಸನ್ 3 ರನ್ ಗಳಿಸಿ ವಿಕೆಟ್ ನೀಡಿದರು. ಅವರ ಹಿಂದೆಯೇ ಸೌಮ್ಯ ಸರ್ಕಾರ್ ಶೂನ್ಯಕ್ಕೆ ಆಟ ನಿಲ್ಲಿಸಿದರು. ಶಾಂತೊ 7 ರನ್‌ಗೆ ಆಟ ನಿಲ್ಲಿಸಿದರು. ಈ ವೇಳೆ ಜತೆಗೂಡಿದ ದಾಸ್ ಹಾಗೂ ತೋಹಿದ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಒಂದು ಕಡೆ ಲಿಟನ್ ದಾಸ್ ನಿಧಾನವಾಗಿ ವಿಕೆಟ್ ಉಳಿಸಿ ಆಡಿದರೆ, ಇನ್ನೊಂದೆಡೆ ತೋಹಿದ್ ಸ್ಫೋಟಕ ಬ್ಯಾಟಿಂಗ್ ಮಾಡಿ ಪಂದ್ಯವನ್ನು ಮಡಿಲಿಗೆ ಹಾಕಿಕೊಂಡರು. ಈ ವೇಳೆ ದಾಸ್ 36 ರನ್ ಗಳಿಸಿ ವಿಕೆಟ್ ನೀಡಿದರೆ, ಶಕಿಬ್ 8, ರಿಶದ್ 1, ಅಹ್ಮದ್ ಶೂನ್ಯಕ್ಕೆ ವಿಕೆಟ್ ನೀಡಿದರು. ತೋಹಿದ್ 20 ಎಸೆತದಲ್ಲಿ ಸ್ಫೋಟಕ 40 ರನ್ ಗಳಿಸಿ ವಿಕೆಟ್ ನೀಡಿದರು. ಆದರೆ ಕೊನೆಯಲ್ಲಿ ಮಹ್ಮದ್ದುಲ್ಲಾ 16 ರನ್ ಗಳಿಸಿ ಪಂದ್ಯನ್ನು ಗೆಲ್ಲಿಸಿದರು. ಇನ್ನು ಬೌಲಿಂಗ್ ವಿಭಾಗದಲ್ಲಿ ತುಷಾರ 18ಕ್ಕೆ 4 ವಿಕೆಟ್ ಪಡೆದರೆ, ಹಸರಂಗಾ 32ಕ್ಕೆ 2 ವಿಕೆಟ್ ಪಡೆದುಕೊಂಡರು.

ಪಂದ್ಯಕ್ಕೂ ಮುಂಚೆ ನಮಗೆ ಅಭ್ಯಾಸ ಮಾಡಲು ಹೆಚ್ಚಿನ ಸಮಯ ಸಿಗಲಿಲ್ಲ. ಹೀಗಾಗಿ ಆಟಗಾರರು ಗುರಿ ಬೆನ್ನಟ್ಟುವಲ್ಲಿ ವಿಫಲರಾದರು. ಆದರೆ, ಈಗ ನಾವು ಇದನ್ನು ಮರೆತು ಮುಂದಿನ ಸವಾಲುಗಳನ್ನು ಎದುರಿಸಲು ಮುನ್ನಡೆಯ ಬೇಕಾಗಿದೆ. 160 ರನ್‌ಗಳ ಗುರಿಯನ್ನು ಬೆನ್ನಟ್ಟಲು, ನಮಗೆ ಜತೆಯಾಟದ ಅಗತ್ಯವಿತ್ತು. ಆದರೆ ಆಫ್ಘಾನ್ ತಂಡದ ಬಿಗಿಯಾದ ಬೌಲಿಂಗ್ ಮುಂದೆ ಈ ಗುರಿಯು ನಮಗೆ ಕಷ್ಟಕರವಾಯಿತು.

- ಕೇನ್ ವಿಲಿಯಮ್ಸನ್, ನ್ಯೂಜಿಲೆಂಡ್ ನಾಯಕ

ಕ್ವಾರ್ಟರ್‌ಫೈನಲ್‌ನಲ್ಲಿ ಸೋತ ಲಕ್ಷ್ಯ ಸೇನ್

ಜಕಾರ್ತ: ಇಲ್ಲಿ ನಡೆಯುತ್ತಿರುವ ಇಂಡೊನೇಷ್ಯಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸ್ಪರ್ಧೆ ಅಂತ್ಯಗೊಂಡಿದ್ದು, ಭಾರತದ ಲಕ್ಷ್ಯ ಸೇನ್ ಅವರು ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ನಿರ್ಗಮಿಸಿದ್ದಾರೆ.

ಕಾರ್ಟರ್ ಫೈನಲ್ ಪಂದ್ಯದಲ್ಲಿ ವಿಶ್ವದ 14ನೇ ಕ್ರಮಾಂಕದ ಸೇನ್ 22–24, 18–21 ಗೇಮ್‌ಗಳಿಂದ ವಿಶ್ವದ ಐದನೇ ರ‍್ಯಾಂಕ್‌ನ ಆಂಡರ್ಸ್ ಆಂಟೊನ್ಸೆನ್ ಅವರ ವಿರುದ್ಧ ಸೋತರು. ಆ ಮೂಲಕ ಆಂಟೊನ್ಸೆನ್, ಸೇನ್ ವಿರುದ್ಧ ಗೆಲುವಿನ ನಂತರ ಅಂಕವನ್ನು 3–2ಕ್ಕೆ ಹೆಚ್ಚಿಸಿಕೊಂಡರು. ಒಂದು ಗಂಟೆ ಒಂದು ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಸೇನ್ ಉತ್ತಮ ಪೈಪೋಟಿ ನೀಡಿದರು. ಮೊದಲ ಗೇಮ್‌ನಲ್ಲಿ ಆರಂಭದಲ್ಲೇ ಡೆನ್ಮಾರ್ಕ್ ಆಟಗಾರ 4–0 ಮುನ್ನಡೆ ಪಡೆದರು. ಆದರೆ, ಸೇನ್ ಪ್ರತಿರೋಧ ತೋರಿ 5–5 ಸಮಬಲ ಸಾಧಿಸಿದರು. ಒಂದು ಹಂತದಲ್ಲಿ ಮುನ್ನಡೆಯನ್ನು 15–11ಕ್ಕೆ ವಿಸ್ತರಿಸಿದರು. ಆದರೆ, ಅಂತಿಮವಾಗಿ ಆಂಟೊನ್ಸೆನ್ ಮೇಲುಗೈ ಸಾಧಿಸಿದರು. ಎರಡನೇ ಗೇಮ್‌ನಲ್ಲೂ ಉಭಯ ಆಟಗಾರರ ಕುತೂಹಲ ಪೈಪೋಟಿ ನಡೆಯಿತು. ಹಲವು ದೀರ್ಘ ರ‍್ಯಾಲಿಗಳಿಗೂ ಪಂದ್ಯ ಸಾಕ್ಷಿಯಾಯಿತು. ಆರಂಭದಲ್ಲಿ 7–2ರ ಮುನ್ನಡೆ ಪಡೆದಿದ್ದ ಸೇನ್, ನಂತರ ಸೋಲೊಪ್ಪಿಕೊಂಡರು. ಹಾಗಾಗಿ ಸೆಮಿಫೈನಲ್‌ಗೆ ಮುನ್ನಡೆದರು. ಆಂಟೊ ನ್ಸೆನ್ ಸೆಮಿಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಥಾಯ್ಲೆಂಡ್‌ನ ಕುನ್ಲಾವುಟ್ ವಿಟಿಡ್ಸರ್ನ್ ಅವರನ್ನು ಎದುರಿಸಲಿದ್ದಾರೆ.

ಇಂದು ರಾತ್ರಿ 8 ಗಂಟೆಗೆ ಹೈವೋಲ್ಟೇಜ್ ಪಂದ್ಯ | ರೋಹಿತ್‌ಗೆ ಗಾಯದ ಚಿಂತೆ

ಭಾರತ, ಪಾಕಿಸ್ತಾನ ಟಿ20 ಸಮರ ಇಂದು

ನ್ಯೂಯಾರ್ಕ್: ಕ್ರಿಕೆಟ್ ಲೋಕದ ಎಲ್ ಕ್ಲಾಸಿಕೊ ಪಂದ್ಯ ಎನ್ನಿಸಿಕೊಳ್ಳುವ ಬಹು ಕುತೂಹಲ ಮೂಡಿಸಿದ್ದ ಭಾರತ ಹಾಗೂ ಪಾಕಿಸ್ತಾನ ಪಂದ್ಯವು ಇಂದು ನಡೆಯಲಿದೆ. ಐರ್ಲೆಂಡ್ ವಿರುದ್ಧದ ಮೊದಲ ಲೀಗ್ ಪಂದ್ಯವನ್ನು ಗೆದ್ದಿರುವ ಭಾರತ ತಂಡ ಇದೀಗ ದ್ವಿತೀಯ ಪಂದ್ಯದಲ್ಲೂ ಗೆಲುವಿನ ಓಟ ಮುನ್ನಡೆಸಲು ಸಜ್ಜಾಗಿದ್ದರೆ, ಅಮೆರಿಕ ವಿರುದ್ಧ ಸೋತು ಶರಣಾಗಿರುವ ಪಾಕಿಸ್ತಾನವು ಪುಟಿದೇಳುವ ಭರದಲ್ಲಿದೆ. ಈ ಬಾರಿ ವಿಶ್ವಕಪ್ ಕುತೂಹಲಕಾರಿಯಿದ್ದು, ಬಹುತೇಕ ಎಲ್ಲ ತಂಡಗಳೂ ಒಂದು ಪಂದ್ಯ ಮುಗಿಸಿ ಎರಡನೇ ಪಂದ್ಯಕ್ಕೆ ರೆಡಿಯಾಗುತ್ತಿವೆ. ಈ ಮಧ್ಯೆ ಭಾನುವಾರದ ಪಂದ್ಯದಲ್ಲಿ ಭಾರತ ಹಾಗೂ ಪಾಕಿಸ್ತಾನ ಸೆಣಸಲಿದ್ದು, ರೋಚಕತೆಗೆ ನಾಂದಿ ಹಾಡಿದೆ.

ಭಾರತಕ್ಕೆ ಆತ್ಮವಿಶ್ವಾಸ: ಪಾಕಿಸ್ತಾನ ಹಾಗೂ ಭಾರತ ಪಂದ್ಯವು ಪ್ರತಿಬಾರಿ ರೋಚಕತೆಗೆ ಉದಾಹರಣೆಯಾಗಿರುತ್ತದೆ. ಅದರಲ್ಲೂ ಟಿ20 ಮಾದರಿಯ ವಿಶ್ವಕಪ್‌ನಲ್ಲಿ ಭಾರತವೇ ಪಾರಮ್ಯ ವಹಿಸಿದ್ದು, ಈ ಬಾರಿ ಇನ್ನಷ್ಟು ಕುತೂಹಲಕಾರಿಯಾಗಿದೆ. ಇದುವರೆಗೂ 6 ಪಂದ್ಯದಲ್ಲಿ ಬಹು ತಂಡಗಳು ಮುಖಾಮುಖಿಯಾಗಿದ್ದು, ಅದರಲ್ಲಿ 6 ಬಾರಿ ಭಾರತ ಗೆದ್ದಿದೆ. ಹೀಗಾಗಿ ಭಾರತಕ್ಕೆ ಆತ್ಮವಿಶ್ವಾಸ ತಂದಿದೆ. ಬಲಿಷ್ಠ ಬೌಲಿಂಗ್ ಪಡೆ ಹೊಂದಿರುವ ಭಾರತಕ್ಕೆ ಬುಮ್ರಾ, ಸಿರಾಜ್ ಹಾಗೂ ಹಾರ್ದಿಕ್ ಮತ್ತೆ ಫಾರ್ಮ್‌ಗೆ ಬಂದಿದ್ದು ಬಲ ತಂದಿದೆ. ಇನ್ನು ಬ್ಯಾಟಿಂಗ್ ವಿಭಾಗದಲ್ಲಿ ನಾಯಕ ರೋಹಿತ್ ತಮ್ಮ ಏಕದಿನ ವಿಶ್ವಕಪ್ ಫಾರ್ಮ್ ಅನ್ನು ಮುಂದುವರೆಸಿದರೆ, ಇನ್ನೊಂಡೆ ವಿರಾಟ್ ಐಪಿಎಲ್ ಫಾರ್ಮ್‌ನಿಂದ ಆತ್ಮವಿಶ್ವಾಸದಲ್ಲಿ ಇದ್ದಾರೆ. ಉಳಿದಂತೆ ಪಂತ್ ಸಹ ತಮ್ಮ ಹಳೆಯ ಫಾರ್ಮ್‌ಗೆ ಬಂದಿದ್ದಾರೆ.

ಪಾಕ್‌ಗೆ ಬೌಲಿಂಗ್ ಪಡೆಯ ಬಲ: ಮೊದಲ ಪಂದ್ಯದಲ್ಲಿ ಸೋತರು, ಪಾಕ್ ತಂಡದ ಬೌಲಿಂಗ್ ವಿಭಾಗ ಉತ್ತಮ ಕೆಲಸ ನಿಭಾಯಿಸಿತ್ತು. ಪ್ರಮುಖವಾಗಿ ಶಾಹಿನ್‌ಶಾ ಆಫ್ರಿದಿ, ಹ್ಯಾರೀಸ್ ರೌಫ್ ಮತ್ತು ಆಮೀರ್ ಪಾಕ್ ತಂಡದ ಬೌಲಿಂಗ್‌ನಲ್ಲಿ ಬಲ ತಂದಿದ್ದಾರೆ. ಆದರೆ ಬ್ಯಾಟಿಂಗ್ ವಿಭಾಗದಲ್ಲಿ ತಂಡ ಎಡವುತ್ತಿದ್ದು, ನಾಯಕ ಬಾಬರ್ ಆಝಂ ಅವರ ನಿಧಾನಗತಿ ಆಟ ತಂಡಕ್ಕೆ ಕಗ್ಗಂಟಾಗಿ ನಿಂತಿದೆ. ರಿಜ್ವಾನ್ ಅವರ ಫಾರ್ಮ್, ಫಕರ್ ಜಮಾನ್ ಸಹ ಎಡವುತ್ತಿದ್ದಾರೆ. ಅದರಿಂದಾಗಿ ತಂಡದಲ್ಲಿ ಆತ್ಮವಿಶ್ವಾಸ ಕಡೆಮೆಯಾಗಿದೆ ಎನ್ನಲಾಗಿದೆ.

ಪಾಕ್‌ಗೆ ಮಾಡು-ಮಡಿ ಪಂದ್ಯ: ಈ ಬಾರಿ ವಿಶ್ವಕಪ್ ವಿಶಿಷ್ಠ ವಿನ್ಯಾಸ ಹೊಂದಿದ್ದು, 4 ಗುಂಪಿನ ಮೇಲಿನ ಎರಡು ತಂಡಗಳು ಮಾತ್ರ ಕ್ವಾಲೀಫೈ ಆಗಲಿವೆ. ನೂತನ ತಂಡ ಅಮೆರಿಕ ಈಗಾಗಲೇ ಆಡಿರುವ ಎರಡೂ ಪಂದ್ಯವನ್ನು ಗೆದ್ದು ಟೇಬಲ್ ಟಾಪರ್ ಆಗಿದೆ. ಇನ್ನೊಂದೆಡೆ ಭಾರತ ಐರ್ಲೆಂಡ್ ವಿರುದ್ಧದ ಪಂದ್ಯವನ್ನು ಭಾರೀ ಅಂತರದಿಂದ ಗೆದ್ದಿದ್ದು, ರನ್‌ರೇಟ್‌ನಲ್ಲಿ ಭಾರೀ ಮುಂದಿದೆ. ಹೀಗಾಗಿ ಪಾಕ್ ಪಾಲಿಗೆ ಇದು ನಿರ್ಣಾಯಕ ಪಂದ್ಯ ಎನ್ನಲಾಗುತ್ತಿದೆ.

ಪಿಚ್ ರಿಪೋರ್ಟ್: ವಿಶ್ವಕಪ್ ನಡೆಯಲಿರುವ ಎಲ್ಲ ಪಿಚ್‌ಗಳು ಈ ಬಾರಿ ಬ್ಯಾಟರ್‌ಗಳ ಪಾಲಿಗೆ ಕಗ್ಗಂಟಾಗಿವೆ. ನಿಧಾನಗತಿಯಿಂದ ಮಾಡಿರುವ ಪಿಚ್ ಅನ್ನು ಬೌಲರ್‌ಗಳು ಅದೆ ರೀತಿಯಲ್ಲಿ ಬಳಿಸಿಕೊಳ್ಳುತ್ತಿದ್ದಾರೆ, ಹೀಗಾಗಿ ನಡೆಯಲಿರುವ ಈ ಪಂದ್ಯದಲ್ಲಿ ರನ್‌ಗಳು ಕಡಿಮೆಯಾಗಲಿವೆ ಎನ್ನಲಾಗಿದೆ. ಐಸಿಸಿ ಪಿಚ್ ಬಗ್ಗೆ ಇರುವ ಅಸಮಾಧಾನಕ್ಕೆ ಉತ್ತರ ನೀಡಿದ್ದು, ಪಿಚ್‌ಗಳನ್ನು ಅಭಿವೃದ್ಧಿ ಮಾಡುವುದಾಗಿ ಹೇಳಿದೆ. ಹಾಗಾಗಿ ಮೊದಲು ಬ್ಯಾಟಿಂಗ್ ಮಾಡುವುದು ಉತ್ತಮ ಎನ್ನಲಾಗಿದೆ.

ರೋಹಿತ್ ಆಡುವುದು ಅನುಮಾನ: ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಭುಜಕ್ಕೆ ಚೆಂಡಿನೇಟು ತಿಂದು ಗಾಯಗೊಂಡು ಅರ್ಧಕ್ಕೆ ಬ್ಯಾಟಿಂಗ್ ನಿಲ್ಲಿಸಿದ್ದ ಟೀಮ್ ಇಂಡಿಯಾದ ನಾಯಕ ರೋಹಿತ್ ಶರ್ಮ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಆಡು ವುದು ಅನುಮಾನ ಎನ್ನಲಾಗಿದೆ. ಇದು ತಂಡಕ್ಕೆ ಚಿಂತೆಗೀಡು ಮಾಡಿದೆ. ಈ ಮೊದಲೇ ಗಾಯಗೊಂಡಿದ್ದ ರೋಹಿತ್ ಇದೀಗ ಅಭ್ಯಾಸ ಮಡುವ ವೇಳೆ ಮತ್ತೆ ಗಾಯಕ್ಕೆ ತುತ್ತಾಗಿದ್ದಾರೆ. ಪಾಕ್ ಪಂದ್ಯಕ್ಕೂ ಮುನ್ನ ಬ್ಯಾಟಿಂಗ್ ಅಭ್ಯಾಸ ನಡೆಸುತ್ತಿದ್ದ ವೇಳೆ ಚೆಂಡು ರೋಹಿತ್ ಬೆರಳಿಗೆ ತಾಗಿದೆ. ಮೂಲ ಗಳ ಪ್ರಕಾರ ಅವರು ಗಾಯದಿಂದ ಚೇತರಿಸಿಕೊಂಡಿಲ್ಲ ಎನ್ನಲಾಗಿದೆ. ಆದರೆ, ಈ ಬಗ್ಗೆ ಬಿಸಿಸಿಐ ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

ಗೆಲುವಿನೊಂದಿಗೆ ಅಂತ್ಯಗೊಂಡ ಪ್ರಜ್ಞಾನಂದ ಚದುರಂಗದಾಟ

ಸ್ಟಾವೆಂಜರ್: ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯಲ್ಲಿ ಭಾರತದ ಆರ್.ಪ್ರಜ್ಞಾನಂದ, ಅಮೆರಿಕದ ಹಿಕಾರು ನಕಾಮುರಾ ವಿರುದ್ಧ ಗೆಲುವಿನ ಮೂಲಕ ಅಭಿಯಾನ ಅಂತ್ಯಗೊಳಿಸಿದ್ದು, ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್ಸನ್ ಅವರು ನಿರೀಕ್ಷೆಯಂತೆ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಅಂತಿಮ ಹಾಗೂ 10ನೇ ಸುತ್ತಿನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರನ್ನು ಸೋಲಿಸಿದ ಕಾರ್ಲ್ಸನ್ 17.5 ಪಾಯಿಂಟ್ಸ್‌ಗಳೊಡನೆ ಅಗ್ರಸ್ಥಾನ ಪಡೆದು ಸುಮಾರು ₹54 ಲಕ್ಷ ಬಹುಮಾನ ಪಡೆದರು. ಈ ವಿಭಿನ್ನ ಟೂರ್ನಿಯಲ್ಲಿ ನಿಗದಿತ ಅವಧಿಯಿರುವ ಕ್ಲಾಸಿಕಲ್ ಮಾದರಿಯ ಪಂದ್ಯ 'ಡ್ರಾ' ಆದಲ್ಲಿ, ಅತ್ಯಲ್ಪ ಅವಧಿಯ ಆರ್ಮ್‌ಗೆಡನ್ ಮೂಲಕ ಫಲಿತಾಂಶ ನಿರ್ಧರಿಸಲಾಗುತ್ತದೆ. ಅಂತಿಮ ಸುತ್ತಿನಲ್ಲಿ ಪ್ರಜ್ಞಾನಂದ ಎದುರು 1.5–1 ಅಂತರದಲ್ಲಿ ಸೋತರೂ ನಕಾಮುರಾ ಅವರು 15.5 ಪಾಯಿಂಟ್ಸ್ ಪಡೆದು ಎರಡನೇ ಸ್ಥಾನ ಉಳಿಸಿಕೊಂಡರು. ಪ್ರಜ್ಞಾನಂದ ಅವರು 14.5 ಪಾಯಿಂಟ್‌ಗಳೊಡನೆ ಮೂರನೇ ಸ್ಥಾನದಲ್ಲಿ ಸ್ಪರ್ಧೆ ಮುಗಿಸಿದರು.

ಟೂರ್ನಿಯಲ್ಲಿ ಸಾಧನೆ ಮಾಡಿದ ಪ್ರಜ್ಞಾನಂದ: ಈ ಬಾರಿಯ ನಾರ್ವೆ ಚೆಸ್ ಟೂರ್ನಿಯಲ್ಲಿ ಪ್ರಜ್ಞಾನಂದ ವಿಶ್ವದ ಮೊದಲ ಮೂವರು ಅಗ್ರಮಾನ್ಯ ಆಟಗಾರನನ್ನು ಸೋಲಿಸಿದ್ದು, ಅವರು ಮೂವರು ಅಗ್ರಮಾನ್ಯ ಆಟಗಾರನನ್ನು ಸೋಲಿಸಿದ ಮೊದಲ ಆಟಗಾರ ಎಂಬ ಶ್ರೇಯಕ್ಕೂ ಪಾತ್ರರಾದರು. ಈ ಹಿಂದಿನ ಸುತ್ತುಗಳಲ್ಲಿ ಅವರು ಕಾರ್ಲ್ಸನ್ ಮತ್ತು ಕರುವಾನ ಅವರನ್ನು ಕ್ಲಾಸಿಕಲ್ ಮಾದರಿಯಲ್ಲೇ (ಟೈಮ್ ಕಂಟ್ರೋಲ್) ಸೋಲಿಸಿದ್ದರು.

ಮುಂಜಾಗ್ರತಾ ಕ್ರಮಕ್ಕೆ ಮುಂದಾದ ಕೇಂದ್ರ! ತೊಗರಿ, ಕಡಲೆ ಬೇಳೆ, ಈರುಳ್ಳಿ, ಆಲೂಗಡ್ಡೆ ಅಭಾವ ಸಾಧ್ಯತೆ

ದೆಹಲಿ: 2023ರಲ್ಲಿ ಮುಂಗಾರು ಋತು ಸೇರಿದಂತೆ ಇಡೀ ವರ್ಷ ದೇಶಾದ್ಯಂತ ಮುಂಗಾರು ಕೈಕೊಟ್ಟ ಪರಿಣಾಮ, ಆಹಾರ ಧಾನ್ಯಗಳ ಉತ್ಪಾದನೆ ಮೇಲೆ ಪರಿಣಾಮ ಬೀರಿದೆ. ದೇಶದ ಕೃಷಿ ಚಟುವಟಿಕೆಗಳಲ್ಲಿ ಸಾಕಷ್ಟು ಹಿನ್ನಡೆಯಾಗಿದೆ. ಇದು ದೇಶದ ಜನರ ಅಗತ್ಯ ದಿನಸಿ ವಸ್ತುಗಳಾದ ತೊಗರಿಬೇಳೆ, ಕಡಲೆ ಬೇಳೆ, ಈರುಳ್ಳಿ, ಆಲೂಗಡ್ಡೆ ಹಾಗೂ ಖಾದ್ಯತೈಲಗಳ ಉತ್ಪಾದನೆ ಮತ್ತು ಸಂಗ್ರಹದ ಮೇಲೆ ತೀವ್ರ ಪರಿಣಾಮ ಬೀರಲಿದೆ. ಇದರಿಂದ ಮುಂಬರುವ ದಿನಗಳಲ್ಲಿ ದಿನಸಿ ಪದಾರ್ಥಗಳ ಧಾರಣೆ ಏರಿಕೆ ಆಗುವ ಸಾಧ್ಯತೆ ಇದೆ ಎಂಬ ಸೂಚನೆಯನ್ನು ಕೇಂದ್ರ ಸರಕಾರ ನೀಡಿದೆ. ಆಹಾರ ಹಣದುಬ್ಬರ ತಗ್ಗಿಸುವ ಸಲುವಾಗಿ ಕೆಲವು ಪ್ರಮುಖ ಅಗತ್ಯ ವಸ್ತುಗಳ ಲಭ್ಯತೆ ಮತ್ತು ಬೆಲೆಗಳ ವಿಚಾರದಲ್ಲಿ ಕೇಂದ್ರ ದೊಡ್ಡ ಮಟ್ಟದಲ್ಲಿ ಮೇಲ್ವಿಚಾರಣೆ ನಡೆಸುತ್ತಿದೆ. ಉನ್ನತ ಅಧಿಕಾರಿಗಳು ಪ್ರತಿ ವಾರ ಆಹಾರ ಸಾಮಗ್ರಿಗಳ ಸಂಗ್ರಹ ಪ್ರಮಾಣ ಕುರಿತು ಪರಿಶೀಲನೆ ನಡೆಸುತ್ತಿದ್ದಾರೆ. ಶೀಘ್ರವೇ ಕೇಂದ್ರ ಸರಕಾರ ಕಡಲೆಬೇಳೆ ಹಾಗೂ ತೊಗರಿ ಬೇಳೆ ಆಮದು ಪ್ರಮಾಣ ಹೆಚ್ಚಿಸುವ ಸಾಧ್ಯತೆ ಇದೆ ಎಂದು ವರದಿ ತಿಳಿಸಿದೆ.

26 ಎಸೆತಗಳಲ್ಲಿ ಶತಕ ಅಭಿಷೇಕ್ ಶರ್ಮ ದಾಖಲೆ

ದೆಹಲಿ: ಐಪಿಎಲ್‌ನಲ್ಲಿ ಮಿಂಚಿದ್ದ ಅಭಿಷೇಕ್ ಶರ್ಮ ಗುರ್ಗಾಂವ್‌ನಲ್ಲಿ ನಡೆದ ಕ್ಲಬ್ ಕ್ರಿಕೆಟ್ ಟೂರ್ನಿಯಲ್ಲಿ ಕೇವಲ 26 ಎಸೆತಗಳಲ್ಲಿ ಸೆಂಚುರಿ ಸಿಡಿಸಿದ್ದು ದೇಶಿ ಕ್ರಿಕೆಟ್‌ನಲ್ಲಿ ದಾಖಲೆ ಬರೆದಿದ್ದಾರೆ.

ಶನಿವಾರ ನಡೆದ ಈ ಪಂದ್ಯದಲ್ಲಿ ಮಾರಿಯೋ ಕ್ರಿಕೆಟ್ ಕ್ಲಬ್ ಮತ್ತು ಪಂಟರ್ಸ್ ಇಲೆವೆನ್ ತಂಡಗಳು ಮುಖಾ ಮುಖಿಯಾಗಿದ್ದು, ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮಾರಿಯೋ ಕ್ರಿಕೆಟ್ ಕ್ಲಬ್‌ಗೆ ಆರಂಭಿಕ ಬ್ಯಾಟರ್ ಕೃನಾಲ್ ಸಿಂಗ್ 21 ಎಸೆತಗಳಲ್ಲಿ 60 ರನ್ ಬಾರಿಸಿದರೆ, ನದೀಮ್ ಖಾನ್ 32 ಎಸೆತಗಳಲ್ಲಿ ಅಜೇಯ 74 ರನ್ ಗಳಿಸಿದರು. ಆ ಮೂಲಕ ಮಾರಿಯೋ ಕ್ಲಬ್ 20 ಓವರ್‌ಗಳಲ್ಲಿ 249 ರನ್ ಕಲೆಹಾಕಿತು.

ಬರೋಬ್ಬರಿ 14 ಸಿಕ್ಸರ್‌ಗಳು

250 ರನ್‌ಗಳ ಕಠಿಣ ಗುರಿ ಪಡೆದ ಪಂಟರ್ಸ್ ಇಲೆವೆನ್ ಪರ ಅಭಿಷೇಕ್ ಶರ್ಮ ಆರಂಭಿಕರಾಗಿ ಕಣಕ್ಕಿಳಿದರು.

ಮೊದಲ ಓವರ್‌ನಿಂದಲೇ ಸ್ಫೋಟಕ ಬ್ಯಾಟಿಂಗ್ ಮಾಡಿದ ಅವರು ಮಾರಿಯೋ ಕ್ಲಬ್ ಬೌಲರ್‌ಗಳ ಬೆಂಡೆತ್ತಿದರು. ಪರಿಣಾಮ ಕೇವಲ 25 ಎಸೆತಗಳಲ್ಲಿ ಅಭಿಷೇಕ್ ಭರ್ಜರಿ ಶತಕ ಬಾರಿಸಿದ್ದಾರೆ. ಈ ಭರ್ಜರಿ ಶತಕದ ಇನಿಂಗ್ಸ್‌ನಲ್ಲಿ ಬರೋಬ್ಬರಿ 14 ಸಿಕ್ಸ್‌ಗಳನ್ನು ಸಿಡಿಸಿದ್ದು, 4 ಬೌಂಡರಗಳೂ ಬಾರಿಸಿದ್ದಾರೆ. ಅಂದರೆ ಬೌಂಡರಿಗಳಿಂದಲೇ ಅಭಿಷೇಕ್ ಶರ್ಮ 100 ರನ್ ಪೂರೈಸಿದ್ದು, ದಾಖಲೆ ಬರೆದಿದ್ದಾರೆ. ಕೇವಲ 26 ಎಸೆತಗಳಲ್ಲಿ 103 ರನ್ ಬಾರಿಸಿದ ಅಭಿಷೇಕ್ ಶರ್ಮ ಅವರ ವಿಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಪಂಟರ್ಸ್ ಇಲೆವೆನ್ ತಂಡವು 18.1 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 250 ರನ್‌ಗಳ ಗುರಿ ಮುಟ್ಟಿತು. ಈ ಮೂಲಕ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಫ್ರೆಂಚ್ ಓಪನ್ ಪಟ್ಟ ಅಲಂಕರಿಸಿದ ಇಗಾ

ದೆಹಲಿ: ಈ ಬಾರಿಯ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಟೂರ್ನಿಯನ್ನು ಇಗಾ ಸ್ವಿಯಾಟೆಕ್ ಗೆದ್ದಿದ್ದು, ಸತತ ಮೂರನೇ ಬಾರಿಗೆ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಜೂನ್ 8 ರ ಶನಿವಾರ, ಫಿಲಿಪ್ -ಚಾಟ್ರಿಯರ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಇಟಲಿಯ ಜಾಸ್ಮಿನ್ ಪಯೋಲಿನಿ ಅವರನ್ನು ನೇರ ಸೆಟ್‌ಗಳಲ್ಲಿ ಸೋಲಿಸಿದ್ದು, ಆ ಮೂಲಕ ವಿಶ್ವದ ನಂ.1 ಆಟಗಾರ್ತಿ ಇಗಾ ಮತ್ತೊಮ್ಮೆ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಪೋಲೆಂಡ್ ತನ್ನ ಇಟಾಲಿಯನ್ ಎದುರಾಳಿಯ ವಿರುದ್ಧ 6–2, 6–1 ಸೆಟ್‌ಗಳಿಂದ ಜಯಗಳಿಸಿತು.

ಮೋನಿಕಾ ಸೆಲೆಸ್ ಮತ್ತು ಜಸ್ಟಿನ್ ಹೆನಿನ್ ನಂತರ ಸತತ 3 ವರ್ಷಗಳಲ್ಲಿ ಪ್ರಶಸ್ತಿಯನ್ನು ಗೆದ್ದ ಮೂರನೇ ಮಹಿಳಾ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಸೆಲೆಸ್ 1990–92ರ ಅವಧಿಯಲ್ಲಿ ಈ ಸಾಧನೆ ಮಾಡಿದ್ದರೆ, ಹೆನಿನ್ 2005–2007ರ ಅವಧಿಯಲ್ಲಿ ಈ ಸಾಧನೆ ಮಾಡಿದ್ದರು. ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ತನ್ನ ನಾಲ್ಕನೇ ಚಾಂಪಿಯನ್‌ಶಿಪ್‌ನೊಂದಿಗೆ, ಸ್ವಿಯಾಟೆಕ್ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್

ಪ್ರಶಸ್ತಿಯನ್ನು (7) ದಂತಕಥೆ ಕ್ರಿಸ್ ಎವರ್ಟ್ ಅವರ ಪಟ್ಟಿಗೆ ಹತ್ತಿರದಲ್ಲಿದ್ದಾರೆ. ಅಲ್ಲದೆ, ಅವರು ಸೆರೆನಾ ವಿಲಿಯಮ್ಸ್ ನಂತರ ಸತತ 3 ವರ್ಷ ಗ್ರಾ ್ಯಂಡ್ ಸ್ಲಾಮ್ ಗೆದ್ದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸ್ವಿಯಾಟೆಕ್ ರೊಲ್ಯಾಂಡ್ ಗ್ಯಾರೋಸ್‌ನಲ್ಲಿ 4 ಮಹಿಳಾ ಸಿಂಗಲ್ಸ್ ಪ್ರಶಸ್ತಿಗಳನ್ನು ಗೆದ್ದ ಅತ್ಯಂತ ಕಿರಿಯ ಆಟಗಾರ್ತಿ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಅವರು 25 ನೇ ವಯಸ್ಸಿನಲ್ಲಿ ಈ ಸಾಧನೆ ಮಾಡಿದ ಹೆನಿನ್ ಅವರ ದಾಖಲೆಯನ್ನು ಮುರಿದರು.

ಉಗ್ರರ ನಂಟು; ನಾಲ್ಕು ಸರಕಾರಿ ನೌಕರರ ವಜಾ

ಜಮ್ಮು: ಉಗ್ರರೊಂದಿಗೆ ನಂಟು ಹೊಂದಿದ್ದ ಆರೋಪದಡಿ ಜಮ್ಮು–ಕಾಶ್ಮೀರದ ಇಬ್ಬರು ಪೊಲೀಸರು ಸೇರಿದಂತೆ ನಾಲ್ವರು ಸರಕಾರಿ ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಕಾನ್‌ಸ್ಟೇಬಲ್ ಅಬ್ದುಲ್ ರೆಹಮಾನ್ ದರ್ ಮತ್ತು ಗುಲಾಮ್ ರಸೂಲ್ ಭಟ್, ಶಿಕ್ಷಕ ಶಬೀರ್ ಅಹಮದ್ ಮತ್ತು ಜಲಶಕ್ತಿ ಇಲಾಖೆಯ ಸಹಾಯಕ ಲೈನ್ ಮ್ಯಾನ್ ಅನಯತುಲ್ಲಾ ಶಾ ಪಿರ್ಜಾದಾ ಸೇವೆಯಿಂದ ವಜಾಗೊಂಡವರು. ಸಂವಿಧಾನದ 311ನೇ ವಿಧಿಯಡಿ ಕ್ರಮ ಕೈಗೊಳ್ಳಲಾಗಿದೆ ಎಂದು ಜಮ್ಮು– ಕಾಶ್ಮೀರ ಆಡಳಿತ ಶನಿವಾರ ತಿಳಿಸಿದೆ.

ಕಿಸಾನ್ ಸಮ್ಮಾನ್ ನಿಧಿ ಹೆಚ್ಚಳ

ಜೈಪುರ: ರಾಜಸ್ಥಾನ ವಿಧಾನಸಭೆಗೆ ಚುನಾವಣೆ ನಡೆದ ವೇಳೆ ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಕಿಸಾನ್ ಸಮ್ಮಾನ್ ನಿಧಿ ಮೊತ್ತ ಹೆಚ್ಚಿಸುವುದಾಗಿ ಭರವಸೆ ನೀಡಿತ್ತು. ಅದರಂತೆ, ರಾಜ್ಯದಲ್ಲಿನ ಬಿಜೆಪಿ ಸರಕಾರ ಈಗ ಕಿಸಾನ್ ಸಮ್ಮಾನ್ ನಿಧಿಯ ಮೊತ್ತವನ್ನು 2 ಸಾವಿರ ರು.ಗಳಷ್ಟು ಹೆಚ್ಚಳ ಮಾಡಿದೆ. ಕೇಂದ್ರ ಸರಕಾರದಿಂದ ರೈತರಿಗೆ ವರ್ಷಕ್ಕೆ 6 ಸಾವಿರ ರು. ಕಿಸಾನ್ ಸಮ್ಮಾನ್ ನಿಧಿ ದೊರೆಯುತ್ತಿದೆ. ಈ ಮೊತ್ತಕ್ಕೆ ರಾಜಸ್ಥಾನ ಸರಕಾರ 2 ಸಾವಿರ ರು. ಸೇರಿಸಿಕೊಡುವುದರಿಂದ ರಾಜಸ್ಥಾನ ರೈತರಿಗೆ ಸಿಗುವ ಮೊತ್ತ 8 ಸಾವಿರ ರು.ಗಳಿಗೇರಿದೆ. ಈ ಕುರಿತು ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ 'ಎಕ್ಸ್' ಖಾತೆ ಮೂಲಕ ಮಾಹಿತಿ ನೀಡಿದ್ದಾರೆ.